ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere | ಮಂಗಳೂರು Mangaluru | ಬಾಗಲಕೋಟೆ Bagalkot | ಬೆಳಗಾವಿ Belagavi | ಸಂಪುಟ Valume 94 | ಸಂಚಿಕೆ Issue 19 | ಪುಟ Pages 10+II | ಶುಕ್ರವಾರ ೮ ಮೇ 2026 | www.epaper.samyukthakarnataka.com Samyuktha Karnataka @samyuktakarnat2 | ₹ 5-00

(Goa-7-00)

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

ಕನ್ನಡಿಗರ ಸಾಕ್ಷಿಪ್ರಜ್ಞೆ

REGISTERED NO. DWD/104/2024-26,RNI.REG.NO.3544/1957



ಸಂಯುಕ್ತ ಕರ್ನಾಟಕ

ಮೇ 15 ರಂದು ‘ಪಿಂಚಣಿ ಅದಾಲತ್’

ಬಳ್ಳಾರಿ: ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಪಿಂಚಣಿದಾರರ ಮತ್ತು ಜಿಪಿಎಫ್ ಚಂದಾದಾರರ ಕುಂದುಕೊರತೆಗಳನ್ನು ಆಲಿಸಿ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮೇ 15 ರಂದು ವಿಶೇಷ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಖಜಾನೆ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಮೇ 15 ರಂದು ಜಿಲ್ಲಾಡಳಿತ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಪಿಂಚಣಿ ಅದಾಲತ್ ಹಾಗೂ ಮಧ್ಯಾಹ್ನ 02.30 ಗಂಟೆಗೆ ಜಿಪಿಎಫ್ ಅದಾಲತ್ ಒಳಗೊಂಡು ಎರಡು ಪ್ರತ್ಯೇಕ ಅವಧಿಗಳಲ್ಲಿ ಈ ಅದಾಲತ್ ಆಯೋಜಿಸಲಾಗಿದೆ. ಕಲಬುರಗಿ ವಿಭಾಗ ವ್ಯಾಪ್ತಿಯ ಬಳ್ಳಾರಿ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯ ನಿವೃತ್ತಿ ಪಿಂಚಣಿದಾರರು, ಕುಟುಂಬ ಪಿಂಚಣಿದಾರರು, ಜಿಪಿಎಫ್ ಚಂದಾದಾರರು ಸಂಬಂಧಿಸಿದ ಆಯಾ ಜಿಲ್ಲಾಡಳಿತ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಮೂಲಕವೂ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲು ಅವಕಾಶ ಕಲಿಸಲಾಗಿದೆ.

ಬೆಂಗಳೂರಿನ ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣೆ ಖಜಾನೆಯ ಅಪರ ನಿರ್ದೇಶಕರು ಹಾಗೂ ಮಹಾಲೇಖಪಾಲರ ಕಚೇರಿಯ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಈ ಅದಾಲತ್ ನಡೆಯಲಿದೆ. ಪಿಂಚಣಿ ಪಾವತಿಗೆ ಸಂಬಂಧಿಸಿದಂತೆ ವಿಳಂಬ ಅಥವಾ ಇತರೆ ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರು ಅದಾಲತ್ ನ ಈ ಸುವರ್ಣಾವಕಾಶ ಬಳಸಿಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಳ್ಳಾರಿ: ಮೈಸೂರಿನಲ್ಲಿರುವ ಭಾರತ ಸರ್ಕಾರದ ರಸಾಯನ, ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್), ತನ್ನ ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರದಲ್ಲಿ 2026-27ನೇ ಸಾಲಿನ ವಿವಿಧ ಡಿಪ್ಲೊಮಾ ಕೋರ್ಸ್ ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಪಾಲಿಮರ್, ಪೆಟ್ರೋಕೆಮಿಕಲ್ ಮತ್ತು ಪ್ಲಾಸ್ಟಿಕ್ ಕೈಗಾರಿಕಾ ವಲಯದಲ್ಲಿ ಜಾಗತಿಕ ಮಟ್ಟದ ಬೇಡಿಕೆ ಇರುವುದರಿಂದ, ವಿದ್ಯಾರ್ಥಿಗಳಿಗೆ ಉದ್ಯೋಗದ ಖಚಿತತೆ ನೀಡುವ ದೃಷ್ಟಿಯಿಂದ ಈ ತರಬೇತಿಗಳನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕರು ತಿಳಿಸಿದ್ದಾರೆ. ಪಿಯುಸಿ (ವಿಜ್ಞಾನ) ಅಥವಾ ಐಟಿಐ ತೇರ್ಗಡೆಯಾದ ವಿದ್ಯಾರ್ಥಿಗಳು ನೇರವಾಗಿ ಡಿಪ್ಲೊಮಾ ಎರಡನೇ ವರ್ಷಕ್ಕೆ ಪ್ರವೇಶ ಪಡೆಯಲು ಅವಕಾಶವಿದೆ. ಅರ್ಜಿ ಸಲ್ಲಿಸಲು ಆನ್ ಲೈನ್ ವೆಬ್ ಸೈಟ್ (https://cipet26.onlineregistrationform.org/CIPET/) CxÀªÀ (http://www.cipet.gov.in) ಗೆ ಭೇಟಿ ನೀಡಬಹುದು. ಮೇ 28 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಸಕ್ತ ವಿದ್ಯಾರ್ಥಿಗಳು ಮೊ.9480253024 ಅಥವಾ 9791431827 ಅನ್ನು ಸಂಪರ್ಕಿಸಬಹುದಾಗಿದೆ.

ಜ.3 ರಂದು ಅನಾವರಣಗೊಳ್ಳಬೇಕಿದ್ದ ಮೂರ್ತಿ । ವೃತ್ತ, ರಸ್ತೆ ಅಗಲೀಕರಣಕ್ಕೆ 7 ಕೋಟಿ । ಪುತ್ಥಳಿ ನಿರ್ಮಾಣಕ್ಕೆ ಪ್ರತ್ಯೇಕ 1.10 ಕೋಟಿ ವ್ಯಯ

ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ ಯಾವಾಗ?

■ ಮಲ್ಲಿಕಾರ್ಜುನ ಬಿಲ್ಲರಾಗಿ

ಬಳ್ಳಾರಿ : ಮಹರ್ಷಿ ವಾಲ್ಮೀಕಿ ಬೃಹತ್ ಪುತ್ಥಳಿ ಬಳ್ಳಾರಿಯ ಹೃದಯ ಭಾಗದಲ್ಲಿ ತಲೆ ಎತ್ತಿದೆ. ಆದರೆ ಎರಡು ಗುಂಪುಗಳ ನಡುವೆ ಉಂಟಾಗಿದ್ದ ಘರ್ಷಣೆಯಿಂದಾಗಿ ಸ್ಥಗಿತವಾದ ಅನಾವರಣ ಕಾರ್ಯ ಐದು ತಿಂಗಳಿಂದ ಸ್ಥಗಿತವಾಗಿದ್ದು, ಈ ಪುತ್ಥಳಿ ಉದ್ಘಾಟನೆ ಯಾವಾಗ? ಎನ್ನುವ ಯಕ್ಷ ಪ್ರಶ್ನೆ ಕಾಡುತ್ತಿದೆ.

ಬಳ್ಳಾರಿಯಲ್ಲಿ ಈ ಹಿಂದೆಯೇ ಇದ್ದ ಎಸ್ಪಿ ಸರ್ಕಲ್ (ವಾಲ್ಮೀಕಿ ವೃತ್ತ) ದಲ್ಲಿಯೇ ವಿಶಾಲವಾದ ವೃತ್ತ ಹಾಗೂ ಬೃಹತ್ ಗಾತ್ರದ ಮಹರ್ಷಿ ವಾಲ್ಮೀಕಿ ಮೂರ್ತಿಯನ್ನು ನಿರ್ಮಿಸಲಾಗಿದೆ. ಜ.3ರಂದು ಅನಾವರಣಗೊಳಿಸಲು ಎಲ್ಲ ಸಿದ್ಧತೆಗಳು ನಡೆದಿದ್ದವು. ಆದರೆ ಬ್ಯಾನರ್ ಕಟ್ಟುವ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಉಂಟಾಗಿದ್ದ ಗಲಾಟೆ ವಿಕೋಪಕ್ಕೆ ತೆರಳಿದ್ದರ ಪರಿಣಾಮ ಈ ಬೃಹತ್ ಕಾರ್ಯಕ್ರಮ ಮುಂದೂಡಲಾಗಿತ್ತು. ಘಟನೆ ನಡೆದು ಐದು ತಿಂಗಳು ಕಳೆಯುತ್ತಿದ್ದರೂ ಇದು ಇನ್ನೂ ಈಡೇರಿಲ್ಲ. ಹೀಗಾಗಿ ನಿರ್ಮಿತ ವಾಲ್ಮೀಕಿ ಪುತ್ಥಳಿ ಅನಾವರಣವಾಗದೇ ಸ್ಥಗಿತಗೊಂಡಿದೆ.

ಬಹು ನಿರೀಕ್ಷಿತ ಕಾರ್ಯಕ್ರಮ: ನಗರ ಶಾಸಕ ನಾರಾ ಭರತರೆಡ್ಡಿ ವಿಶೇಷ ಆಸ್ಥೆ ವಹಿಸಿ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ವಾಲ್ಮೀಕಿ ವೃತ್ತ, ರಸ್ತೆ ಅತಿಕ್ರಮಿತ ಎಲ್ಲ ಕಟ್ಟಡಗಳನ್ನು ತೆರವು ಮಾಡಿ ರಸ್ತೆ, ವೃತ್ತವನ್ನು ಅಗಲೀಕರಣಗೊಳಿಸಿ, ವಾಲ್ಮೀಕಿ ವೃತ್ತವನ್ನು ವಿಶಿಷ್ಟವಾಗಿ ನಿರ್ಮಿಸಲಾಗಿತ್ತು. ಒಟ್ಟು 7 ಕೋಟಿ ರೂ.ಗಳ ವೆಚ್ಚದಲ್ಲಿ ಸರ್ಕಲ್ ನಿರ್ಮಾಣ, ರಸ್ತೆ ಅಗಲೀಕರಣಕ್ಕೆ ವ್ಯಯಿಸಲಾಗಿದೆ. ಬಳ್ಳಾರಿ-ಸಿರುಗುಪ್ಪ-ಸಿಂಧನೂರು ಮಾರ್ಗವಾಗಿ ಹೊರಡುವ ಪ್ರಯಾಣಿಕರಿಗೂ ಇದೇ ವೃತ್ತದಲ್ಲಿ ಪ್ರತ್ಯೇಕ ಬಸ್‌ನಿಲ್ದಾಣ ಸೌಕರ್ಯವನ್ನು ಕಲ್ಪಿಸಲಾಗಿದೆ. ಹೀಗಾಗಿ ಬಳ್ಳಾರಿಯಲ್ಲಿಯೇ ಅತಿ ವಿಶಾಲವಾದ ಸರ್ಕಲ್ ಆಗಿ ವಾಲ್ಮೀಕಿ ವೃತ್ತ ತಲೆ ಎತ್ತಿದೆ.

ಸರ್ಕಲ್ ನಿರ್ಮಾಣಕ್ಕೆ 7 ಕೋಟಿ ರೂ. ಮತ್ತವಲ್ಲದೇ ಇಲ್ಲಿ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿ ನಿರ್ಮಾಣಕ್ಕಾಗಿ 1.10 ಕೋಟಿ ರೂ. ಖರ್ಚು ಮಾಡಲಾಗಿತ್ತು. ಉತ್ತರ ಪ್ರದೇಶದ ರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಕೆತ್ತನೆ ಮಾಡಿದ್ದ ಪ್ರಸಿದ್ಧ ಶಿಲ್ಪಿ ಅರುಣ್‌ಯೋಗಿರಾಜ್ ಅವರ ನೇತೃತ್ವದಲ್ಲಿಯೇ ವಾಲ್ಮೀಕಿ ಪುತ್ಥಳಿಯನ್ನು ಮಾಡಿಸಲಾಗಿತ್ತು. ಜ.3 ರಂದು ಅದ್ದೂರಿಯಾಗಿ ಈ ಕಾರ್ಯಕ್ರಮ ನೆರವೇರಬೇಕಾಗಿತ್ತು. ಆದರೆ ಜ.1ರಂದು ನಡೆದಿದ್ದ ಬ್ಯಾನರ್ ಗಲಾಟೆ ಈ ಅದ್ದೂರಿ ಕಾರ್ಯಕ್ರಮಕ್ಕೆ ತಿಲಾಂಜಲಿ ಇಡುವಂತೆ ಮಾಡಿತ್ತು.

ಬಳ್ಳಾರಿಯ ಎಸ್ಪಿ ಸರ್ಕಲ್ ಬಳಿ ನಿರ್ಮಾಣಗೊಂಡ ವಾಲ್ಮೀಕಿ ಪುತ್ಥಳಿ ಅನಾವರಣಗೊಳ್ಳದೇ ಸ್ಥಗಿತವಾಗಿರುವುದು.

ಕಾರ್ಯಕ್ರಮ ಯಾವಾಗ?: ಪುತ್ಥಳಿ ನಿರ್ಮಾಣ, ಸರ್ಕಲ್ ಅಗಲೀಕರಣ, ವಿಜೃಂಭಣೆ ಕಾರ್ಯಕ್ರಮ ಸೇರಿ ಒಟ್ಟು 10 ಕೋಟಿ ರೂ.ಗಳ ಹೆಚ್ಚಿನ ಈ ಕಾರ್ಯಕ್ರಮ ಗಲಾಟೆಯಿಂದಾಗಿ ಮುಂದೂಡಲಾಗಿತ್ತು. ಆದರೆ ಈಗ ಐದು ತಿಂಗಳು ಕಳೆಯುತ್ತಿದ್ದರೂ ಇನ್ನು ಈಡೇರದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಘಟನೆ ನಡೆದ ಕೆಲವು ದಿನಗಳ ಬಳಿಕ ಶಾಸಕ ನಾರಾ ಭರತರೆಡ್ಡಿ ಸೇರಿ ವಾಲ್ಮೀಕಿ ಸಮಾಜದ ಶಾಸಕರು ಸೇರಿ ಹಲವು ನಾಯಕರುಗಳು ಶೀಘ್ರದಲ್ಲಿಯೇ ಅದ್ದೂರಿ ಕಾರ್ಯಕ್ರಮ ಮಾಡುವುದಾಗಿ ಘೋಷಣೆ ಮಾಡಿದ್ದರು.

> **ಪ್ರಕರಣ ಏನೇ ಇರಲಿ ಸರಕಾರದ ಅನುದಾನದಲ್ಲಿ ನಿರ್ಮಿಸಲಾಗಿದೆ ಸರ್ಕಲ್, ಪುತ್ಥಳಿ ಅನಾವರಣಕ್ಕೆ ಯಾಕಿಷ್ಟು ವಿಳಂಬ? ಎನ್ನುವ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಹೆಚ್ಚುತ್ತಿವೆ.**

ಆದರೆ ಇದು ಇನ್ನೂ ಈಡೇರಿಲ್ಲ. ಬ್ಯಾನರ್ ಗಲಾಟೆಯಲ್ಲಿ ಯುವಕನೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ ಈ ಪ್ರಕರಣ ಸದ್ಯ ಸಿಐಡಿ ಪೊಲೀಸರ ತನಿಖೆಯಲ್ಲಿ ಇದೇ ಕಾರಣಕ್ಕಾಗಿ ಈ ಕಾರ್ಯಕ್ರಮ ಇನ್ನು ಸ್ಥಗಿತ ಮಾಡಲಾಗಿದೆಯೇ? ಎನ್ನುವ ಚರ್ಚೆ ಹುಟ್ಟುಹಾಕಿದೆ.

ಬಿಮಾ ಯೋಜನೆ ಅಕ್ರಮ ತನಿಖೆಗೆ ಒತ್ತಾಯ

ಫಸಲ್ ಬಿಮಾ ಯೋಜನೆಯಲ್ಲಿ ನಡೆದಿರುವ ಅಕ್ರಮದ ತನಿಖೆಗೆ ಒತ್ತಾಯಿಸಿ ಹಾರಕನಾಳು ಭಾಗದ ರೈತ ಮುಖಂಡರು ವಿಜಯನಗರ ಜಿಲ್ಲಾ ಕೃಷಿ ಜಂಟಿ ನಿರ್ದೇಶಕ ಮಂಜುನಾಥರಿಗೆ ಮನವಿ ಸಲ್ಲಿಸಿದರು.

ಹರಪನಹಳ್ಳಿ: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿ ತಾಲೂಕಿನ ಹಾರಕನಾಳು ಗ್ರಾ ಪಂ ವ್ಯಾಪ್ತಿಯಲ್ಲಿ ಮಧ್ಯವರ್ತಿಗಳಿಂದ ಭಾರಿ ಅಕ್ರಮ ನಡೆದಿದೆ ಎನ್ನಲಾಗಿದೆ. ಸಮರ್ಪಕ ತನಿಖೆ ನಡೆಸಿ ರೈತರಿಗೆ ನ್ಯಾಯ ಒದಗಿಸಲು ಒತ್ತಾಯಿಸಿ ಹಾರಕನಾಳು ಭಾಗದ ರೈತ ಮುಖಂಡರು ವಿಜಯನಗರ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಅವರಿಗೆ ಗುರುವಾರ ಹರಪನಹಳ್ಳಿಯಲ್ಲಿ ಮನವಿ ಸಲ್ಲಿಸಿದರು.

ಬೆಳೆ ಕಟಾವು ಪ್ರಯೋಗ ಪ್ರಕ್ರಿಯೆಯಲ್ಲಿ ಒಣ ಬೇಸಾಯ (ಬೆದ್ದಲು) ಮತ್ತು ನೀರಾವರಿ ಭೂಮಿಯ ನಡುವೆ ಉದ್ದೇಶಪೂರ್ವಕವಾಗಿ ತಾರತಮ್ಯ ಮಾಡಲಾಗಿದೆ. ನೀರಾವರಿ ಜಮೀನಿನ ಸಿಸಿ ಕಟಿಂಗ್ ಅನ್ನು ಬೆದ್ದಲು ಭೂಮಿಗೆ ಸೇರಿಸಿ ದಾಖಲೆ ತಿರುಚಲಾಗಿದೆ.

ವಿಮಾ ಕಂಪನಿಯ ನಿಯಮಾವಳಿಗಳ ಪ್ರಕಾರ, ರೈತರ ಮೊಬೈಲ್‌ಗೆ ಒಟಿಪಿ ಬಂದ ನಂತರವಷ್ಟೇ ಸಿಸಿ ಕಟಿಂಗ್ ಪ್ರಕ್ರಿಯೆ ನಡೆಸಬೇಕು. ಆದರೆ, ಇಲ್ಲಿ ಒಟಿಪಿ ಬಾರದಿದ್ದರೂ ಕಟಾವು ಪ್ರಕ್ರಿಯೆ ತೋರಿಸಿ ಏಕಪಕ್ಷೀಯವಾಗಿ ಮುಕ್ತಾಯ ಗೊಳಿಸಲಾಗಿದೆ. ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯಲ್ಲಿ ಶೇ.75ರಷ್ಟು ನೀರಾವರಿ ಹಾಗೂ 127 ಬೆದ್ದಲು ಭೂಮಿಗೆ ಸಿಸಿ ಕಟಿಂಗ್ ತೋರಿಸಲಾಗಿದ್ದು, ಇದು ಸಂಪೂರ್ಣ ಅವೈಜ್ಞಾನಿಕವಾಗಿದೆ ಎಂದು ದೂರಿದರು.

ತಂತ್ರಜ್ಞಾನ ದುರ್ಬಳಕೆ ಮಾಡಿಕೊಂಡು ಅವೈಜ್ಞಾನಿಕ ವರದಿ ಸಲ್ಲಿಸಿರುವ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು, ಹೊಸ ಸಮಿತಿ ರಚಿಸಿ, ಪುನಃ ಮರುಪರಿಶೀಲನೆ ನಡೆಸಿ ರೈತರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ರೈತರಾದ ಎಲ್.ಬಿ.ಹಾಲೇಶ ನಾಯ್ಕ, ಎಚ್.ಎಂ.ಬಸವರಾಜಯ್ಯ, ಭಾಷುಸಾಬ್, ಪುಟ್ಟನಾಯ್ಕ್,ಮಲ್ಲನಾಯ್ಕ,ಹಾಲೇಶ,ಹರೀಶ್ಚಂದ್ರ, ಮಂಜನಾಥ ನಾಯ್ಕ್ ಅವರು ಆಗ್ರಹಿಸಿದ್ದಾರೆ.

ಸಂಡೂರು ತಾಲೂಕು ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ ಉಪಾಧ್ಯಕ್ಷ ಬಿ.ಜಿ.ಉಜ್ಜನಗೌಡ ಮತ್ತು ಲಾರಿ ಮಾಲಿಕ ಸಿರಾಜ್ ಹುಸೇನ್ ಹಾಗೂ ನವಲೂಟಿ ಜಯಣ್ಣ ತಾಲೂಕು ಪ್ರಭಾರಿ ತಹಶೀಲ್ದಾರ್ ಸುಧಾ ಅರಮನಿ ಅವರಿಗೆ ಅದಿರು ಸಾಗಾಣಿಕೆ ಗುತ್ತಿಗೆ ಸ್ಥಳಿಯರಿಗೆ ನೀಡಲು ಮನವಿ ಸಲ್ಲಿಸಿದರು.

ಸ್ಥಳೀಯರಿಗೆ ಆದ್ಯತೆ ನೀಡಲು ಒತ್ತಾಯ

ಸಂಡೂರು: ಸುಮಾರು 15-20 ವರ್ಷದಿಂದ ನಮ್ಮ ಅದಿರನ್ನು ಹೊರಗಿನ ಎಲ್ಲ ಕಾರ್ಖಾನೆಗಳು ಖರೀದಿಸುತ್ತಿವೆ. ಅದಿರು ಸಾಗಾಣಿಕೆ ಗುತ್ತಿಗೆಯನ್ನು ಹೊರ ಜಿಲ್ಲೆಗಳ ಮತ್ತು ತಾಲೂಕು ಸಾಗಾಣಿಕೆದಾರರಿಗೆ ಅವಕಾಶ ನೀಡುತ್ತಿರುವುದರಿಂದ ಸ್ಥಳೀಯವಾಗಿ ಅನ್ಯಾಯವಾಗುತ್ತಿದೆ.

ನಮ್ಮ ಸಂಪತ್ತು ನಮ್ಮ ಹಕ್ಕು

ನಮ್ಮ ಸಂಪತ್ತು ನಮ್ಮ ಹಕ್ಕು ಎನ್ನುವ ಹೋರಾಟದಿಂದ ನಾವು ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಕಾರ್ಖಾನೆಯವರಿಗೆ ಮನವಿ ಸಲ್ಲಿಸಿದರೂ ನಮಗೆ ಅವಕಾಶ ನೀಡುತ್ತಿಲ್ಲ.

ಕೂಡಲೇ ಸ್ಥಳೀಯರಿಗೆ ಎಂ.ಎಂ.ಎಲ್ ಕಂಪನಿಯಲ್ಲಿ ನಿಗದಿತ ದರ ಹಾಗೂ ವ್ಯವಸ್ಥೆಗೆ ಅನುಗುಣವಾಗಿ ಅದಿರು ಸಾಗಣೆ ಗುತ್ತಿಗೆಗೆ ಅವಕಾಶ ಕಲ್ಪಿಸಿಕೊಡಿ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶಕ್ಕೆ ಸಹಕರಿಸಲು ತಾಲೂಕು ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ ಉಪಾಧ್ಯಕ್ಷ ಬಿ.ಜಿ.ಉಜ್ಜನಗೌಡ ಮತ್ತು ಲಾರಿ ಮಾಲಿಕ ಸಿರಾಜ್ ಹುಸೇನ್ ಹಾಗೂ ನವಲೂಟಿ ಜಯಣ್ಣ ತಾಲೂಕು ಪ್ರಭಾರಿ ತಹಶೀಲ್ದಾರ್ ಸುಧಾ ಅರಮನಿ ಅವರಿಗೆ ಮನವಿ ಸಲ್ಲಿಸಿದರು.

ಕೆ.ಎಸ್.ಎಂ.ಸಿ ಉಪಾಧ್ಯಕ್ಷ ಲಕ್ಷ್ಮಣ ಮಾತನಾಡಿ, ತಾಲೂಕಿನ ಅದಿರು ಸಂಪತ್ತು ಸ್ಥಳೀಯವಾಗಿ ಶೇ.50% ಬಳಕೆಯಾಗುತ್ತಿದ್ದು ದಿನಕ್ಕೆ ಸುಮಾರು 60 ಸಾವಿರ ಮೆ.ಟನ್‌ನಷ್ಟು ಅದಿರನ್ನು ಜೆ.ಎಸ್. ಡಬ್ಲ್ಯೂ.ಕಂಪನಿ ಟೆಂಡರ್ ಗುತ್ತಿಗೆ ಮೂಲಕ ಬಳಕೆ ಮಾಡಿಕೊಳ್ಳುತ್ತಿದ್ದು, ಇನ್ನುಳಿದ ಶೇ.50% ಅದಿರು ಬೇರೆ ತಾಲೂಕು ಮತ್ತು ಜಿಲ್ಲೆಗಳ ಕಾರ್ಖಾನೆಗಳಿಗೆ ರವಾನೆಯಾಗುತ್ತಿದೆ. ಈ ಅದಿರು ಸಾಗಾಣಿಕೆ ಗುತ್ತಿಗೆಗೆ ಅನ್ಯ ತಾಲೂಕು, ಜಿಲ್ಲೆಗಳ ಗುತ್ತಿಗೆದಾರರಿಗೆ ಅವಕಾಶ ನೀಡುವುದರಿಂದ ಸ್ಥಳೀಯರಿಗೆ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ನಾವು ರಸ್ತೆ ತಡೆಮಾಡಿ ಹೋರಾಟ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಅನಿಲ್ ನಿಕ್ಕಂ, ಘಟಕದ ಉಪಾಧ್ಯಕ್ಷ ವಾಮದೇವ, ಉಬ್ಬಲಗಂಡಿ ಈಶಣ್ಣ, ತಾರಾನಗರ ತಿಮ್ಮಪ್ಪ, ಶಿವು, ರಾಘವೇಂದ್ರ ನಾಯ್ಕ, ಕಿರಣ್, ಮಲ್ಲಿಕಾರ್ಜುನ ಕಾಳಿಂಗೇರಿ, ಪಕ್ಕೀರಪ್ಪ, ನಾಗರಾಜ, ಓಬಳೇಶ್, ಮರಿಸ್ವಾಮಿ, ಧರ್ಮಾಪುರರಮೇಶ್, ಚಂದ್ರನಾಯ್ಕ, ಜೆಬಿಟಿ ಬಸವರಾಜ, ರಮೇಶ್ ಭಾಗವಹಿಸಿದ್ದರು.

ಸಮರ್ಪಕ ಕುಡಿವ ಪೂರೈಕೆಗೆ ಕ್ರಮ ವಹಿಸಿ

ಕಂಪ್ಲಿ ತಹಶೀಲ್ದಾರ್ ಕಛೇರಿ ಸಭಾಂಗಣದಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಯಿತು.

ಕಂಪ್ಲಿ: ಬೇಸಿಗೆಯ ತಾಪಮಾನ ಏರಿಕೆ ಮತ್ತು ಕುಡಿಯುವ ನೀರಿನ ಕೊರತೆ ನಿಭಾಯಿಸಲು ಚರ್ಚಿಸಲಾಯಿತು. ಪಟ್ಟಣದ ತಹಶೀಲ್ದಾರ್ ಕಛೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ತಾಲೂಕು ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಸಾರ್ವಜನಿಕರಿಗೆ ಹಾಗೂ ಜನಜಾನುಗಳಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.

ನಂತರ ತಹಶೀಲ್ದಾರ್ ಜೂಗಲ್ ಮಂಜುನಾಯಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲೂಕಿನಲ್ಲಿ ಕುಡಿಯುವ ನೀರಿನ ಸಂಬಂಧ ಯಾವುದೇ ತೊಂದರೆ ಆಗದಂತೆ ನಿಗಾವಹಿಸಿ ಸಾರ್ವಜನಿಕರಿಗೆ ಗುಣಮಟ್ಟದ ಶುದ್ಧ ನೀರು ಒದಗಿಸಲು ಅಧಿಕಾರಿಗಳು ಸಮನ್ವಯತೆಯಿಂದ ಸೂಕ್ತ ಕ್ರಮಕೈಗೊಳ್ಳಬೇಕು. ಈ ಹಿಂದೆ ಮಾರ್ಚ್ ತಿಂಗಳಲ್ಲಿ ಸಭೆ ನಡೆಸಲಾಗಿತ್ತು. ಆದರೆ, ಈಗ ಬಿಸಿಲಿನ ಪ್ರಮಾಣ ಅಧಿಕವಾಗಿದ್ದು, ಅಂತರ್ಜಲ ಕುಸಿತದ ಹಿನ್ನಲೆ ಕುಡಿಯುವ ನೀರಿನ ಸಮಸ್ಯೆ ತಕೆ ದೋರುವ ಪರಿಣಾಮ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಒದಗಿಸಬೇಕು.

ಆ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಸೂಚಿಸಿದರು.

ನಂತರ ತಾಪಂ ಇಒ ಆರ್. ಕೆ.ಶ್ರೀಕುಮಾರ ಮಾತನಾಡಿ, ಉಪ್ಪಾರಹಳ್ಳಿ ಫ್ಲೋರೈಡ್ ನೀರಿನ ಹಿನ್ನೆಲೆ ನಿರಂತರ ಶುದ್ಧ ಕುಡಿಯುವ ನೀರಿನ ಘಟಕದ ಮೂಲಕ ಜನತೆಗೆ ನೀರು ಕಲ್ಪಿಸಲಾಗುತ್ತಿದೆ. ಈಗಾಗಲೇ ಜೆಜೆಎಂ ಕಾಮಗಾರಿಗಳು ಮುಗಿದಿದ್ದು, ಗ್ರಾಮಗಳಲ್ಲಿ ಪೈಪ್‌ಲೈನ್ ಮೂಲಕ ನೀರು ಸಂಪರ್ಕಕ್ಕೆ ಜನರು ಅವಕಾಶ ಮಾಡಿಕೊಡುತ್ತಿಲ್ಲ. ಏನೇ ಆಗಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಕಟ್ಟುನಿಟ್ಟಿನ ಕ್ರಮವಹಿಸಲಾಗಿದೆ ಎಂದರು. ನೆಲ್ಲುಡಿ-ಕೊಟ್ಟಾಲ್ ಗ್ರಾಮದ 5ನೇ ವಾರ್ಡ್‌ನಲ್ಲಿ ಸ್ವಲ್ಪ ಮಟ್ಟಿಗೆ ನೀರಿನ ಸಮಸ್ಯೆ ಉಂಟಾಗಿದೆ. ಜೆಜೆಎಂ ಪೈಪ್ ಲೈನ್ ಮೂಲಕ ನೀರು ಹೋಗುತ್ತಿಲ್ಲ ಎಂದು ಪಿಡಿಒ ಅಪರಂಜಿ ತಿಳಿಸಿದರು. ಇದಕ್ಕೆ ಇಒ ಪ್ರತಿಕ್ರಿಯಿಸಿ, ಅಲ್ಲಿನ ಟ್ಯಾಂಕ್‌ಗಳಿಗೆ ಓವರ್ ಲೋಡ್ ನೀರಿನ ಮೂಲಕ ಬೇರೆ ಕಡೆ ಸಾಗಿಸದಂತೆ ಇದೇ ವಾರ್ಡ್‌ಗೆ ನೀರು ಕಲ್ಪಿಸಿ ಎಂದು ಸಲಹೆ ನೀಡಿದರು.

ನಂ.10 ಮುದ್ದಾಪುರ ಗ್ರಾಪಂಯ ಪ್ರಭುಕ್ಯಾಂಪಿನಲ್ಲಿ ಬೋರ್‌ವೆಲ್ ಗಳು ದುರಸ್ತಿಯಲ್ಲಿದ್ದು, ಹತ್ತಿರದ ಪುರಸಭೆಯಿಂದ ನೀರು ಒದಗಿಸಬೇಕು. ಇಲ್ಲಿನ 150 ಕುಟುಂಬಗಳಿಗೆ ನೀರು ಕಲ್ಪಿಸಲು ಸಾಧ್ಯ ಎಂದು ಪಿಡಿಒ ಶಿಲ್ಪಾರಾಣಿ ಮನವಿ ಮಾಡಿದರು.

ಶಿರಸ್ತೇದಾರ ರಮೇಶ, ಕಂದಾಯ ನಿರೀಕ್ಷಕ ಜಗದೀಶ, ಪಿಡಿಒಗಳಾದ ಹಾಲರ್ವಿ ಶೇಷಗಿರಿ, ಬೀರಲಿಂಗ, ಮಲ್ಲಿಕಾರ್ಜುನ, ಶಶಿಕಾಂತ, ಗ್ರಾಮ ಆಡಳಿತ ಅಧಿಕಾರಿಗಳು ಇದ್ದರು.

ಸಾರ್ವಜನಿಕ ನೋಟಿಸು

ನನ್ನ ಪಕ್ಷಗಾರರು ವಿಜಯನಗರ ಜಿಲ್ಲಾ ಹೊಸಪೇಟೆ ತಾಲೂಕ ಹೊಸಪೇಟೆ ಗ್ರಾಮ ಹೊಸಪೇಟೆ ನಗರದಲ್ಲಿರುವ ಬಿನ್ ಶೇತ್ಕಿ ಖಿಲ್ಲಾ ಜಾಗ ಇದರ ಆರ್ ಎಸ್ ನಂ. 330/1ಅ, ಮತ್ತು ಆರ್ ಎಸ್.ನಂ. 330/1ಬ ಇದರ ಸ್ವತ್ತಿನ ಸಂಖ್ಯೆ: 35-3-620-1028 ಕ್ಷೇತ್ರ 01 ಎಕರೆ 25 ಸೆಂಟು ಅಂದರೆ 4646.17 ಚ.ಮೀಟರಂಸುನ್ನು ಇದರ ಮಾಲೀಕರಾದ 1) ಬಿ ಸತ್ಯ ಗುರುರಾಜ ಬಿನ್ ಲೇಟ್ ಬಿ. ಚಿದಂಬರಪ್ಪ 2) ಬಿ. ಸತ್ಯ ತಿರುಮಲರಾಜ್ ಬಿನ್ ಲೇಟ ಬಿ. ಚಿದಂಬರಪ್ಪ ಇವರ ಸಂಗಡ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವವರು ಇರುತ್ತಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಯಾರದಾದರೂ ಯಾವೂದೇ ತರಹದ ತಂಟೆ ವ ತಕರಾರು ಹಕ್ಕುಗಳು ಹಾಗೂ ಹಿತಾಸಕ್ತಿ ನ್ಯಾಯಾಲಂಯದ ವ್ಯಾಜ್ಯಗಳು ಹಾಗೂ ನ್ಯಾಯಾಲಯದ ಮನಾಯಿಗಳು ಇದ್ದಲ್ಲಿ ಈ ನೋಟಿಸು ಪ್ರಕಟಣೆಯ 7 ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಲಿಖಿತವಾಗಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ನಂತರ ಬಂದ ತಕರಾರುಗಳು ನನ್ನ ಪಕ್ಷಗಾರರಿಗೆ ಬಾಂಧಾಯಿಸುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಎನ್. ಎಸ್ ಭಟ್ಟ, ವಕೀಲರು
ಜಿ. ಎಫ್ -19, ತಿರುಮಲ ಟ್ರೇಡ ಸೆಂಟರ್,
ಹುಬ್ಬಳ್ಳಿ ನೀಲಜಿನ್ ರೋಡ್, ಹುಬ್ಬಳ್ಳಿ-29
07-05-2026 ಮೊ: 94485-60516

ಮೇ.9 ರಿಂದ ಎರಡು ದಿನ ಸಂಗಂ ಸಾಹಿತ್ಯ ಪುರಸ್ಕಾರ ಸಮಾರಂಭ

ಬಳ್ಳಾರಿ: ನಗರದ ಹೊರ ವಲಯದ ಜ್ಞಾನಾಮೃತ ಕಾಲೇಜಿನಲ್ಲಿ ಮೇ.9 ಮತ್ತು 10 ರಂದು ಎರಡು ದಿನ 2025 ರ ಸಂಗಂ ಸಾಹಿತ್ಯ ಪುರಸ್ಕಾರ ಪ್ರದಾನ ಸಮಾರಂಭ ನಡೆಯಲಿದೆ. ಪ್ರಶಸ್ತಿ 25 ಸಾವಿರ ರೂ ನಗದು ಹೊಂದಿದೆ.

ಸಂಗಂ ಟ್ರಸ್ಟ್ ಅಧ್ಯಕ್ಷ ಡಾ. ವೈ.ಸಿ.ಯೋಗಾನಂದರೆಡ್ಡಿ, ಕಾರ್ಯದರ್ಶಿ ಡಾ.ಕೆ.ಶಿವಲಿಂಗಪ್ಪ ಹಂದಿಹಾಳು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯದ ಮತ್ತು ನೆರೆಯ ರಾಜ್ಯಗಳಿಂದ 103 ಜನ ಸಾಹಿತ್ಯಾಸಕ್ತರು ಆಗಮಿಸಲು ನೋಂದಣಿ ಮಾಡಿಕೊಂಡಿದ್ದಾರೆ. ಪ್ರಶಸ್ತಿ ಪುರಸ್ಕಾರದ ಜೊತೆಗೆ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಕುರಿತು ಚರ್ಚಾಗೋಷ್ಠಿ, ವಿಚಾರ ಸಂಕಿರಣ ನಡೆಯಲಿವೆ. ಓ ಎಲ್ ನಾಗಭೂಷಣ ಸ್ವಾಮಿ ಉದ್ಘಾಟಿಸಲಿದ್ದಾರೆ. ಡಾ. ಅರವಿಂದ ಪಟೇಲ್ ಅಧ್ಯಕ್ಷತೆ ವಹಿಸಲಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್ ನ ಅಧಿಕಾರಿಗಳಾದ ಡಾ.ಪತ್ತಿಪಾಕ ಮೋಹನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾವ್ಯ ಸಂವಾದದಲ್ಲಿ ಚಿದಾನಂದ ಸಾಲಿ, ರವಿ ಕುಮಾರ್ ಟೆಲೆಕ್ಸ್, ಭುವನಾ ಹಿರೇಮಠ ಹಾಗೂ ನಾಗಣ್ಣ ಕಿಲಾರಿ (ಕನ್ನಡ) ತಗುಳ ಗೋಪಾಲ, ಕಲ್ಯಾಣ ಕುಂಜು, ಬಾಲ ಸುಧಾಕರ ಮೌಳಿ (ತೆಲುಗು) ಭಾಗವಹಿಸಲಿದ್ದಾರೆ. ಪ್ರಶಸ್ತಿ ಹಂತದ 5 ಮಂದಿ ಕವಿಗಳೊಂದಿಗೆ ಸಂವಾದ ನಡೆಯಲಿದ್ದು ಅಮರೇಶ್ ನುಗಡೋಣಿ ಪ್ರಶಸ್ತಿ ಪ್ರದಾನ ಮಾಡಿದರೆ, ಅಧ್ಯಕ್ಷತೆಯನ್ನು ಡಾ. ವೈ ಸಿ ಯೋಗಾನಂದ ರೆಡ್ಡಿ ವಹಿಸಲಿದ್ದಾರೆ.

2023ರಲ್ಲಿ ಅನುಪಮಾ ಪ್ರಸಾದ್ ಅವರ "ಚೋದ್ಯ" ಕಥಾ ಸಂಕಲನವು, ಚೀಮನಹಳ್ಳಿ ರಮೇಶಬಾಬು ಅವರ 'ಮಂಪರು' ಕಾದಂಬರಿ 2024ರ ಸಂಗಂ ಸಾಹಿತ್ಯ ಪುರಸ್ಕಾರ ಪಡೆದುಕೊಂಡಿತ್ತು.

ಈ ವರ್ಷ ಕನ್ನಡದೊಂದಿಗೆ ತೆಲುಗು ಸಾಹಿತ್ಯದ ನುಡಿ ಸಾಂಗತ್ಯವನ್ನು ಚರ್ಚಿಸಲಿದೆ. ಕನ್ನಡ-ತೆಲುಗು ಭಾಷೆಯ 50ಕ್ಕೂ ಹೆಚ್ಚು ಸಾಹಿತಿಗಳುಕಲಾವಿದರುಭಾಗವಹಿಸಲಿದ್ದಾರೆ. ಎರಡನೇ ದಿನದ ಕಥಾ ಸಮಯದಲ್ಲಿ ಮಾರುತಿ ಪೌರೋಹಿತಂ ಕರ್ನೂಲ್, ಪೂರ್ಣಿಮಾ ಮಾಳಿಗೆಮನಿ ಶರಣಬಸವ ಗುಡದಿನ್ನಿ, ಮೇಘನಾಥ ರೆಡ್ಡಿ. ಯುವ ಪ್ರಕಾಶಕರ ತವಕ ತಲ್ಲಣ ಗೋಷ್ಠಿಯಲ್ಲಿ ರಾಜೇಂದ್ರ ಪ್ರಸಾದ್,ಮಮತಾ ಸೂರ್ಯ ಕೀರ್ತಿ, ಚಾಂದ್ ಕವಿ ಚಂದ್ರ, ಶ್ರೀ ದಿವ್ಯ, ಮಲ್ಲಿಕಾರ್ಜುನ್ ಶೇಷುಕೊರ್ಲ ಪಾಟಿ ಭಾಗವಹಿಸಲಿದ್ದಾರೆ.

ಸಂಜೆಯ ಕವಿಸಮಯದಲ್ಲಿ ನಾಗಿಣಿ ಅಪ್ಪಸಾನಿ, ಲಕ್ಷಣ್ ವಿ ಎ.ಸದಾಶಿವ ಸೊರಟೂರು, ಆಶಾ ಜಗದೀಶ ಪಾಲ್ಗೊಳ್ಳಲಿದ್ದಾರೆ. 2025 ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಅಮರೇಶ ನಗುಡೋಣಿ ಅವರೊಂದಿಗೆ ಸಂವಾದ ನಡೆಯಲಿದ್ದು ಪಲ್ಲವವೆಂಕಟೇಶ್ ನಡೆಸಿಕೊಡಲಿದ್ದಾರೆ. ರಾಜಶೇಖರ ಹಳೆಮನೆ, ಮಂಜುಳಾ ಗೋನಾಳ್ ಮಾತನಾಡಲಿದ್ದಾರೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಲೇಖಕರಾದ ಡಾ. ದಸ್ತಗಿರಿ ಸಾಬ್ ದಿನ್ನಿ. ಡಾ. ವೀರೇಂದ್ರ ರಾವಿಹಾಳ್, ಬಸವರಾಜ್ ಹರಗಿನದೋಣಿ, ನಾಗರಾಜ್ ಬಸರಕೋಡು ಮೊದಲಾದವರು ಇದ್ದರು.


ಬಳ್ಳಾರಿಯ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಸಂಗಂ ಪುರಸ್ಕಾರದ ಬಗ್ಗೆ ಮಾಹಿತಿ ನೀಡಲಾಯಿತು.

ಬಳ್ಳಾರಿ ಹೊಸ ಜಿಲ್ಲಾಧಿಕಾರಿ ಕಚೇರಿ ಎದುರು ಉದ್ಯೋಗಾಕಾಂಕ್ಷಿಗಳಿಂದ ಪ್ರತಿಭಟನೆ ನಡೆಯಿತು.

ಡಿಸಿ ಕಚೇರಿ ಎದುರು ಪ್ರತಿಭಟನೆ

ಬಳ್ಳಾರಿ: ಬಳ್ಳಾರಿಯ ಹೊಸ ಜಿಲ್ಲಾಧಿಕಾರಿ ಕಚೇರಿ ಎದುರುಗಡೆ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ರವಾನಿಸಲಾಯಿತು.

ಸಮಿತಿ ಬಳ್ಳಾರಿ ಸಂಚಾಲಕ ಜಗದೀಶ್ ನೇಮಕಲ್ ಮಾತನಾಡಿ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಿಂದಲೂನಿರಂತರಉದ್ಯೋಗಾಕಾಂಕ್ಷಿಗಳು ಹಲವಾರು ಮನವಿ ಪತ್ರ ಕೊಟ್ಟು ಹೋರಾಟ ನಡೆಸುತ್ತಾ ಬಂದರೂ ಸಹ ನೇಮಕಾತಿ ಪ್ರಕ್ರಿಯೆಯನ್ನು ನೆಪ ಹೇಳಿ ಮುಂದೂಡುತ್ತ ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ. ಉದ್ಯೋಗದ ಭರವಸೆ ಹೊತ್ತು ಬಕಪಕ್ಷಿಗಳಂತೆ ಕಾಯುತ್ತಿರುವ ಯುವಕರನ್ನು ನಿರಾಶೆಗೊಳಿಸುತ್ತಲೇ ಇದೆ. ಅತೀ ಶೀಘ್ರದಲ್ಲಿ ನೇಮಕ ಮಾಡುವುದಾಗಿ ಹೇಳಿ, ವರ್ಷಗಳೇ ಕಳೆಯುತ್ತಿವೆ.

ಇನ್ನೂ ಈ ವರ್ಷ ಮೇ ತಿಂಗಳು ಬಂದರೂ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡುತ್ತಿಲ್ಲ. ಕಾರಣ ಕೂಡಲೇ ಪಿ.ಸಿ. ಹೋಟ ಸಮಿತಿಯ ಶಿಫಾರಸ್ಸು ಜಾರಿಗೊಳಿಸಬೇಕು, ಆರ್ಥಿಕ ಇಲಾಖೆ ಅನುಮೋದನೆ ಕೊಟ್ಟಿರುವ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕೂಡಲೇ ಪ್ರಾರಂಭಿಸಬೇಕು ಮತ್ತು ಕೆ.ಪಿ.ಎಸ್.ಸಿ ಭ್ರಷ್ಟಾಚಾರ ಮುಕ್ತಗೊಳಿಸಬೇಕೆಂಬ ಬೇಡಿಕೆಗಳನ್ನು ಇಟ್ಟುಕೊಂಡು ಮನವಿ ಸಲ್ಲಿಸಲಾಯಿತು.

ಪಂಪಾಪತಿ, ಗಾದಿಲಿಂಗ ವೆಂಕಟೇಶ್, ದಾದು, ಬಸವರಾಜ್ ಇನ್ನಿತರರು ಭಾಗವಹಿಸಿದ್ದರು.

ಹಂಪಿ ಸಾವಿರಮಠದ ಮುಖ್ಯ ಬಾಗಿಲಿಗೆ ಪೂಜೆ

ಎಮ್ಮಿಗನೂರು : ಗ್ರಾಮದ ಹಂಪಿ ಸಾವಿರ ಮಠದ ಮುಖ್ಯ ಕಲ್ಲಿನ ಬಾಗಿಲಿಗೆ ಪೂಜೆ, ವಿಧಿ ವಿಧಾನಪೂರ್ವಕ ಜರುಗಿತು.

ಹಂಪಿ ಸಾವಿರ ದೇವರ ವಾಮದೇವ ಮಹಾಂತ ಮಠದ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ವಾಸ್ತು ಶಾಸ್ತ್ರದ ಪ್ರಕಾರ, ಮುಖ್ಯ ದ್ವಾರವು ಪ್ರವೇಶ ಸ್ಥಳವಷ್ಟೇ ಅಲ್ಲ, ಇದು ಶಕ್ತಿ ಸಂಚಯನದ ಸ್ಥಳವೂ ಹೌದು. ಮುಖ್ಯ ದ್ವಾರವನ್ನು ಇಡುವುದಕ್ಕೆ ಸೂಕ್ತ ದಿಕ್ಕು ಎಂದರೆ ವಾಸ್ತುವಿನ ಪ್ರಕಾರ ಉತ್ತರ, ಈಶಾನ್ಯ, ಪೂರ್ವ ಅಥವಾ ಪಶ್ಚಿಮ ದಿಕ್ಕುಗಳಾಗಿವೆ. ಇವು ಮಂಗಳಕರ ಮತ್ತು ಭಕ್ತಿ ಧನಾತ್ಮಕ ಶಕ್ತಿ ಅರಿಯಲು ಅನುವು ಮಾಡುತ್ತದೆ ಎಂದು ಭಾವಿಸಲಾಗಿದೆ. ಮನುಷ್ಯ ಸಂಪ್ರದಾಯ ಬಿಡಬಾರದು. ಸದಾಶಯ ಹೊಂದಬೇಕು. ಪಂಚಭೂತಗಳ ತತ್ತ್ವ ಅರಿತು ತನ್ನ ಪಂಚೇಂದ್ರಿಯಗಳನ್ನು ಸರಿಯಾಗಿಟ್ಟುಕೊಳ್ಳಬೇಕು. ಸಂಸ್ಕಾರವಂತ ವ್ಯಕ್ತಿಯಾಗಿ ಸಮಾಜದಲ್ಲಿ ಬದುಕಬೇಕು. ಪುರಾಣ ಪ್ರವಚನಗಳಲ್ಲಿ ಭಾಗಿಯಾಗಿ ಉತ್ತಮ ವಿಚಾರಗಳನ್ನು ಆಲಿಸಿ, ಮೌಲ್ಯಯುತ ಬದುಕು ಕಟ್ಟಿಕೊಳ್ಳಬೇಕು ಎಂದರು. ವಿವಿಧ, ಹೂಗಳಿಂದ ಪೂಜೆ ಧಾರ್ಮಿಕ ಕಾರ್ಯಗಳು ಜರುಗಿದವು.

ಎಮ್ಮಿಗನೂರು ಗ್ರಾಮದ ಹಂಪಿ ಸಾವಿರಮಠದ ಮುಖ್ಯ ಕಲ್ಲಿನ ದ್ವಾರದ ಪೂಜೆ ವಾಮದೇವ ಮಹಾಂತ ಮಠದ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ನೆರವೇರಿತು.

‘ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿ’

ಕಂಪ್ಲಿ : ಜೆಸಿಐ ಸಂಸ್ಥೆಯು ಮರಗಿಡಗಳಲ್ಲಿ ಮಡಿಕೆಗಳನ್ನು ಕಟ್ಟಿ ಪಕ್ಷಿಗಳಿಗೆ ನೀರುಣಿಸುವ ಕಾಯಕದಲ್ಲಿ ತೊಡಗಿರುವುದು ಮಾದರಿಯಾಗಿದೆ. ಇಂತಹ ಕಾರ್ಯಗಳ ಮೂಲಕ ಪಕ್ಷಿ ಸಂಕುಲ ಸಂರಕ್ಷಿಸಿದರೆ ಮಾತ್ರ ಪರಿಸರ ಉಳಿಯಲು ಮತ್ತು ಸಮೃದ್ಧಗೊಳ್ಳಲು ಸಾಧ್ಯ ಎಂದು ಜೆಎಸಿ ವಲಯ ಉಪಾಧ್ಯಕ್ಷ ಪ್ರಸಾದ್ ಗಡಾದ್ ತಿಳಿಸಿದರು.

ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಉದ್ಯಾನವನದಲ್ಲಿ ಗುರುವಾರ ಜ್ಯೂನಿಯರ್ ಚೇಂಬರ್ ಇಂಟರನ್ಯಾಷನಲ್ ಅಲುಮ್ನಿ ಕ್ಲಬ್ (ಜೆಎಸಿ) ಆಯೋಜಿಸಿದ್ದ ಪಕ್ಷಿಗಳಿಗೆ ನೀರು ಕಲ್ಪಿಸುವ ಮಡಿಕೆ ಅಳವಡಿಸುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬೇಸಿಗೆ ಮುಗಿಯುವ ತನಕ ಮಡಿಕೆಗಳಲ್ಲಿ ನೀರಿನ ವ್ಯವಸ್ಥೆ ಇರುವುದನ್ನು ಖಚಿತಪಡಿಸಿಕೊಳ್ಳಲು ಅವರು ಸಲಹೆ ನೀಡಿದರು.

ಜೆಸಿಐ ಕಂಪ್ಲಿ ಸೋನಾ ಘಟಕ ಅಧ್ಯಕ್ಷ ಡಾ. ಭರತ್ ಪದ್ಮಶಾಲಿ ಮಾತನಾಡಿ, ಒಂದು ಪಾತ್ರೆ ನೀರು ನೂರಾರು ಪಕ್ಷಿಗಳಿಗೆ ನೆರವು ಎಂಬ ಘೋಷಣೆಯೊಂದಿಗೆ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮುಂದಿನ 10 ದಿನಗಳ ಕಾಲ ಈ ಅಭಿಯಾನ ನಡೆಯಲಿದ್ದು, ಸಾರ್ವಜನಿಕರು ತಮ್ಮ ಮನೆಯ ಛಾವಣಿ ಅಥವಾ ಸುತ್ತಮುತ್ತಲಿನ ಮರಗಳಲ್ಲಿ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು.

ಕಂಪ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯ ಉದ್ಯಾನವನದಲ್ಲಿ ಪಕ್ಷಿಗಳಿಗೆ ನೀರು ಕಲ್ಪಿಸುವ ಮಡಿಕೆ ಅಳವಡಿಸುವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಸಕಲೇಶ್ವರಿ ಅಕ್ಕಾ, ಹಿರಿಯರಾದ ಅರವಿ ಬಸವನಗೌಡ್ರು, ಜೆಸಿಐ ವಲಯ ಅಧಿಕಾರಿ ಜೆಸಿ ಬಿ. ರಸೂಲ್, ಹಿರಿಯ ಜೆಸಿ ಹಾಗೂ ತಾಲೂಕು ವೀರಶೈವ ಸಂಘದ ಅಧ್ಯಕ್ಷ ಎಸ್. ಎಂ. ನಾಗರಾಜ, ಪೂರ್ವ ಅಧ್ಯಕ್ಷರುಗಳಾದ ವಾಸಿಮ್ ಪಯಾಜ್, ಬಿ. ಜಿಲಾನಸಾಬ್, ಡಿ. ಮಂಜೇಶ, ಸೋಗಿ ಸಂತೋಷ, ಸದ್ಯಸರುಗಳಾದ ಅಕ್ಕಿ ಜಿಲಾನ್, ಗುರುಶಾಂತ ಮೂರ್ತಿ, ಬೆಳಗಿನ ಜಾವದ ನಡಿಗೆಯ ತಂಡದ ಸದ್ಯಸರು, ಪುರಸಭೆ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

SK CLASSIFIED

4x5	790/-	3+1 - 5+2
4x10	1260/-	3+1 - 5+2

ತ್ವರಿತವಾಗಿ ಬೇಕಾಗಿದ್ದಾರೆ
ನವನಿಕೇತನ ಕೋ-ಆಪ್ ಹೌಸಿಂಗ್ ಸೊಸೈಟಿ, ಅಶೋಕನಗರ, ಹುಬ್ಬಳ್ಳಿಯ ಶ್ರೀ ಮಾರುತಿ ದೇವಸ್ಥಾನಕ್ಕೆ ಹಾಗೂ ಶ್ರೀ ಗಣಪತಿ ದೇವಸ್ಥಾನಕ್ಕೆ ಪ್ರಧಾನ ಅರ್ಚಕರು ಬೇಕಾಗಿದ್ದಾರೆ. ವಸತಿ ಸೌಲಭ್ಯ ಇರುತ್ತದೆ. ಮತ್ತು ಸಭಾಭವನಕ್ಕಾಗಿ ವಾಚಮನ್ ಫ್ಯಾಮಿಲಿ ಬೇಕಾಗಿದ್ದಾರೆ. ಅವರಿಗೂ ವಸತಿ ಸೌಲಭ್ಯವಿರುತ್ತದೆ. ತ್ವರಿತವಾಗಿ ಬೇಕಾಗಿದ್ದಾರೆ.
ಮೊ: 9448103469

ಓದುಗರ ಗಮನಕ್ಕೆ

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್ ಎಸ್ ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಸಂಪರ್ಕಿಸಿ: ಮೊ: 9900049656
ಇ-ಮೇಲ್: skhubli@gmail.com

ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere | ಮಂಗಳೂರು Mangaluru | ಬಾಗಲಕೋಟೆ Bagalkot | ಬೆಳಗಾವಿ Belagavi
ಸಂಪುಟ Volume 94 | ಸಂಚಿಕೆ Issue 19
ಶುಕ್ರವಾರ 8 ಮೇ 2026
www.epaper.samyukthakarnataka.com
Samyuktha Karnataka @samyuktakarnat2
₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ
SAMYUKTA KARNATAKA

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ
ಕನ್ನಡಿಗರ ಸಾಕ್ಷಿಪ್ರಜ್ಞೆ
REGISTERED NO. DWD/104/2024-26,RNI.REG.NO.3544/1957

ಬೆಂಗಳೂರಿನ ಪರಪ್ಪನ ಜೈಲಲ್ಲಿ ದೇಶದಲ್ಲೇ ಮೊದಲ ಶಿಶುಪಾಲನಾ ಘಟಕ ಆರಂಭ 4

ಯಶ್ ಅಭಿನಯದ 'ಟಾಕ್ಸಿಕ್' ಸಿನಿಮಾ ಬಿಡುಗಡೆ ಆಗೋದು ವರ್ಷಾಂತ್ಯದಲ್ಲೇ? 8

'ಸೆರಗಾ ಸರ್ಕೆ' ವಿವಾದ: ಸಂಜಯ್‌ದತ್ ಬೆನ್ನಲ್ಲೇ ನಟಿ ನೋರಾ ಫೇಹರತ್ ಕ್ಷಮೆ 05

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

TVK ವಿಜಯ್ ಮುಂದಿರೋದು ಎರಡೇ ಆಯ್ಕೆ!
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ತಮಿಳುನಾಡಲ್ಲಿ ಬಗೆಹರಿಯದ ಸರ್ಕಾರ ರಚನೆ ಬಿಕ್ಕಟ್ಟು

ದಳ ಸಿಗದೆ ಪತಿ ಅತಂತ್ರ!

ಸರಳ ಬಹುಮತ ತೋರಿಸಿ ಸರ್ಕಾರ ರಚಿಸಿ: ರಾಜ್ಯಪಾಲ
ದಳಪತಿ ವಿಜಯ್ 2ನೇ ಮನವಿಗೂ ಅದೇ ಹಳೇ ಉತ್ತರ

ಚೆನ್ನೈ: ತಮಿಳುನಾಡಿನಲ್ಲಿ ಟಿ.ವಿ.ಕೆ. ಸರ್ಕಾರ ರಚಿಸುವ ವಿಚಾರ ಬಗೆಹರಿಯದ ಬಿಕ್ಕಟ್ಟಾಗಿ ಪರಿಣಮಿಸಿದ್ದು, ಸರಳ ಬಹುಮತಕ್ಕೆ ಕೆಲವೇ ಸ್ಥಾನಗಳ ಕೊರತೆಯಿಂದ ಪರದಾಡುತ್ತಿರುವ ನಟ ವಿಜಯ್ ಪರಿಸ್ಥಿತಿ 'ದಳ' ಸಿಗದ 'ಪತಿ'ಯಂತಾಗಿದೆ!

ಬುಧವಾರ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚನೆ ಹಕ್ಕನ್ನು ಮಂಡಿಸಿದ್ದ ವಿಜಯ್‌ಗೆ ಬಹುಮತ ಸಾಬೀತು ಪಡಿಸಿ ಎನ್ನುವ ಉತ್ತರ ದೊರೆತಿತ್ತು. ಗುರುವಾರವೂ ಮತ್ತೊಮ್ಮೆ ರಾಜ್ಯಪಾಲ ರಾಜೇಂದ್ರ ಅರ್ಲೇಕರ್‌ರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಅವಕಾಶ ಕೋರಿದರೂ ಹಳೇ ಉತ್ತರವೇ ದೊರೆತಿದೆ. ಹೀಗಾಗಿ ಏನೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಕೋರ್ಟ್ ಮೆಟ್ಟಿಲೇರಲು ಚಿಂತನೆ ನಡೆದಿದೆ ಎಂದು ಮೂಲಗಳು ಹೇಳಿವೆ. ಟಿ.ವಿ.ಕೆ. 108 ಸ್ಥಾನ ಗಳಿಸಿ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ. ವಿಜಯ್ 2 ಕಡೆ ಗೆದ್ದಿರುವುದರಿಂದ ಅದರ ಸಂಖ್ಯೆ ಈಗ ಸದ್ಯಕ್ಕೆ 107 ಆಗುತ್ತದೆ. ಬಹುಮತಕ್ಕೆ ಇನ್ನೂ 11 ಸದಸ್ಯರ ಅಗತ್ಯವಿದೆ. ಈಗಾಗಲೇ 5 ಸದಸ್ಯರನ್ನುಳ್ಳ ಕಾಂಗ್ರೆಸ್ ಬೆಂಬಲ ನೀಡುವುದಾಗಿ ಘೋಷಿಸಿದೆ. ಪುಟ 6

ಕಾನೂನು ಏನು ಹೇಳುತ್ತದೆ?

- ಸಂವಿಧಾನದ ವಿಧಿ 164 (1) ಅನ್ವಯ ಸಿಎಂ ನೇಮಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ.
- ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಸಿಎಂ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿ ನಿರ್ಣಯಿಸುವ ವಿವೇಚನಾ ಅಧಿಕಾರವೂ ರಾಜ್ಯಪಾಲರಿಗೆ ಇದೆ.
- ಏಕೈಕ ಅತಿದೊಡ್ಡ ಪಕ್ಷವನ್ನು ಸರ್ಕಾರ ರಚಿಸಲು ಆಹ್ವಾನಿಸುವ ಪದ್ಧತಿ ರೂಢಿಯಲ್ಲಿದೆ.
- ಅತಿ ದೊಡ್ಡ ಪಕ್ಷಕ್ಕೇ ಆಹ್ವಾನ ನೀಡಬೇಕು ಅಂತ ಕಾನೂನು ಇಲ್ಲ. ಆಯೋಗ ನೀಡಿರುವ ಶಿಫಾರಸ್ಸಿನಂತೆ ಚುನಾವಣಾ ಪೂರ್ವ ಅತಿ ದೊಡ್ಡ ಮೈತ್ರಿಕೂಟಕ್ಕೆ ರಾಜ್ಯಪಾಲರು ಆಹ್ವಾನ ನೀಡಬೇಕು.

ಗೌರ್ನರ್ ವಿರುದ್ಧ ಪಕ್ಷಗಳ ದನಿ

ವಿಜಯ್‌ಗೆ ಸರ್ಕಾರ ರಚನೆ ಹಕ್ಕು ನೀಡಬೇಕು ಎಂದು ಎಡಿಎಂಕೆ ಹೊರತುಪಡಿಸಿ ಉಳಿದ ಬಹುತೇಕ ಪಕ್ಷಗಳ ನಾಯಕರು ಒಮ್ಮತ ವ್ಯಕ್ತಪಡಿಸಿದ್ದಾರೆ.

ವಿಜಯ್ ಸರ್ಕಾರ ರಚಿಸಲಿ ನಾವು 6 ತಿಂಗಳು ಗಮನಿಸುತ್ತೇವೆ ಎಂದು ಸ್ಟಾಲಿನ್ ಹೇಳಿದರೆ, ವಿಜಯ್‌ಗೆ ಸರ್ಕಾರ ರಚನೆಗೆ ಅವಕಾಶ ನೀಡದೇ ಇರುವುದು ಜನಮತಕ್ಕೆ ತೋರಿಸಿದ ಅಗೌರವ ಎಂದು ಎಂಎನ್‌ಎಂ ಮುಖ್ಯಸ್ಥ ಕಮಲ್ ಹಾಸನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರೆಸಾರ್ಟ್ ರಾಜಕೀಯ ಶುರು

ತಮಿಳುನಾಡಿನಲ್ಲಿ ಸರ್ಕಾರ ರಚನೆ ಕಸರತ್ತಿನ ಭಾಗವಾಗಿ ರೆಸಾರ್ಟ್ ರಾಜಕೀಯವೂ ಆರಂಭವಾಗಿದೆ. ಟಿ.ವಿ.ಕೆ. ಪಕ್ಷವು ತನ್ನ ಶಾಸಕರಿಗೆ ಆಮಿಷವೊಡ್ಡಿ ಸೆಳೆದೊಯ್ಯುವ ಭೀತಿಯಿಂದ ಎಐಎಡಿಎಂಕೆ ಪಕ್ಷವು ತನ್ನೆಲ್ಲಾ ಶಾಸಕರನ್ನು ಪಾಂಡಿಚೇರಿಯ ರೆಸಾರ್ಟ್‌ವೊಂಕ್ಕೆ ಸ್ಥಳಾಂತರಿಸಿದೆ. ಪಕ್ಷದ ಮತ್ತೊಬ್ಬ ನಾಯಕ ಕೆ. ಶಣ್ಮುಗಂ ನೇತೃತ್ವದಲ್ಲಿ ಕೆಲವು ಶಾಸಕರ ಗುಂಪು ಟಿ.ವಿ.ಕೆ.ಗೆ ಬೆಂಬಲ ನೀಡುವ ಶಂಕೆ ಇದೆ. ಈ ಹಿನ್ನೆಲೆಯಲ್ಲಿ ರೆಸಾರ್ಟ್‌ನಲ್ಲಿ ಬೀಡುಬಿಟ್ಟಿರುವ ತಮ್ಮ ಶಾಸಕರನ್ನು ಭೇಟಿಯಾಗಲು ಗುರುವಾರ ಪಕ್ಷದ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ರೆಸಾರ್ಟ್‌ಗೆ ಭೇಟಿ ನೀಡಿದ್ದರು.

ರಾಜ್ಯ ಸಚಿವ ಸಂಪುಟದ ನಿರ್ಧಾರ

ನರೇಗಾ ಅನುದಾನ ಕೋರಿ ಕೋರ್ಟ್‌ಗೆ ಸರ್ಕಾರ ಮೊರೆ

ರಾಮ್‌ಜಿ ಯೋಜನೆಗೆ ಇನ್ನೂ ಚಾಲನೆಯೇ ಸಿಕ್ಕಿಲ್ಲ

ಸಂ.ಕ.ಸಮಾಚಾರ, ಬೆಂಗಳೂರು

ಕೇಂದ್ರ ಸರ್ಕಾರ ನರೇಗಾ ಹೆಸರನ್ನು ಬದಲಾವಣೆ ಮಾಡಿ ವಿಬಿಜಿ ರಾಮ್ ಎಂದು ಹೆಸರಿಟ್ಟಿದ್ದರೂ ಅದನ್ನು ಇದುವರೆಗೂ ಚಾಲನೆ ಮಾಡದೆ ನರೇಗಾಕ್ಕೂ ಅನುದಾನ ನೀಡದೆ ಇರುವುದನ್ನು ಪ್ರಶ್ನಿಸಿ ಕೋರ್ಟ್ ಮೊರೆ ಹೋಗಲು ರಾಜ್ಯದ ಸಚಿವ ಸಂಪುಟ ನಿರ್ಧರಿಸಿದೆ.

ಸಚಿವ ಸಂಪುಟದ ನಿರ್ಧಾರಗಳನ್ನು ಕಾನೂನು ಸಚಿವ ಎಚ್.ಕೆ. ಪಾಟೀಲ್ ವಿವರಿಸಿ, ನರೇಗಾ ಹೆಸರು ಬದಲಾವಣೆ ಮಾಡಿದ ಕೇಂದ್ರ ಸರ್ಕಾರ ವಿಬಿಜಿ ರಾಮ್ ಎಂದು ಹೇಳಿದೆ. ಆದರೆ, ಮೇ ತಿಂಗಳು ಬಂದರೂ ಈ ವಿಷಯವಾಗಿ ಅಧಿಸೂಚನೆ ಹೊರಡಿಸಿಲ್ಲ. ಈ ವಿಷಯವಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಾಗ ನರೇಗಾ ಮುಂದುವರಿಸಿ ಎಂದು ತಿಳಿಸಲಾಗಿದೆ. ನರೇಗಾ ಮುಂದುವರಿಸಲು ಕೇಂದ್ರ ಸರ್ಕಾರ ಅನುದಾನ ನೀಡಿಲ್ಲ.

ರಾಜ್ಯದಲ್ಲಿ ಮಳೆಯಿಲ್ಲದೆ ಬಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಇಂತಹ ಸಂದರ್ಭದಲ್ಲಿ ಉದ್ಯೋಗ ನೀಡಬೇಕಾಗಿದೆ. ಆದರೆ, ಕೇಂದ್ರ ಸರ್ಕಾರ ನರೇಗಾ ಹೆಸರು ಬದಲಾವಣೆ ಮಾಡಿರುವ ಕಾರಣ ಅನುದಾನ ಬಾರದೆ ಎಲ್ಲಿಯೂ ಕೆಲಸ ನಡೆಯುತ್ತಿಲ್ಲ. ನರೇಗಾದಿಂದ ಬಡವರು ಜೀವನ ನಡೆಸುತ್ತಿದ್ದರು. ಈಗ ಅನುದಾನವಿಲ್ಲದೆ ಕೆಲಸ ನಿಂತಿದೆ ಕೂಡಲೇ ಈ ವಿಚಾರದಲ್ಲಿ ಕೇಂದ್ರ ಶೀಘ್ರ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಗೆ ಪತ್ರವನ್ನೂ ಬರೆದಿದ್ದಾರೆ. ಆದರೆ, ಯಾವುದೇ ಉತ್ತರ ಬರದ ಹಿನ್ನೆಲೆ ಕೋರ್ಟ ಮೊರೆ ಹೋಗಲು ನಿರ್ಧರಿಸಲಾಗಿದೆ. ಪುಟ 6

ಇತರ ನಿರ್ಧಾರಗಳು

- ರಾಜ್ಯ ನೂತನ ಶಿಕ್ಷಣ ನೀತಿ ಅನುಷ್ಠಾನಕ್ಕೆ ಸಚಿವ ಸಂಪುಟ ಉಪಸಮಿತಿಯ ರಚನೆಗೆ ನಿರ್ಧಾರ
- ಕುಕ್ಕೆ ಸುಬ್ರಮಣ್ಯ ದೇವಾಲಯದ ಮಾಸ್ಟರ್ ಪ್ಲಾನ್ ಯೋಜನೆಯ 3ನೇ ಹಂತದ ಕಾಮಗಾರಿಗೆ 604.65 ಕೋಟಿ ರೂಪಾಯಿ ಅನುಮೋದನೆ
- ಕ್ರೀಡಾ ಸಾಧಕರಿಗೆ ಶೇಕಡಾ 2ರಷ್ಟು ಮೀಸಲಾತಿ
- ಹಟ್ಟಿ ಚಿನ್ನದ ಗಣಿಗೆ ಬಸವಸಾಗರ ಅಣೆಕಟ್ಟಿನಿಂದ ಕುಡಿವ ನೀರು ಸರಬರಾಜಿಗೆ 132 ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ಯೋಜನೆಗೆ ಅಸ್ತು
- ಮೈಸೂರು ಜಯದೇವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು 180 ಕೋಟಿ ರೂಪಾಯಿ ಒಪ್ಪಿಗೆ

ಮೋದಿಗೆ ಸಿಎಂ ಸಿದ್ದು ಪತ್ರ

ಈ ಬಾರಿ ಮಳೆ ಕೊರತೆ ಎದುರಾಗಿದೆ. ನೀರಿನ ಸಂಕಷ್ಟ ಎದುರಾಗುತ್ತದೆ ಎಂದು ಕೇಂದ್ರ ಸರ್ಕಾರವೇ ಹೇಳುತ್ತಿದೆ. ಇಂಥವು ಆದರೆ ಬಡವರು ಏನು ಮಾಡಬೇಕು? ಬಡವರ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಒತ್ತಡ ಹೇರಿದ್ದೇವೆ ಎಂದು ಪ್ರಧಾನಮಂತ್ರಿಗಳಿಗೆ ಸಿಎಂ ಪತ್ರ ಬರೆದಿದ್ದಾರೆ.

ಯೋಗೇಶ್‌ಗೌಡ ಹತ್ಯೆ ಕೇಸ್: ವಿನಯ್ ಅರ್ಜಿ ವಿಚಾರಣೆ 26ಕ್ಕೆ

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೇಶ್‌ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಶಾಸಕ ವಿನಯ್ ಕುಲಕರ್ಣಿ ಮತ್ತಿತರರು ವಿಶೇಷ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಮೇ 26ಕ್ಕೆ ನಿಗದಿಪಡಿಸಿದೆ.

ನಿತೀಶ್ ಪುತ್ರ ಸೇರಿ 32 ಜನ ಸಚಿವರಾಗಿ ಪ್ರಮಾಣವಚನ

ಪಟನಾ: ಬಿಹಾರದಲ್ಲಿ ಗುರುವಾರ ನಡೆದ ಮಹತ್ವದ ರಾಜಕೀಯ ವಿದ್ಯಮಾನದಲ್ಲಿ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಒಟ್ಟು 32 ನಾಯಕರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಸೈಯದ್ ಅತಾ ಹಸ್ನೈನ್ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ವಿವರ: 05

ಚೀನಾ: ಭ್ರಷ್ಟಾಚಾರ ಕೇಸಿನಲ್ಲಿ 2 ಮಾಜಿ ಸಚಿವರಿಗೆ ಗಲ್ಲುಶಿಕ್ಷೆ

ಬೀಜಿಂಗ್: ಚೀನಾದಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ಆರೋಪ ಸಾಬೀತಾಗಿರುವ ಇಬ್ಬರ ಮಾಜಿ ರಕ್ಷಣಾ ಸಚಿವರಿಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ. ವೀ ಫೆಂಘೆ ಮತ್ತು ಲಿ ಷಂಗು ಶಿಕ್ಷೆಗೊಳಗಾದವರು. ಇವರನ್ನು 2024ರಲ್ಲಿ ಆಡಳಿತಾರೂಢ ಕಮ್ಯುನಿಸ್ಟ್ ಪಾರ್ಟಿಯಿಂದ ವಜಾ ಮಾಡಲಾಗಿತ್ತು. ವಿವರ: 05

'ಐಪಿಎಲ್ ಶಿಫ್ಟ್‌ಗೆ ಫ್ರೀ ಟಿಕೆಟ್ ಕಾರಣ'

ನವದೆಹಲಿ: ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ಗೆ ಶಿಫ್ಟ್ ಆಗಲು ಉಚಿತ ಟಿಕೆಟ್‌ಗಳ ಬೇಡಿಕೆಯೇ ಕಾರಣ. ಕೆಎಸ್‌ಸಿಎ ನಿಗದಿಗೂ ಮೀರಿ ಉಚಿತ ಟಿಕೆಟ್ ಬೇಡಿಕೆಯಿಟ್ಟಿದೇ ಎಂದು ಬಿಸಿಸಿಐ ದೇವಜಿತ್ ಹೇಳಿದರು ವಿವರ: 10

ಧಾರ್ಮಿಕ ಆಚರಣೆ ಪ್ರಶ್ನೆ ಮಾಡಿದ್ರೆ ಧರ್ಮವೇ ಛಿದ್ರ

ನಾಗರಿಕತೆಗೂ ಅಪಾಯ ಆಗುತ್ತೆ: ಸುಪ್ರೀಂ

ನವದೆಹಲಿ: ಧಾರ್ಮಿಕ ವಿಚಾರಗಳ ಕುರಿತು ಸಾರ್ವಜನಿಕರು ಪ್ರಶ್ನಿಸಲು ಶುರು ಮಾಡಿದರೆ ಕೋರ್ಟ್‌ಗಳ ಮುಂದೆ ನೂರು ಅರ್ಜಿಗಳು ಬರುತ್ತವೆ. ಇಂಥ ಪರಿಸ್ಥಿತಿ ನಾಗರಿಕತೆ, ಧರ್ಮಗಳ ಒಡಕಿಗೆ ಕಾರಣವಾಗುತ್ತದೆ ಎಂದು ಸುಪ್ರೀಂಕೋರ್ಟ್ ನ್ಯಾ. ಬಿ.ವಿ.ನಾಗರತ್ನ ಹೇಳಿದ್ದಾರೆ.

ಶಬರಿಮಲೆ ಪ್ರಕರಣ ಸೇರಿದಂತೆ ಮಹಿಳಾ ತಾರತಮ್ಯ ಕುರಿತಾದ ಸಂವಿಧಾನಪೀಠದ 13ನೇ ದಿನದ ವಿಚಾರಣೆ ಸಂದರ್ಭದಲ್ಲಿ ದಾವೂದಿ ಬೊಹ್ರಾ ಸಮುದಾಯದ ಕೇಂದ್ರ ಮಂಡಳಿ ವಕೀಲರ ವಾದ ಆಲಿಸುತ್ತಿದ್ದ ವೇಳೆ ನ್ಯಾ.ನಾಗರತ್ನ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಪುಟ 6

ಕೋರ್ಟ್ ಹೇಳಿದ್ದು

- ಒಬ್ಬರಿಗೆ ಸರಿಯೆನ್ನಿಸುವುದು ಇನ್ನೊಬ್ಬರಿಗೆ ಅಸಹ್ಯವೆಂದು ಕಾಣಿಸಬಹುದು
- ಧರ್ಮದ ಎಲ್ಲ ವಿಷಯಗಳ ಬಗ್ಗೆ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ರೆ ನ್ಯಾಯಾಲಯವೇ ಸಂದಿಗ್ಧತೆಗೆ ಸಿಲುಕುತ್ತದೆ.
- ಆರ್ಥಿಕತೆ ಸೇರಿದಂತೆ ಎಲ್ಲ ವಿಷಯಗಳಲ್ಲೂ ಭಾರತ ಪ್ರಗತಿ ಸಾಧಿಸಿದೆ, ಅದು ನಾಗರಿಕತೆಯಿಂದಾಗಿ
- ಈ ರೀತಿಯಾಗಿ ನಾಗರಿಕರು ಪ್ರಶ್ನಿಸಲು ಶುರು ಮಾಡಿದ್ರೆ ನೂರಾರು ಅರ್ಜಿ ಬರುತ್ತವೆ

ಸೈಬರ್ ಕ್ರೈಮ್: ದೇಶದಲ್ಲೇ ಬೆಂಗಳೂರಿನಲ್ಲಿ ಅತಿ ಹೆಚ್ಚು

ಎನ್‌ಸಿಆರ್‌ಬಿ ಅಂಕಿ ಅಂಶದಲ್ಲಿ ಬಹಿರಂಗ

ನವದೆಹಲಿ: ಈ ವರ್ಷವೂ ಮಹಾನಗರಗಳ ಪೈಕಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿವೆ.

ಈ ಕುರಿತ ಅಂಕಿ ಅಂಶಗಳನ್ನು ಬುಧವಾರ ಎನ್‌ಸಿಆರ್‌ಬಿ ಬಿಡುಗಡೆ ಮಾಡಿದೆ. 2024ರಲ್ಲಿ ನಗರದಲ್ಲಿ 17561 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, 2023ರಲ್ಲಿ ವರದಿ ಯಾದ 17631 ಪ್ರಕರಣಗಳಿಗೆ ಹೋಲಿಸಿದರೆ ಸ್ವಲ್ಪ ಕಡಿಮೆಯಾಗಿದೆ.

ಬೆಂಗಳೂರಿನಲ್ಲಿ ದಾಖಲಾದ ಹೆಚ್ಚಿನ ಸೈಬರ್ ಕ್ರೈಂ ಪ್ರಕರಣಗಳು ಕಂಪ್ಯೂಟರ್ ಅಪರಾಧಗಳಿಗೆ ಸಂಬಂಧಿಸಿವೆ ಎಂದು ಎನ್‌ಸಿಆರ್ ಬಿಯ ವರದಿ ಹೇಳಿದೆ.

ಸೈಬರ್ ಕೇಸಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ

ಕರ್ನಾಟಕವು ಒಟ್ಟಾರೆಯಾಗಿ ಸೈಬರ್ ಅಪರಾಧ ಪ್ರಕರಣಗಳಲ್ಲಿ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. 2024ರಲ್ಲಿ 21,993 ಪ್ರಕರಣಗಳು ವರದಿಯಾಗಿವೆ. ಇದು 2023ರಲ್ಲಿ ದಾಖಲಾದ 21,889 ಪ್ರಕರಣಗಳಿಗಿಂತ ಸ್ವಲ್ಪ ಹೆಚ್ಚು ಎಂದು ಎನ್‌ಸಿಆರ್‌ಬಿ ಹೇಳಿದೆ. ಕಳೆದ ವರ್ಷ ದಾಖಲಾದ ಪ್ರಕರಣಗಳ ಪೈಕಿ ಬೆಂಗಳೂರಿನಲ್ಲಿ ಇನ್ನೂ 14184 ಸೈಬರ್ ಕೇಸ್‌ಗಳು ಬಾಕಿ ಉಳಿದಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಮತಾ ಸರ್ಕಾರವೇ ವಜಾ

ರಾಜೀನಾಮೆ ನೀಡದ್ದಕ್ಕೆ ಸರ್ಕಾರ ವಿಸರ್ಜಿಸಿದ ಗೌರ್ನರ್

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದ್ದು, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜೀನಾಮೆ ನೀಡಲು ನಿರಾಕರಿಸಿದ ಬೆನ್ನಲ್ಲೇ ರಾಜ್ಯಪಾಲ ಆರ್.ಎನ್.ರವಿ ಅವರು ವಿಧಾನಸಭೆಯನ್ನು ವಿಸರ್ಜಿಸಿ ಆದೇಶ ಹೊರಡಿಸಿದ್ದಾರೆ.

ಚುನಾವಣೆಯಲ್ಲಿ ಹೀನಾಯವಾಗಿ ಸೋತರೂ ಮಮತಾ ಬ್ಯಾನರ್ಜಿ ಅವರು ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲ್ಲವೆಂದು ಟ್ರಂಪ್‌ರಂತೇ ಹುಚ್ಚಾಟ ನಡೆಸಿದ್ದರು. ಪುಟ 6

- ಸಂವಿಧಾನದ ಆರ್ಟಿಕಲ್ 174ರನ್ವಯ ಬಂಗಾಳ ಸರ್ಕಾರ ವಿಸರ್ಜಿಸಿದ ಗೌರ್ನರ್ ಆರ್.ಎನ್.ರವಿ
- ರಾಜ್ಯಪಾಲರ ಈ ನಿರ್ಧಾರದಿಂದಾಗಿ ಮಮತಾ ಬ್ಯಾನರ್ಜಿಯ 15 ವರ್ಷದ ಪಾರುಪತ್ಯ ಅಂತ್ಯ
- ಮೇ9ಕ್ಕೆ ಠಾಗೂರ್ ಜನ್ಮದಿನದಂದೇ ಸುವೇಂಧು ನೇತೃತ್ವದಲ್ಲಿ ಬಿಜೆಪಿಯ ಹೊಸ ಸರ್ಕಾರ ಅಸ್ತಿತ್ವಕ್ಕೆ

ಬಂಗಾಳದಲ್ಲೀಗ ಬಾಂಬ್ ಸ್ಫೋಟ 05

ಕುಂಚತಂತ್ರ
ಕಾಂತೇಶ ಮ. ಬಡಿಗೇರ



ನಾಳೆ ಯಡಿಯೂರಪ್ಪ ಅಭಿಮಾನೋತ್ಸವ

10 ಲಕ್ಷ ಅಭಿಮಾನಿಗಳ ಆತಿಥ್ಯಕ್ಕೆ ಚಿತ್ರದುರ್ಗದಲ್ಲಿ ಭರದ ತಯಾರಿ

ಸಂ.ಕ.ಸಮಾಚಾರ, ದಾವಣಗೆರೆ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷ ಸಂದಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳೆಲ್ಲ ಸೇರಿ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಮೇ 9ರಂದು ಬೃಹತ್ ಸಮಾವೇಶ (ಅಭಿಮಾನೋತ್ಸವ) ಆಯೋಜಿಸಿದ್ದು, ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 9ರಿಂದ 10 ಲಕ್ಷ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ್ ತಿಳಿಸಿದರು. ಪುಟ 6

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಸಿದ್ಧವಾಗಿರುವ ಸ್ತಬ್ಧಚಿತ್ರ.

- ಕಾರ್ಯಕ್ರಮದಲ್ಲಿ ಭಾಗವಹಿಸಲಿರುವ ಕೇಂದ್ರ ಸಚಿವ ಅಮಿತ್ ಶಾ
- ರಾಜ್ಯದೆಲ್ಲೆಡೆಯಿಂದ ಬಸ್, ಮತ್ತಿತರ ವಾಹನಗಳ ಮೂಲಕ ಲಕ್ಷಾಂತರ ಬಿಜೆಪಿ ಕಾರ್ಯಕರ್ತರ ಆಗಮನ
- ಸಂಜೆ 3.30ಕ್ಕೆ ಬೃಹತ್ ಸಾರ್ವಜನಿಕ ಕಾರ್ಯಕ್ರಮ, ವಿವಿಧ ಮಠಾಧೀಶರು ಭಾಗಿ

ಸಿಂದೂರ್‌ನಲ್ಲಿ ಭಾರತ ಹೊಡೆದಿದ್ದು 13 ಪಾಕ್ ವಿಮಾನ

11 ವಾಯುನೆಲೆ ಉಡೀಸ್ | ಮೊದಲ ಬಾರಿ ಬಹಿರಂಗಗೊಳಿಸಿದ ಭಾರತೀಯ ವಾಯುಪಡೆ

ಆಪರೇಷನ್ ಸಿಂದೂರ್‌ಗೆ 1 ವರ್ಷ

ನವದೆಹಲಿ: ಆಪರೇಷನ್ ಸಿಂಧೂರ್ ಸಮಯದಲ್ಲಿ ಭಾರತವು 13 ಪಾಕಿಸ್ತಾನದ ವಿಮಾನಗಳನ್ನು ನಾಶಪಡಿಸಿದೆ ಮತ್ತು 11 ವಾಯುನೆಲೆಗಳನ್ನು ಹೊಡೆದುರುಳಿಸಿದೆ ಎಂದು ವಾಯುಪಡೆಯ ಉಪ ಮುಖ್ಯಸ್ಥ ಏರ್ ಮಾರ್ಷಲ್ ಎ.ಕೆ. ಭಾರ್ತಿ ಗುರುವಾರ ಹೇಳಿದ್ದಾರೆ. ನಾಶಗೊಂಡ ವಿಮಾನಗಳಲ್ಲಿ ಕೆಲವೊಂದು ನೆಲದಲ್ಲೇ ನಿಂತಿದ್ದ ವಿಮಾನಗಳೂ ಸೇರಿವೆ.

ಆಪರೇಷನ್ ಸಿಂಧೂರ್‌ನ ಮೊದಲ ವಾರ್ಷಿಕೋತ್ಸವದ ಅಂಗವಾಗಿ ನಡೆದ ಸಮ್ಮೇಳನದಲ್ಲಿ, ಭಾರತೀಯ ಸೇನಾ ನೆಲೆಗಳಿಗೆ ಹಾನಿಯನ್ನುಂಟುಮಾಡಿದೆ ಎಂಬ ಪಾಕಿಸ್ತಾನದ ಹೇಳಿಕೆಯನ್ನು ಭಾರ್ತಿ ತಿರಸ್ಕರಿಸಿದರು. ಅವರಿಂದ ಯಾವುದೇ ದೊಡ್ಡ ಹಾನಿಯನ್ನುಂಟು ಮಾಡಲು ಸಾಧ್ಯವಾಗಲಿಲ್ಲ. ಪಾಕಿಸ್ತಾನ ಹಾರಿಸಿದ ಎಲ್ಲ ಕ್ಷಿಪಣಿ, ಡ್ರೋನ್‌ಗಳನ್ನು ನಾವು ನಾಶ ಮಾಡಿದ್ದೇವೆ ಎಂದರು.

ಭೂಸೇನಾ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಮಾತನಾಡಿ, ಆಪರೇಷನ್ ಸಿಂದೂರ್‌ನಲ್ಲಿ 100ಕ್ಕೂ ಹೆಚ್ಚು ಭಯೋತ್ಪಾದಕರು ಮೃತಪಟ್ಟಿರುವುದಾಗಿ ಸ್ಪಷ್ಟಪಡಿಸಿದರು. ಪುಟ 6

ಉಗ್ರರ 9 ನೆಲೆ ಧ್ವಂಸ ಮಾಡಿದ 88 ಸೆಕೆಂಡ್ ದೃಶ್ಯ ಬಿಡುಗಡೆ

ಪಹಲ್ಗಾಮ್‌ನಲ್ಲಿ ನಡೆದ ಭೀಕರ ಉಗ್ರರ ದಾಳಿಗೆ ಪ್ರತಿಯಾಗಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಗೆ ಈಗ ಒಂದು ವರ್ಷ ಸಂದಿದೆ. ಈ ಐತಿಹಾಸಿಕ ದಿನದ ನೆನಪಿಗಾಗಿ ಭಾರತೀಯ ವಾಯುಪಡೆಯು ಪಾಕಿಸ್ತಾನದ ಒಳಗಿನ ಉಗ್ರರ 9 ಅಡಗುತಾಣಗಳನ್ನು ಧ್ವಂಸಗೊಳಿಸಿದ ಕ್ಷಣಗಳ 88 ಸೆಕೆಂಡುಗಳ ವಿಶೇಷ ವಿಡಿಯೋವನ್ನು ರಿಲೀಸ್ ಮಾಡಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಈ ಕಾರ್ಯಾಚರಣೆಯು ಕೇವಲ 88 ಗಂಟೆಗಳ ಕಾಲ ನಡೆದಿತ್ತು. ಅದನ್ನು 88 ಸೆಕೆಂಡುಗಳ ಅಡಕಗೊಳಿಸಲಾಗಿದೆ. ಇದರಲ್ಲಿ ಶತ್ರು ರಾಷ್ಟ್ರದ ಗಡಿ ದಾಟಿ ಉಗ್ರರ ಶಿಬಿರಗಳ ಮೇಲೆ ನಿಖರವಾದ ದಾಳಿ ನಡೆಸುವ ಭೀಕರ ದೃಶ್ಯಗಳಿವೆ.

ಸೈನಿಕರ ಶೌರ್ಯಕ್ಕೆ ದೇಶ ತಲೆಬಾಗುತ್ತೆ

ಒಂದು ವರ್ಷದ ಹಿಂದೆ, ಆಪರೇಷನ್ ಸಿಂಧೂರ್ ಮೂಲಕ ನಮ್ಮ ಸಶಸ್ತ್ರ ಪಡೆಗಳು ಅಪ್ರತಿಮ ಧೈರ್ಯ ಮತ್ತು ನಿಖರತೆಯನ್ನು ಪ್ರದರ್ಶಿಸಿದ್ದವು. ಅಮಾಯಕ ಭಾರತೀಯರ ಮೇಲೆ ದಾಳಿ ಮಾಡಿದವರಿಗೆ ತಕ್ಕ ಉತ್ತರ ನೀಡಲಾಯಿತು. ಇಡೀ ದೇಶವು ನಮ್ಮ ಸೈನಿಕರ ಶೌರ್ಯಕ್ಕೆ ತಲೆಬಾಗುತ್ತದೆ.

- ನರೇಂದ್ರ ಮೋದಿ, ಪ್ರಧಾನಿ

ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64	ಚಿಕನ್ ದರ ಕೆಜಿಗೆ ₹260	ಶುದ್ಧ ಬಂಗಾರ (99.90) ₹1,51,600	ಸ್ಟ್ಯಾಂಡರ್ಡ್ ಬಂಗಾರ (22 ಕ್ಯಾ.) ₹1,39,750	ಶುದ್ಧ ಬೆಳ್ಳಿ (.999 ಶುದ್ಧತೆ) ₹2,54,000	ಪ್ರತಿ ಡಾಲರ್‌ಗೆ ₹94.25

CMYK

ಸಂಯುಕ್ತ ಕರ್ನಾಟಕ ಸಂಪಾದಕೀಯ

ತಮಿಳುನಾಡಿನ ಗೊಂದಲ ಸಾಂವಿಧಾನಿಕ ಬಿಕ್ಕಟ್ಟು ಅಲ್ಲ

ತಮಿಳುನಾಡಿನಲ್ಲಿ ಬಹುಮತದ ಅಂಚಿಗೆ ಬಂದು ನಿಂತು, ಸರ್ಕಾರ ರಚನೆಗೆ ಬೇಕಾದ ಕೆಲವೇ ಸ್ಥಾನಗಳ ಕೊರತೆ ಎದುರಿಸುತ್ತಿರುವ ಟಿವಿಕೆ ಪಕ್ಷದ ನಾಯಕ ಹಾಗೂ ಜನಪ್ರಿಯ ನಟ ಜೋಸೆಫ್ ವಿಜಯ್‌ಗೆ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನ ನೀಡುತ್ತಿಲ್ಲ ಎಂಬ ವಿಚಾರ ವಿವಾದಕ್ಕೆ ಕಾರಣವಾಗಿದೆ. ಎರಡು ಬಾರಿ ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದರೂ ರಾಜ್ಯಪಾಲರು 'ಬಹುಮತಕ್ಕೆ ಬೇಕಾದ ಸಂಖ್ಯೆ ತೋರಿಸಿ, ನಂತರ ಸರ್ಕಾರ ರಚಿಸಿ' ಎಂದು ಹೇಳಿ ಕಳುಹಿಸಿದ್ದಾರೆ. 234 ಸದಸ್ಯ ಬಲದ ತಮಿಳುನಾಡಿನ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಸ್ಥಾನ ಬೇಕು. ವಿಜಯ್ ಅವರ ಪಕ್ಷ ಗೆದ್ದಿರುವುದು 108 ಸ್ಥಾನಗಳನ್ನು. ಅದರಲ್ಲಿ ವಿಜಯ್ ಅವರೇ ಎರಡು ಸ್ಥಾನದಲ್ಲಿ ಗೆದ್ದಿರುವ ಕಾರಣಕ್ಕೆ ಅವರಿಗೆ ಒಂದೇ ಮತದ ಅಧಿಕಾರ ಇರುವುದರಿಂದ ಟಿವಿಕೆ ಪಕ್ಷ 107 ಸ್ಥಾನ ಗೆದ್ದಂತಾಗಿದೆ. ಐವರು ಕಾಂಗ್ರೆಸ್ ಶಾಸಕರು ಟಿವಿಕೆಗೆ ಬೆಂಬಲ ನೀಡಿರುವುದರಿಂದ ಸಂಖ್ಯೆ 112 ಆಗುತ್ತದೆ. ಇನ್ನೂ ಆರು ಸ್ಥಾನ ಬೇಕು. ಅವುಗಳನ್ನು ಹೊಂದಿಸಲು ಈವರೆಗೆ ವಿಜಯ್‌ಗೆ ಸಾಧ್ಯವಾಗಿಲ್ಲ. ಮುಂದೆ ಆಗಬಹುದು. ಪ್ರಶ್ನೆ ಅದಲ್ಲ. ಟಿವಿಕೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದರಿಂದ ಅದಕ್ಕೆ ಸರ್ಕಾರ ರಚಿಸಲು ರಾಜ್ಯಪಾಲರು ಆಹ್ವಾನ ನೀಡಬೇಕಿತ್ತು, ಆದರೆ ಬಿಜೆಪಿಯ ರಾಜ್ಯಪಾಲರಾಗಿರುವುದರಿಂದ ಅವರು ಸರ್ಕಾರ ರಚನೆಗೆ ಅವಕಾಶ ನೀಡದೆ ತಮಿಳುನಾಡಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಟೀಕಿಸಲಾಗುತ್ತಿದೆ. ಟಿವಿಕೆಯೆದುರು ಅಧಿಕಾರ ಕಳೆದುಕೊಂಡ ಡಿಎಂಕೆ ಕೂಡ ರಾಜ್ಯಪಾಲರ ನಡೆ ಸರಿಯಲ್ಲ ಎಂದು ಹೇಳುತ್ತಿದೆ. ತಮಿಳುನಾಡಿನಲ್ಲಿ ರಾಜ್ಯಪಾಲರು ಸರ್ಕಾರ ರಚನೆಗೆ ಅವಕಾಶ ನೀಡದೆ ಇರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಎದುರಾಗಿದೆ ಎಂದೂ ಗುಲ್ಲೆದ್ದಿದೆ. ಇಲ್ಲಿ ರಾಜ್ಯಪಾಲರ ನಡೆ ಸರಿಯೂ ಅಲ್ಲ, ತಪ್ಪೂ ಅಲ್ಲ. ಮೇಲಾಗಿ ತಮಿಳುನಾಡಿನಲ್ಲಿ ಉಂಟಾಗಿರುವುದು ತಾತ್ಕಾಲಿಕ ವಿಕಲ್ಪವೇ ಹೊರತು ಸಾಂವಿಧಾನಿಕ ಬಿಕ್ಕಟ್ಟೂ ಅಲ್ಲ.

> **ರಾಜ್ಯಪಾಲರ ನಡೆ ಸರಿ ಅಥವಾ ತಪ್ಪು ಎಂದು ಹೇಳುವುದು ಅವರವರ ವಾದವಷ್ಟೆ. ಆದರೆ ತಮಿಳುನಾಡಿನ ವಿಷಯದಲ್ಲಿ ಆತುರದ ಅಗತ್ಯವೇನಿದೆ?**

ಸರ್ಕಾರಕ್ಕೆ ಬಹುಮತ ಇದೆಯೋ ಇಲ್ಲವೋ ಎಂಬುದು ಸಾಬೀತಾಗಬೇಕಿರುವುದು ಸದನದಲ್ಲೇ ಹೊರತು ರಾಜಭವನದಲ್ಲೂ ಅಲ್ಲ, ರಾಷ್ಟ್ರಪತಿ ಭವನದಲ್ಲೂ ಅಲ್ಲ ಎಂದು ಈ ಹಿಂದೆ ಎಸ್.ಆರ್.ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಹೀಗಾಗಿ ವಿಜಯ್‌ಗೆ ಸರ್ಕಾರ ರಚಿಸಲು ಆಹ್ವಾನ ನೀಡಿ, ಸದನದಲ್ಲೇ ಬಹುಮತ ಸಾಬೀತುಪಡಿಸಲು ಅವಕಾಶ ನೀಡಬೇಕು ಎಂಬುದು ಒಂದು ವಾದ. ಆದರೆ, ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ವಿವೇಚನಾಧಿಕಾರ ಎಂಬುದೊಂದಿರುತ್ತದೆ. ಮೇಲ್ನೋಟಕ್ಕೆ ರಾಜಕೀಯ ಪಕ್ಷವೊಂದಕ್ಕೆ ಸರ್ಕಾರ ರಚಿಸಲು ಬೇಕಾದ ಸಂಖ್ಯಾಬಲ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ನಿರ್ಧಾರ ಕೈಗೊಳ್ಳುವ ವಿವೇಚನಾಧಿಕಾರವನ್ನು ರಾಜ್ಯಪಾಲರು ಬಳಸಿದರೆ ಅದನ್ನು ರಾಜಕೀಯವಾಗಿ ಪ್ರಶ್ನಿಸಲಾಗದು. ಹಿಂದೆ ಸಂಖ್ಯಾಬಲವಿಲ್ಲದೆ ಸರ್ಕಾರ ರಚನೆಗೆ ಅವಕಾಶ ನೀಡಿರುವ ಉದಾಹರಣೆಗಳು ಸಾಕಷ್ಟಿವೆ. ಅಂತಹ ಸರ್ಕಾರಗಳು ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸಿರುವುದೂ ಇದೆ ಮತ್ತು ವಿಶ್ವಾಸಮತ ಸಾಬೀತುಪಡಿಸಲಾಗದೆ ಕೆಲವೇ ದಿನಗಳಲ್ಲಿ ಬಿದ್ದುಹೋಗಿರುವುದೂ ಇದೆ. ಹಾಗೆ ಬಿದ್ದುಹೋದ ಸರ್ಕಾರಕ್ಕೆ ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಕೂಡ ಒಂದು ಉದಾಹರಣೆ. ಹೀಗಾಗಿ ಬಹುಮತ ಹೊಂದಿಲ್ಲದ ಪಕ್ಷಕ್ಕೆ ಸರ್ಕಾರ ರಚಿಸಲು ಅನುಮತಿ ನೀಡಿ, ನಂತರ ಆ ಸರ್ಕಾರ ಕೆಲವೇ ದಿನಗಳಿಗೆ ಬಿದ್ದುಹೋದರೆ ಆಗುವ ನಷ್ಟವನ್ನು ಮೊದಲೇ ಮನಗಂಡು ಕೆಲ ದಿನಗಳ ಸಮಯಾವಕಾಶವನ್ನು ತೆಗೆದುಕೊಳ್ಳುವುದು ಸರ್ಕಾರ ರಚಿಸಲು ಉದ್ದೇಶಿಸಿರುವ ರಾಜಕೀಯ ಪಕ್ಷಕ್ಕೂ, ರಾಜ್ಯಪಾಲರಿಗೂ ತಪ್ಪಾದ ನಡೆ ಆಗುವುದಿಲ್ಲ.

ಇನ್ನು ಸಾಂವಿಧಾನಿಕ ಬಿಕ್ಕಟ್ಟಿನ ಪ್ರಶ್ನೆ. ಸಾಂವಿಧಾನಿಕ ಬಿಕ್ಕಟ್ಟು ಅಂದರೇನು? ಸರ್ಕಾರದ ಮೂಲಭೂತ ನಿಯಮಗಳು, ದೇಶದ ಕಾಯ್ದೆಗಳು ಅಥವಾ ಸಂವಿಧಾನದಲ್ಲಿ ಹೇಳಲಾದ ನೀತಿಗಳನ್ನು ಪಾಲಿಸಲು ಆಗದಿರುವ ಸ್ಥಿತಿ ಎದುರಾದರೆ ಅಥವಾ ಸಂವಿಧಾನಬದ್ಧವಾದ ಕಾಯ್ದೆಗಳಿಂದಲೂ ರಾಜಕೀಯ ಇಕ್ಕಟ್ಟಿನ ಸ್ಥಿತಿಯನ್ನು ಪರಿಹರಿಸಲು ಆಗದೆ ಆಡಳಿತ ಯಂತ್ರ ಸ್ಥಗಿತಗೊಳ್ಳುವ ಸ್ಥಿತಿ ಎದುರಾದರೆ ಅದು ಸಾಂವಿಧಾನಿಕ ಬಿಕ್ಕಟ್ಟು. ಸಂವಿಧಾನವನ್ನು ಹೇಗೆ ಬಳಸಬೇಕೋ ಹಾಗೆ ಬಳಸಲು ಸಂಬಂಧಪಟ್ಟವರು ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ ಆಗ ಸಾಂವಿಧಾನಿಕ ಬಿಕ್ಕಟ್ಟು ಎದುರಾಗುತ್ತದೆ. ತಮಿಳುನಾಡಿನಲ್ಲಿ ಇಂತಹ ಸ್ಥಿತಿಯೇನೂ ಬಂದಿಲ್ಲ. ಕೇರ್ ಟೇಕರ್ ಮುಖ್ಯಮಂತ್ರಿಯಾಗಿ ಸ್ಟಾಲಿನ್ ಇದ್ದಾರೆ. ಅತಿದೊಡ್ಡ ಪಕ್ಷವಾಗಿರುವ ಟಿವಿಕೆಗೆ ಅಗತ್ಯ ಸಂಖ್ಯಾಬಲ ಗಿಟ್ಟಿಸಿಕೊಂಡು ಸರ್ಕಾರ ರಚಿಸಲು ಇನ್ನೂ ಸಮಯವಿದೆ. ರಾಜ್ಯಪಾಲರು ಅಧಿಕಾರ ಮೀರಿ ನಡೆದುಕೊಂಡರೆ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸುವುದಕ್ಕೆ ಅವಕಾಶವಿದೆ. ಹೀಗಾಗಿ ಈ ವಿಷಯದಲ್ಲಿ ಆತುರದ ಅಭಿಪ್ರಾಯಗಳನ್ನು ಹರಿಬಿಟ್ಟು, ಅದೇ ಸರಿ ಎಂದು ಪಟ್ಟು ಹಿಡಿಯುವ ಅಗತ್ಯವಂತೂ ಸದ್ಯಕ್ಕಿಲ್ಲ. ಚುನಾವಣೆ ನಡೆದ ಪಂಚರಾಜ್ಯಗಳ ಪೈಕಿ ಸ್ಪಷ್ಟ ಬಹುಮತವಿರುವ ನಾಲ್ಕು ರಾಜ್ಯಗಳಲ್ಲೇ ಇನ್ನೂ ಸರ್ಕಾರ ರಚನೆಯಾಗಿಲ್ಲ. ಹಾಗಿರುವಾಗ ಸರಳ ಬಹುಮತಕ್ಕೆ ಕೊರತೆಯಿರುವ ತಮಿಳುನಾಡಿನ ವಿಷಯದಲ್ಲಿ ಕೊಂಚ ಸಂಯಮ ಕಾಯ್ದುಕೊಳ್ಳುವುದಕ್ಕೆ ಏನೂ ಅಡ್ಡಿಯಿಲ್ಲ. ■

ಮನುಷ್ಯನಿಗೆ ಭಾವನಾ ಸಾಮರ್ಥ್ಯದ ಅರಿವು ಮುಖ್ಯ

ಮನೋಮಂಥನ

ಡಾ.ವಿಜೇಂದ್ರಕುಮಾರ್ ಎಸ್.ಕೆ

ಗಣಕಯಂತ್ರ ಅಪ್ಲಿಕೇಷನ್ಸ್‌ನ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಕರೆ ಮಾಡಿ ತುರ್ತಾಗಿ ಬರಬೇಕೆಂದು ಹೇಳಿದಾಗ, ಸರ್ಕಾರೀ ಶಾಲಾ ಮಕ್ಕಳಿಗೆ ಭಾವನಾ ಸಾಮರ್ಥ್ಯದ ಬಗ್ಗೆ ಒಂದು ಕಾರ್ಯಾಗಾರ ನಡೆಸುತ್ತಿದ್ದೆ. ಕಾರ್ಯಾಗಾರವನ್ನು ಅರ್ಧದಲ್ಲೇ ನಿಲ್ಲಿಸಿ, ಮುಂದಿನ ಚಟುವಟಿಕೆಯನ್ನು ನಾಳೆ ಮುಂದುವರೆಸುತ್ತೇನೆ ಎಂದು ಹೇಳಿ, ಇಲ್ಲಿನವರೆಗೂ ಹೇಳಿದ ಬೇರೆಯವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಚಟುವಟಿಕೆಯನ್ನು ಮನನ ಮಾಡಿಕೊಳ್ಳುತ್ತಿರುವಂತೆ ಹೇಳಿ ಬಂದೆ. ಏನಾಗಿರಬಹುದು ಎಂದು ಯೋಚನೆ ತಾನಾಗಿಯೇ ಬರುತ್ತಿರುವಾಗ, ಪ್ರಜ್ಞಾಪೂರ್ವಕವಾಗಿ ಆ ಯೋಚನೆಯನ್ನು ಬದಿಗೊತ್ತಿ, ನೋಡೋಣ ಅಂದುಕೊಂಡು ಮುಖ್ಯಸ್ಥರ ಕಚೇರಿಗೆ ಹೋದಾಗ, ಅಲ್ಲಿ ಒಬ್ಬ ವಿದ್ಯಾರ್ಥಿ ಮತ್ತು ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳು, ಮತ್ತೊಬ್ಬ ಬೌನ್ಸರ್ ಕೂಡ ಇದ್ದರು.

ವಿಭಾಗದ ಮುಖ್ಯಸ್ಥರು, ಸರ್, ಈ ವಿದ್ಯಾರ್ಥಿ, ಇವತ್ತು ಐ.ಡಿ ಕಾರ್ಡ್ ಕೇಳಿದ ಸೆಕ್ಯೂರಿಟಿ ಗಾರ್ಡ್ ಮೇಲೆ ಸಣ್ಣದಾಗಿ ಹಲ್ಲೆ ಮಾಡಿದ್ದಾನೆ. ಕೇಳಿದಾಗ ಆ ಸೆಕ್ಯುರಿಟಿ ಗಾರ್ಡ್ ಸರಿಯಾಗಿ ಕೇಳಿರದೇ ತುಂಬಾ ಕೆಟ್ಟದಾಗಿ ಕೇಳಿದ್ದಾಗಿ ಹೇಳಿದ್ದಾನೆ. ಇವನ ತಂದೆ-ತಾಯಿಗಳು ತುಂಬಾ ಗೌರವ ಇರುವ ವ್ಯಕ್ತಿಗಳು, ಇಬ್ಬರೂ ಸಾಫ್ಟ್‌ವೇರ್ ಇಂಜಿನಿಯರ್‌ಗಳು. ಈ ವಿದ್ಯಾರ್ಥಿ ತುಂಬಾ ಬ್ರಿಲಿಯಂಟ್, ಅದಕ್ಕಾಗಿ ತಮ್ಮ ಜೊತೆ ಸಮಾಲೋಚನೆಗೆ ವ್ಯವಸ್ಥೆ ಮಾಡಿದ್ದೇವೆ. ತಾವು ಹುಡುಗನ ಜೊತೆ ಮಾತನಾಡಬಹುದು ಎಂದು ಹೇಳಿ, ಆ ವಿದ್ಯಾರ್ಥಿಯನ್ನು ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಬೌನ್ಸರ್‌ನ ಜೊತೆ ಕಳಿಸಿದರು.

ನನಗೆ ಸೆಕ್ಯೂರಿಟಿ ಗಾರ್ಡ್‌ಗಳು, ಬೌನ್ಸರ್‌ಗಳ ಅಗತ್ಯ ಇರಲ್ಲ, ವಿದ್ಯಾರ್ಥಿ ಒಬ್ಬನ ಜೊತೆ ಮಾತನಾಡುತ್ತೇನೆ, ಆಮೇಲೆ ಅಗತ್ಯ ಬಿದ್ದರೆ ಸೆಕ್ಯೂರಿಟಿ ಗಾರ್ಡ್ ಜೊತೆ ಮಾತನಾಡುತ್ತೇನೆ ಎಂದು ಹೇಳಿ, ಆ ವಿದ್ಯಾರ್ಥಿಯನ್ನು ನನ್ನ ಕಚೇರಿಗೆ ಕರೆದುಕೊಂಡು ಬಂದೆ. ಆ ವಿದ್ಯಾರ್ಥಿಯನ್ನು ಕೂರಲು ಹೇಳಿ ಮಾತಿಗಾರಂಭಿಸಿದೆ. ಅವನ ಹೆಸರು ಸೂರ್ಯ (ಹೆಸರು ಬದಲಾಯಿಸಲಾಗಿದೆ). ನೋಡು ಸೂರ್ಯ, ನಾನು ತನಿಖಾಧಿಕಾರಿಯಲ್ಲ, ನಿನ್ನನ್ನು ತನಿಖೆ ಮಾಡುವುದಿಲ್ಲ, ಕೇವಲ ನೀನು ಹೇಳಿದ ವಿಚಾರಗಳನ್ನು, ನಿನ್ನ ದೃಷ್ಟಿಕೋನದಿಂದಲೇ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತೇನೆ. ನಾನು ನಿನ್ನ ಸಮಸ್ಯೆಗೆ ಪರಿಹಾರ ಕೊಡಲು ಪ್ರಯತ್ನಿಸುವುದಿಲ್ಲ, ಆದರೆ ಸಮಸ್ಯೆಗೆ ನೀನೇ ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುತ್ತೇನೆ, ನೀನಾಗಿಯೇ ಏನಾಯಿತೆಂದು ಈಗ ಹೇಳಬಹುದು ಎಂದು ಹೇಳಿ ಸುಮ್ಮನಾದೆ.

> **ಸಮಸ್ಯೆಗಳನ್ನು ಎದುರಿಸಲು ನಮಗೆ ಬೇಕಾಗಿರುವುದು ಭಾವನಾ ಸಾಮರ್ಥ್ಯ. ನಮಗೆ ಎಷ್ಟೇ ಬುದ್ಧಿ ಶಕ್ತಿಯಿದ್ದರೂ, ಅದನ್ನು ಸರಿಯಾಗಿ ಬಳಸಿಕೊಳ್ಳಲು ಭಾವನಾ ಸಾಮರ್ಥ್ಯದ ಅಂಶಗಳ ಅಗತ್ಯವಿರುತ್ತವೆ.**

ಸರ್, ನಾನು ಯಾವುದೋ ವಿಷಯವನ್ನು ಯೋಚಿಸುತ್ತಾ ಬರುತ್ತಿದ್ದೆ, ಸೆಕ್ಯೂರಿಟಿ ಗಾರ್ಡ್ ಐ.ಡಿ. ಕಾರ್ಡ್ ಕೇಳಿದ್ದು ನನಗೆ ಕೇಳಿಸಿರಲಿಲ್ಲ, ಅವನು ಜೋರಾಗಿ ಕೇಳಿ, ನನ್ನನ್ನು ತಡೆದಾಗ, ತುಂಬಾ ಕೋಪ ಬಂದಿತ್ತು, ಆಗ ಸೆಕ್ಯೂರಿಟಿ ಗಾರ್ಡ್‌ನ ಮುಖ ತಿವಿದು ಒಳ ಹೋಗಲು ಪ್ರಯತ್ನಿಸಿದೆ. ಆಗ ಉಳಿದವರು ನನ್ನನ್ನು ತಡೆದು, ವಿಭಾಗದ ಮುಖ್ಯಸ್ಥರ ಬಳಿಗೆ ಕರೆದುಕೊಂಡು ಹೋದರು, ಅಷ್ಟೇ ಆಗಿದ್ದು, ನಾನು ಮಾಡಿರುವುದು ತಪ್ಪಿರಬಹುದು, ಆದರೆ ಆ ಸಮಯದಲ್ಲಿ ಅದನ್ನು ಬಿಟ್ಟು ನನಗೆ ಏನೂ ಹೊಳೆದಿರಲಿಲ್ಲ, ಬಹುಶಃ ಬೇರೆಯವರೂ ಅದನ್ನೇ ಮಾಡುತ್ತಿದ್ದರು, ಇದಕ್ಕೆಲ್ಲಾ ನಿಮ್ಮ ಬಳಿಗೆ ಬರುವ ಅಗತ್ಯವಿರಲಿಲ್ಲ ಅಂತ ಅನ್ನಿಸ್ತೆ, ನಾನು ಕಾಲೇಜಿನಲ್ಲಿ ತುಂಬಾ ಚೆನ್ನಾಗಿ ಓದುತ್ತಿದ್ದೇನೆ, ನನ್ನ ಬಗ್ಗೆ ಬೇರೆ ಯಾವ ರೀತಿಯ ದೂರುಗಳು ಇವತ್ತಿನವರೆಗೂ ಬಂದಿಲ್ಲ, ನನಗೆ ಯಾವುದೇ ರೀತಿಯ ಮಾನಸಿಕ ಖಾಯಿಲೆ ಇಲ್ಲ ಅಂತ ಸ್ಪಷ್ಟವಾಗಿ ಹೇಳಬಲ್ಲೆ.

ನಾನು, ನಿನಗೆ ಯಾವುದೇ ರೀತಿಯ ಮಾನಸಿಕ ಖಾಯಿಲೆ ಇದೆ ಅಂತ ಹೇಳುತ್ತಿಲ್ಲ, ಆದರೆ ಕೇವಲ ಅವನ ಕರ್ತವ್ಯ ಮಾಡಿದ ಸೆಕ್ಯೂರಿಟಿ ಗಾರ್ಡ್‌ನ ಮೇಲೆ ಹಲ್ಲೆ ಮಾಡಿರುವ ನಿನ್ನ ವರ್ತನೆಯನ್ನು ಒಪ್ಪಿಕೊಳ್ಳಲಾಗುತ್ತಿಲ್ಲ, ವಿದ್ಯಾರ್ಥಿಯಾಗಿದ್ದು ಐ.ಡಿ ಕಾರ್ಡ್ ಹಾಕಿಕೊಂಡು ಬರಬೇಕಾಗಿರುವುದು ನಿನ್ನ ಅರಿವಿನಲ್ಲಿರಬೇಕು, ಆ ಅರಿವು ನಿನ್ನಲ್ಲಿ ಇರದಿದ್ದಾಗ, ಅದನ್ನು ಬೇರೆಯವರು, ಸೆಕ್ಯೂರಿಟಿ ಕರ್ತವ್ಯದಲ್ಲಿರುವವರು ಕೇಳುವುದು, ತಡೆಯುವುದು ಸಾಮಾನ್ಯವಾದ ವಿಚಾರ, ಆದರೆ ಅದರ ಅರಿವು ನಿನಗೆ ಇರಲಿಲ್ಲ, ನೀನು ಮಾಡಬೇಕಾದ ಕರ್ತವ್ಯದ ಅರಿವು ನಿನಗೆ ಇರದಿದ್ದಾಗ, ಅದನ್ನು ಬೇರೆಯವರು, ನಿನಗೆ ಅದರ ಅರಿವನ್ನು ಮಾಡಿಸಬೇಕಾಗುತ್ತದೆ. ಆ ಸೆಕ್ಯೂರಿಟಿ ಗಾರ್ಡ್ ಮಾಡಿರುವುದೂ ಅದನ್ನೇ, ಆದರೆ ಅರಿವಿನ ಕೊರತೆಯಿದ್ದ ನೀನು, ನಿನ್ನ ಸುತ್ತಲಿನ ಜಾಗದ ಪರಿವೆಯೇ ಇರದೆ, ಯಾವುದೋ ಅನಿರೀಕ್ಷಿತವಾದ ಬೆದರಿಕೆಗೆ ಒಳಗಾದಾಗ ಸ್ಪಂದಿಸುವಂತೆ, ಸೆಕ್ಯೂರಿಟಿ ಗಾರ್ಡ್‌ನ ಮೇಲೆ ಹಲ್ಲೆ ಮಾಡಿರುವುದು, ನಿನ್ನ ಅರಿವಿನ, ಗ್ರಹಿಕೆಯ ಮತ್ತು ಸ್ವ-ನಿಯಂತ್ರಣದ ಕೊರತೆ ಎನ್ನಬಹುದು.

ಹಾಗೆಯೇ, ಸ್ವ-ಅರಿವಿನ ಕೊರತೆಯಿದ್ದಾಗ ನಮ್ಮ ಭಾವನೆಗಳಲ್ಲಾಗುವ ಬದಲಾವಣೆ, ಅದರ ತೀವ್ರತೆ ಮತ್ತು ನಿಯಂತ್ರಣದಲ್ಲಿ ಆಗುವ ಬದಲಾವಣೆಗಳ ವ್ಯತ್ಯಾಸ ಗೊತ್ತಾಗುವುದಿಲ್ಲ. ಸ್ವ- ಅರಿವು ಮತ್ತು ಭಾವನೆಗಳ ಅರಿವು, ಸಮಾಜದಲ್ಲಿ, ಸಾಂಘಿಕ ವ್ಯವಸ್ಥೆಯಲ್ಲಿ ಬದುಕಲು ಅತ್ಯವಶ್ಯಕ. ಅದಿಲ್ಲದಿದ್ದರೆ, ನಾವುಗಳು, ನೀನು ಸಿಕ್ಕಿ ಹಾಕಿಕೊಂಡ ಹಾಗೆ, ಸಮಸ್ಯೆಗಳಿಗೆ ಒಳಗಾಗುತ್ತೇವೆ. ಈ ಸಮಸ್ಯೆಗಳನ್ನು ಎದುರಿಸಲು ನಮಗೆ ಬೇಕಾಗಿರುವುದು ಭಾವನಾ ಸಾಮರ್ಥ್ಯ. ನಮಗೆ ಎಷ್ಟೇ ಬುದ್ಧಿ ಶಕ್ತಿಯಿದ್ದರೂ, ಅದನ್ನು ಸರಿಯಾಗಿ ಬಳಸಿಕೊಳ್ಳಲು ಭಾವನಾ ಸಾಮರ್ಥ್ಯದ ಅಂಶಗಳ ಅಗತ್ಯವಿರುತ್ತವೆ.

ನಿನ್ನಲ್ಲಿ ನಾನು ಗಮನಿಸಿರುವುದು ಭಾವನಾ ಸಾಮರ್ಥ್ಯದ ಕೊರತೆ, ಅದನ್ನು ಹೆಚ್ಚಿಸಿಕೊಂಡರೆ ಬಹುಶಃ ನಿನ್ನ ವೃತ್ತಿ ಜೀವನ ಸುಖಮಯವಾಗಿರಬಹುದು, ಇಲ್ಲದಿದ್ದರೆ, ತೀವ್ರ ಒತ್ತಡಕ್ಕೆ, ಸಮಸ್ಯೆಗಳಿಗೆ, ಅಂತರ್-ವ್ಯಕ್ತಿ ಸಂಬಂಧಗಳಲ್ಲಿನ ಬಿಕ್ಕಟ್ಟಿಗೆ ಕಾರಣವಾಗಬಹುದು. ನೀನಾಗಿಯೇ ಯೋಚಿಸಿ, ನಿನ್ನ ಪೋಷಕರೊಂದಿಗೆ ಚರ್ಚಿಸಿ, ನಿರ್ಧಾರಕ್ಕೆ ಬರುವುದು ಎಂದು ಹೇಳಿ ಸುಮ್ಮನಾದೆ.

ಸೂರ್ಯ, ಮೊದಲು ಒಪ್ಪಿಕೊಳ್ಳದಿದ್ದರೂ, ಕೊನೆಗೆ ತನಗೆ ಭಾವನಾ ಸಾಮರ್ಥ್ಯದ ಕೊರತೆಯಿದೆ, ಮತ್ತದು ತನ್ನ ಜೀವನದ ಬೇರೆ ಬೇರೆ ಸನ್ನಿವೇಶಗಳಲ್ಲಿ, ತನ್ನನ್ನು ತೀವ್ರವಾದ ಒತ್ತಡಕ್ಕೆ ಒಳಗಾಗುವಂತೆ ಮಾಡಿದೆ ಎಂದು ಒಪ್ಪಿಕೊಂಡ. ಮುಂದಿನ ಸುಮಾರು ಒಂದು ಸೆಮಿಸ್ಟರ್‌ನ ಅವಧಿಯಲ್ಲಿ ಆಪ್ತ-ಸಮಾಲೋಚನೆಗೆ ಬಂದು ಹೋದ. ಇದೆಲ್ಲ ಆಗಿ ಎರಡು ತಿಂಗಳ ನಂತರ, ಉತ್ತಮವಾದ ಸಂಸ್ಥೆಯೊಂದರಲ್ಲಿ ಕೆಲಸ ಸಿಕ್ಕಿದೆ ಎಂದು ಬಂದು ಹೇಳಿಹೋದ. ■

ಗಣತಿದಾರರ ಸಂಕಷ್ಟಕ್ಕೆ ಸ್ಪಂದಿಸಿ

ಮನೆಗಣತಿ ಕಾರ್ಯದಲ್ಲಿ ತೊಡಗಿರುವ ಗಣತಿದಾರರು ವಿಶೇಷವಾಗಿ ಶಿಕ್ಷಕರು ಮತ್ತು ಸರ್ಕಾರಿ ನೌಕರರು, ಹಲವು ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಪರಿಚಿತ ಮನೆಗಳಿಗೆ, ವಿಶೇಷವಾಗಿ ಅಸುರಕ್ಷಿತ ಪ್ರದೇಶಗಳಿಗೆ ಹೋಗುವುದು, ಬೀದಿ ನಾಯಿಗಳ ಕಾಟ ಮತ್ತು ವಿಪರೀತ ಬಿಸಿಲಿನ ತಾಪದ ನಡುವೆ ಕೆಲಸ ಮಾಡುವುದು ಕಷ್ಟಕರವಾಗಿದೆ.

ದೇಶಾದ್ಯಂತ ಈಗ ಬಿಸಿಲಿನ ತೀವ್ರತೆ ಹೆಚ್ಚಿದೆ. ಮಧ್ಯಾಹ್ನದ ವೇಳೆ ಹೊರಗೆ ಹೋಗಲು ಸಾಧ್ಯವಾಗುತ್ತಿಲ್ಲ. ಬಿಸಿಲ ಝಳದಿಂದ ಜನರು ಬಳಲಿ ಬೆಂಡಾಗಿದ್ದಾರೆ. ಈ ನಡುವೆ ಜನಗಣತಿ ಕಾರ್ಯದಲ್ಲಿ ತೊಡಗಿದ್ದ ಇಬ್ಬರು ಶಾಲಾ ಶಿಕ್ಷಕರು ಬಿಸಿಲಿನ ಹೊಡೆತದಿಂದ ಮೃತಪಟ್ಟಿರುವುದು ಆಘಾತಕಾರಿ ಸಂಗತಿ. ಬಿಸಿಲು, ಸೆಖೆಯಲ್ಲಿ ಕೆಲಸ ಮಾಡುವ ಜನಗಣತಿದಾರರಿಗೆ ಸರ್ಕಾರವು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು ಹೊರಡಿಸುವುದು ಅಗತ್ಯವಿದೆ.

ಹೆಚ್ಚುತ್ತಿರುವ ತಾಪಮಾನದಿಂದಾಗಿ ಅವರು ಬೆಳಗ್ಗೆ 11 ರಿಂದ ಮಧ್ಯಾಹ್ನ 3 ರ ವ ರೆ ಗೆ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ನಿಷೇಧಿಸಿ, ದಿನಕ್ಕೆ ಇಂತಿಷ್ಟು ಮನೆಗಣತಿ ಮಾಡಲೇಬೇಕೆಂಬ ಒತ್ತಾಯವನ್ನು ಯಾರು ಕೂಡ ಮಾಡದೇ, ಗಣತಿದಾರರು ಒತ್ತಡರಹಿತವಾಗಿ ನಿಗದಿಪಡಿಸಿದ ಒಂದು ತಿಂಗಳೊಳಗೆ ತಮಗೆ ವಹಿಸಿದ ಜವಾಬ್ದಾರಿಯನ್ನು ನಿರ್ವಹಿಸಲು ಮುಕ್ತ ಅವಕಾಶ ನೀಡಬೇಕಿದೆ. ಅಲ್ಲದೆ ಪ್ರತಿನಿತ್ಯ ಬಿಸಿಲಲ್ಲಿ ಸುತ್ತಾಡುವ ಗಣತಿದಾರರಿಗೆ ಸರ್ಕಾರ ಕೊಡೆ (ಛತ್ರಿ), ಟೋಪಿ, ಕುಡಿಯುವ ನೀರಿನ ಬಾಟಲ್ ಹಾಗೂ ಓರಲ್ ರೀಹೈಡ್ರೇಷನ್ ಸೊಲ್ಯೂಷನ್ ಒಳಗೊಂಡಂತಹ ಕಿಟ್‌ನ್ನು ಒದಗಿಸುವುದು ಅಗತ್ಯವಾಗಿದೆ.

ಏಕೆಂದರೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಮನೆಗಣತಿ ಆರಂಭವಾಗಿ 15 ದಿನಗಳೇ ಕಳೆಯುತ್ತಾ ಬಂದರೂ ಇನ್ನೂ ಗಣತಿದಾರರಿಗೆ ಕಿಟ್‌ನ ಸೌಲಭ್ಯ ಒದಗಿಸದಿರುವುದು ದುರ್ದೈವದ ಸಂಗತಿ. ಹೀಗಾಗಿ ಸರ್ಕಾರ ಗಣತಿದಾರರಿಗೆ ಸೂಕ್ತ ಸೌಲಭ್ಯ ಒದಗಿಸಿ ಅವರಿಗೆ ಮನೆಗಣತಿ ಸಮಯದಲ್ಲಿ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

▪ **ಹರಳಹಳ್ಳಿ ಪುಟ್ಟರಾಜು, ಪಾಂಡವಪುರ**

ಧಾರವಾಡ ಆಕಾಶವಾಣಿ ಸ್ಥಳಾಂತರ ನಿರ್ಧಾರ ಬೇಡ

ಧಾರವಾಡ ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗವನ್ನು ಮೇ 15, 2026ರಿಂದ ತಾತ್ಕಾಲಿಕವಾಗಿ ಬೆಂಗಳೂರಿಗೆ ಸ್ಥಳಾಂತರಿಸಲು ದಿಲ್ಲಿಯ ಪ್ರಸಾರ ಭಾರತಿಯು ನಿರ್ಧರಿಸಿರುವ ಸುದ್ದಿ ಉತ್ತರ ಕರ್ನಾಟಕ ಭಾಗದ ಜನರಿಗೆ ಆಘಾತವನ್ನುಂಟು ಮಾಡುವ ವಿಷಯವಾಗಿದೆ. ಕಳೆದ 44 ವರ್ಷಗಳಿಂದ ಜನಪ್ರಿಯವಾಗಿರುವ ಬೆಳಗಿನ 7-05ರ ಪ್ರದೇಶ ಸಮಾಚಾರ ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ ಜನನಾಡಿ. 5.5 ಕೋಟಿ ಕನ್ನಡಿಗರು ಕೇಳುವ, ವಿಶೇಷ ಛಾಪು ಮೂಡಿಸಿದ ಮತ್ತು ಜಾಹೀರಾತು, ಆದಾಯದ ದೃಷ್ಟಿಯಿಂದ ಪ್ರಾದೇಶಿಕ ಸುದ್ದಿ ವಿಭಾಗ ತನ್ನ ಕೊಡುಗೆ ನೀಡುತ್ತಿದೆ. ಆದಾಯದ ಸಮಸ್ಯೆಯೂ ಇಲ್ಲ. ಈ ಭಾಗದ ಧ್ವನಿಯಾದ ಬಾನುಲಿ ಸುದ್ದಿ ವಿಭಾಗ, ಜನತೆಯ ಜೀವನಾಡಿ . ಕಸಿದು ಬೆಂಗಳೂರಿಗೆ ಸ್ಥಳಾಂತರಿಸಿದಲ್ಲಿ ಪ್ರಾದೇಶಿಕ ಸೊಗಡು, ವಿಷಯ ವೈವಿಧ್ಯ, ಪ್ರಾಧಾನ್ಯತೆಗಳಿಗೆ ಧಕ್ಕೆಯಾಗುವದು. ಈಗಾಗಲೇ ಇಲ್ಲಿ ಅವಶ್ಯವಿರುವ ಎಲ್ಲ ಸೌಲಭ್ಯಗಳಿದ್ದು ಇದನ್ನು ತಾತ್ಕಾಲಿಕವಾಗಿ ಬೆಂಗಳೂರಿಗೆ ಸ್ಥಳಾಂತರಿಸುವ ನಿರ್ಧಾರ ಅಂದರೆ ಬಹುಶಃ ಧಾರವಾಡ ಆಕಾಶವಾಣಿ ಕೇಂದ್ರವನ್ನು ಮುಚ್ಚುವ ಮೊದಲ ತಂತ್ರ. ಸಕಾರಣಗಳಿಲ್ಲದೆ ಇದನ್ನು ಮಾಡುವ ಬದಲು ಬೆಂಗಳೂರಿನಲ್ಲಿರುವ ಪ್ರಾದೇಶಿಕ ಸುದ್ದಿ ವಿಭಾಗವನ್ನು ಧಾರವಾಡಕ್ಕೆ ಸ್ಥಳಾಂತರಿಸಿ ಆಕಾಶವಾಣಿ ಧಾರವಾಡವನ್ನು ಬಲಿಷ್ಠಪಡಿಸಿರಿ. ಇಲ್ಲವಾದರೆ ಒಂದೊಂದೇ ವಿಭಾಗಗಳನ್ನು ಸ್ಥಳಾಂತರಿಸುತ್ತ ಇಡೀ ಧಾರವಾಡ ಆಕಾಶವಾಣಿ ಕೇಂದ್ರವನ್ನು ಸ್ಥಳಾಂತರ ಮಾಡುವರೇನೋ ಎಂಬ ಸಂಶಯ ಬರುತ್ತದೆ. ಹೀಗಿರುವಾಗ ಈ ಭಾಗದ ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರಿಗೆ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಧಾರವಾಡ ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಕಾರ್ಯಕ್ಕೆ ತಡೆ ತರಲು ಎಲ್ಲ ರೀತಿಯ ಪ್ರಯತ್ನ ಮಾಡಬೇಕು.

▪ **ರವೀಂದ್ರ ಆಕಳವಾಡಿ,**
ಉದಯ ಮ. ಯಂಡಿಗೇರಿ, ಧಾರವಾಡ

ದ್ವಿಚಕ್ರ ವಾಹನ ಸವಾರರಿಗೆ ನೆರಳಿನ ವ್ಯವಸ್ಥೆ ಮಾಡಿ

ಬೇಸಿಗೆಯ ಸುಡು ಬಿಸಿಲಿನಿಂದ ಜನರು ಈಗಾಗಲೇ ಹೈರಾಣಾಗಿದ್ದು, ಅದರಲ್ಲೂ ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದು. ಒಂದು ಕಡೆ ಬಿಸಿಲಿನ ತಾಪ ಮತ್ತೊಂದು ಕಡೆ ಪೂರ್ಣ ಪ್ರಮಾಣದ ಹೆಲ್ಮೆಟ್ ಧರಿಸಿ ರಸ್ತೆಯಲ್ಲಿ ಸಂಚರಿಸುವುದಂತೂ ನಿಜಕ್ಕೂ ನರಕವೇ ಸರಿ.

ಇನ್ನು ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗೋಸ್ಕರ ದಿನನಿತ್ಯ ವಾಹನ ಸವಾರರು ನಿಮಿಷಗಟ್ಟಲೆ ಕಾಯುವುದೇ ಒಂದು ಸವಾಲಿನ ಕೆಲಸವಾಗಿದೆ ಅದರಲ್ಲೂ ವಯೋವೃದ್ಧರು, ಚಿಕ್ಕ ಮಕ್ಕಳು, ಮಹಿಳೆಯರು ಬಿಸಿಲಿನ ತಾಪ ತಾಳಲಾರದೆ ಬಿಸಿಲಾಘಾತಕ್ಕೆ ತುತ್ತಾಗುವ ಸಾಧ್ಯತೆಯೂ ಇದೆ.

ಈಗಾಗಲೇ ರಾಜ್ಯದ ಹಲವಾರು ಜಿಲ್ಲೆಗಳ, ಪ್ರಮುಖ ನಗರಗಳ ವೃತ್ತಗಳಲ್ಲಿ ವಾಹನ ಸವಾರರಿಗೆ ಬಿಸಿಲಿನಿಂದ ರಕ್ಷಣೆ ನೀಡಲು ಹಸಿರು ಹೊದಿಕೆಯ ತಾತ್ಕಾಲಿಕ ನೆರಳಿನ ವ್ಯವಸ್ಥೆಯನ್ನು ಮಾಡಲಾಗಿದೆ. ಅದರಂತೆಯೇ ನಮ್ಮ ದಾವಣಗೆರೆಯ ಪ್ರಮುಖ ವೃತ್ತಗಳಲ್ಲಿ ವಾಹನ ಸವಾರರಿಗೆ ತಾತ್ಕಾಲಿಕ ನೆರಳಿನ ವ್ಯವಸ್ಥೆಯನ್ನು ಕಲ್ಪಿಸಲು ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳಬೇಕಾಗಿದೆ.

▪ **ಮುರುಗೇಶ ಡಿ., ದಾವಣಗೆರೆ**

ಎಲ್ಲ ಕ್ರೀಡಾಂಗಣಗಳಿಗೆ ಸಮಾನ ಅವಕಾಶ ಸಿಗಲಿ

ಜಗತ್ತಿನ ಅತಿ ದೊಡ್ಡ ಕ್ರಿಕೆಟ್ ಮೈದಾನವಾದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಭಾರತದಲ್ಲಿ ನಡೆಯುವ ಎಲ್ಲ ಮಾದರಿಯ ಕ್ರಿಕೆಟ್ ಫೈನಲ್‌ಗಳಿಗೆ ಭಾರತದ ಲಾರ್ಡ್ಸ್ ಕ್ರೀಡಾಂಗಣವಾಗುತ್ತಿದೆ. ಈ ಹಿಂದೆ ನಡೆದಿರುವ ಬಹುತೇಕ ಫೈನಲ್ ಪಂದ್ಯಗಳಿಗೆ ನರೇಂದ್ರ ಮೋದಿ ಕ್ರೀಡಾಂಗಣ ಆತಿಥ್ಯ ವಹಿಸುತ್ತಿರುವುದು ಈ ಕಾರಣದಿಂದ ದೇಶದ ಪ್ರಮುಖ ನಗರಗಳಲ್ಲಿರುವ ವಿವಿಧ ಕ್ರೀಡಾಂಗಣದ ಬೆಳವಣಿಗೆಗೆ ಒಂದು ರೀತಿಯ ಹೊಡೆತ ಬೀಳಲಿದೆ. ಈ ಹಿಂದೆ ಪ್ರಮುಖ ಪಂದ್ಯಾವಳಿಗಳ ಫೈನಲ್ ಪಂದ್ಯಗಳು ಮುಂಬೈನ ವಾಂಖೆಡೆ ಮತ್ತು ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದವು. ಇದರಿಂದ ಮುಂಬೈ ಕೇಂದ್ರೀಕೃತವಾಗಿ ಕ್ರಿಕೆಟ್‌ನಲ್ಲಿ ಅವಕಾಶಗಳು ಹೆಚ್ಚು ಸೃಷ್ಟಿಯಾದವು. ಇದರಿಂದ ಮಹಾರಾಷ್ಟ್ರ ರಾಜ್ಯ ಒಂದರಲ್ಲಿ ಮೂರು ರಣಜಿ ತಂಡಗಳು ಇವೆ. ಗುಜರಾತ್‌ನಲ್ಲಿ ಎರಡು ರಣಜಿ ತಂಡಗಳು ಇವೆ. ಬದಲಾದ ಕಾಲಘಟ್ಟದಲ್ಲಿ ಈಗ ಗುಜರಾತ್‌ನ ಅಹ್ಮದಾಬಾದ್ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಶಿಫ್ಟ್ ಆಗಿವೆ. ಇದರ ಬದಲು ಎಲ್ಲ ಕ್ರೀಡಾಂಗಣಕ್ಕೆ ಆತಿಥ್ಯ ವಹಿಸುವ ಜವಾಬ್ದಾರಿ ನೀಡಬೇಕಾಗಿದೆ. ಬೆಂಗಳೂರಿನ ಚಿನ್ನಸ್ವಾಮಿ, ಚೆನ್ನೈನ ಚೆಪಾಕ್, ಹೈದರಾಬಾದ್‌ನ ರಾಜೀವ್ ಗಾಂಧಿ, ಕೊಚ್ಚಿನ್, ಪಣಜಿ, ಕೊಲ್ಕತ್ತಾ ಸೇರಿದಂತೆ ಅನೇಕ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸುವ ಅವಕಾಶವನ್ನು ಬಿಸಿಸಿಐ ನೀಡಬೇಕಾಗಿದೆ.

ಇದರ ಬದಲು ಕೇವಲ ಅಹ್ಮದಾಬಾದ್ ಕ್ರೀಡಾಂಗಣಕ್ಕೆ ಹೆಚ್ಚು ಅವಕಾಶಗಳು ಸಿಗುವಂತಾಗಬಾರದು. ಎಲ್ಲ ಪ್ರಮುಖ ಮೈದಾನಗಳಿಗೆ ಅವಕಾಶ ಸಿಗಬೇಕು.

▪ **ಮೇಘನಾ ಮಲ್ಲಪ್ಪ, ಬ್ಯಾಡಗಿ**

ಅಂತರಂಗದ ಸುದ್ದಿ-ಭಯಂಕರ ಬುದ್ದಿ

ತಾರಾತಿಗಡಿ

ನರಸಿಂಹ ಫುಲಿಹೈದರ್
ಮುಖ್ಯ ವರದಿಗಾರ

ಅಲ್ಲೆಲ್ಲೋ ಟಿವಿಯಲ್ಲಿ ಕುಳಿತು ಲೊಂಡೆನುಮನು ತನ್ನ ಇಂಟಲಿಜೆಂಟ್ ವರದಿಗಾರ್ತಿ ಕಿವುಡನುಮಿಗೆ ಲೈವ್‌ನಲ್ಲಿ ತೆಗೆದುಕೊಂಡ...ನೋಡಿ ಅಲ್ಲಿ ಏನು ನಡೀತಾ ಇದೆ ಎಂದು ಇಲ್ಲಿಂದಲೇ ನಾವು ನಿಮಗೆ ಹೇಳುತ್ತೇವೆ. ನೀವು ಕಿವಿಗೊಟ್ಟು ಕೇಳಿ..ಕಿವಿ ಕೇಳದಿದ್ದರೆ ಕಿವಿ ಮಷಿನ್ ಹಾಕಿಕೊಂಡು ಕೇಳಿ. ನೀವು ಕೇಳದೇ ಇದ್ದರೆ ಏನೋ ಕಳೆದುಕೊಂಡಂತೆ ಆಗುತ್ತದೆ ನಾವು ಹೇಳಲಿಲ್ಲ ಅಂತ ಆಮೇಲೆ ನಮ್ಮ ಮೇಲೆ ಗೂಬೆ ಕೂಡಿಸುವುದು ಬೇಡ ಎಂದು ಜೋರಾಗಿ ಒದರತೊಡಗಿದ. ಮರುಕ್ಷಣವೇ ನಮ್ಮ ಕಿವುಡನುಮಿ ಲೈವ್ ಗೆ ಬಂದಿದ್ದಾಳೆ..ಅವಳನ್ನೇ ಕೇಳೋಣ.....ಹಲೋ ಕಿವುಡನುಮಿ ಏನು ನಡೀತಾ ಇದೆ ಅಲ್ಲಿ ಎಂದು ಕೇಳಿದ್ದೇ ತಡ ಆಕೆ...



ಮಿಸ್ಟರ್ ಲೊಂಡೆನುಮ ಲಿಸನ್.... ಇಲ್ಲಿ ಮದ್ರಾಮಣ್ಣೋರು ಅದು ಅನ್ನುತ್ತಾರೆ..ಬಂಡೇಸಿ ಅವರು ಇದು ಅನ್ನುತ್ತಾರೆ. ಅವರಿಬ್ಬರ ಕಡೆಯುವರು ಅದೂ ಇದೂ ಎಂದು ಎರಡೂ ಅನ್ನುತ್ತಾರೆ. ಇನ್ನೊಂದೆಡೆ...ಉತ್ಸವಪ್ಪ ಅವರು ನನಗ್ಯಾಕ್ರೋ ಮಾರಾಯ ಅನ್ನುತ್ತ ಗುಲಾಬಿ ಹೂವಿನ ಹಾರ ಹಾಕಿಸಿಕೊಳ್ಳಲು ಹೋಗುತ್ತಿದ್ದಾರೆ...ಅವರರಂತೂ ಮನೆಯ ಅಟ್ಟದ ಮೇಲೆ ಕುಳಿತು...ನಾನು ಯಂಗ್... ಹೆಂಗ ಅಂದ್ರೆ ಯಂಗ್ ಅಂದ್ರೆ ಯಂಗ್ ಅನ್ನುತ್ತಿದ್ದಾರೆ. ಅವರ ಕಂದ ಸುಮಾರಣ್ಣೋರು ನೋಡಿ ಬ್ರದರ್ ಇಲ್ಲಿ ಯಾರೂ ಏನೂ ಅನ್ನುವ ಹಾಗಿಲ್ಲ. ತಡೀ ತಡೀ ಬ್ರದರ್...ಐತೆ ಬ್ರದರ್..ಒಂದು ಮಾತು ಹೇಳುತ್ತೇನೆ ಕೇಳು ಬ್ರದರ್ ಎಂದು ಅನ್ನುತ್ತಿದ್ದಾರೆ. ಇದರಲ್ಲಿ ಅವರೇನು ಅನ್ನುತ್ತಾರೆ ಅನ್ನುವುದೇ ಸಸ್ಪೆನ್ಸ್. ಇನ್ನು ಅಲ್ಲಿ ಅಕ್ಕ ಡುಮ್ಮಿ ಹೊಡೆದಿದ್ದಕ್ಕೆ ಕಮಲೇಸಿ ಮತ್ತು ಗ್ಯಾಂಗ್‌ನವರು ಲಕ್ಷ್ಮಿ ಅಟಂಬಾಂಬ್ ಅನಿಸುತ್ತಿದ್ದಾರೆ. ಬಾಲನಟ ವಿಜ್ಯಪ್ಪ ಗೆದ್ದಾನೆ..ವಟ್ರ ಕಂ..ವಟ್ರ ಕಂ ಎಂದು ಇವರು ಹೇಳುತ್ತಿದ್ದಾರೆ ಎಂದು ಅನ್ನುತ್ತಿದ್ದಂತೆ ಮತ್ತೆ ನಿಮ್ಮನ್ನು ಸಂಪರ್ಕಿಸುತ್ತೇನೆ ಎಂದು ಅಂದ ಲೊಂಡೆನುಮ...ಈ ಕಡೆ ಮುಖ ತಿರುಗಿಸಿ...ನೋಡಿದ್ರಾ..ನೋಡಿದ್ರಾ ಅವರೆಲ್ಲ ಏನು ಹೇಳಿದರು ಅಂತ.. ಇದೇ ನಮ್ಮ ಅಂತರಂಗ ಸುದ್ದಿ-ಶಾರ್ಪಾದ ಬುದ್ದಿ ಎಂದು ಗಟಗಟ ನೀರು ಕುಡಿದ. ■

75 ವರ್ಷಗಳ ಹಿಂದೆ.. ಅಮೃತ ಸಮಾಚಾರ 08-05-1951 ಮಂಗಳವಾರ

ಚೀನಕ್ಕೆ ಆರ್ಥಿಕ ದಿಗ್ಬಂಧನ ಹಾಕಬೇಕು

ವಾಶಿಂಗ್ಟನ್ 7- ಚೀನಕ್ಕೆ ಹಾಂಗಕಾಂಗದಿಂದ ಸರಕು ನಿರ್‍ಯಾತವಾಗುವದನ್ನು ನಿಲ್ಲಿಸಿ ಚಿನದ ಮೇಲೆ ಆರ್ಥಿಕ ದಿಗ್ಬಂಧನವನ್ನು ಹಾಕಬೇಕು ಎಂದು ಅಮೇರಿಕೆಯ ವಿದೇಶ ಮಂತ್ರಿ ಜನರಲ ಮಾರ್ಶಲರು ಇಂದು ಹೇಳಿದರು.ಅಮೇರಿಕೆಯ ಅತಿಪ್ರಾಚ್ಯ ಧೋರಣದ ಬಗ್ಗೆ ಜನರಲ್ ಮೆಕಾರ್ಥರರು ಸಿನೇಟ ವಿಚಾರಣೆ ಸಮಿತಿಯ ಗುಪ್ತ ಸಭೆಯಲ್ಲಿ ಇತ್ತ ಹೇಳಿಕೆಗೆ ಉತ್ತರವಾಗಿ ಈಗ ಜನರಲ ಮಾರ್ಶಲರು ಉತ್ತರಿಸುತ್ತ ಟ್ರೂಮನ್ನರ ಧೋರಣವನ್ನು ಎತ್ತಿ ಹಿಡಿದರು. ಜನರಲ್ ಮಾರ್ಶಲರ ಹೇಳಿಕೆಯ ಲಿಖಿತ ಪ್ರತಿಯನ್ನು ಪ್ರಜಾ ಹಿತದ ದೃಷ್ಟಿಯಿಂದ ಪ್ರಸಿದ್ಧಿಗೆ ಕೊಡದಿದ್ದರೂ ಸಿನೇಟ ವಿಚಾರಣೆ ಸಮಿತಿಗೆ ಒಪ್ಪಿಸಲಾಗುತ್ತಿತ್ತು.

ಬಂಡುಗಾರ ಕಾಂಗ್ರೆಸ್ಸಿಗರಿಂದ ಹೊಸ ಪಕ್ಷದ ಸ್ಥಾಪನೆ

ಹೊಸದಿಲ್ಲಿ 7- ಆಚಾರ್ಯ ಕೃಪಲಾನಿ ಅವರ ಮನೆಯಲ್ಲಿ ಕಳೆದೆರಡು ದಿನಗಳಲ್ಲಿ ಪ್ರಜಾರಂಗದ ಧುರೀಣರು ವಿಚಾರ ವಿನಿಮಯ ನಡೆಸಿ ತಮ್ಮ ಮುಂದಿನ ಕಾರ್ಯಕ್ರಮದ ಬಗ್ಗೆ ಕೆಲ ನಿರ್ಣಯಗಳನ್ನು ತೆಗೆದುಕೊಂಡಿದ್ದು ಹೊಸ ಪಕ್ಷವನ್ನು ಸ್ಥಾಪಿಸುವರೆಂದು ತಿಳಿದುಬಂದಿದೆ.

ಸಂಯುಕ್ತ ಬಂಧ 5951



ಉತ್ತರ: 5950

ಎಡದಿಂದ ಬಲಕ್ಕೆ
3.ಅಂಜನ 5.ಭದ್ರತೆ 7.ವನ 9.ಜಯ 10.ರಜಾ 12.ಯಮುನ 13.ಆಳು 14.ಮತಿ 15.ಚರಣ 16.ದನ 17.ಪಿಕ 19.ತಿಲ 21.ಪುನೀತ 23.ವರಸೆ

ಮೇಲಿನಿಂದ ಕೆಳಕ್ಕೆ
1.ಗಜ 2.ರುದ್ರ 3.ಅಂಬರ 4.ನವ 5.ಭಯ 6.ತೆಗಳು 8.ನಯವಂಚಕ 9.ಜನಗಣತಿ 11.ಜಾಗೃತಿ 13.ಆನಂದ 14.ಮತಾಪು 17.ನಕಾಸೆ 18.ಪಿತ 20.ಲವ 22.ನೀಲಿ 24.ರವಿ

ಎಡದಿಂದ ಬಲಕ್ಕೆ

1	ನವ ನಾಗರಿಕನಂತೆ ವರ್ತಿಸುವ ಮನುಷ್ಯ	3
3	ನಾದಿನಿ ಸದ್ದಿಲ್ಲದೆ ನುಡಿಸಿದ ಷಹನಾಯಿ	3
5	ಜಯಭೇರಿ ವೇಳೆ ನುಡಿಸಿದ ಚರ್ಮವಾದ್ಯ	2
6	ನರಳಾಟವನ್ನು ಅಭಿನಯಿಸಿದ ಕಲಾವಿದ	2
7	ಹಗರಣದಲ್ಲಿ ಗ್ರಹ ನುಗ್ಗಿದಾಗ ದುಡ್ಡು ಸೇರಿಸಿ	5
9	ನಗುನಗುತ್ತ ನರರು ವಾಸಿಸುವ ಪಟ್ಟಣ	3
11	ಮನದಲ್ಲಿನ ವಿಷ್ಣು ಬಲಿಯನ್ನು ಸಂಹರಿಸಿದ	3
13	ಇದು ಇಂಚರದ ಶಬ್ದವಲ್ಲ ಅಂತಿಮ ಹಾಡು	3
15	ಸಡಗರದಿಂದ ಓಡಾಡಿಕೊಂಡಿರುವ ಗೃಹಿಣಿ	3
16	ಕಲಿಗಾಲದಲ್ಲಿ ಹೆಚ್ಚಾದ ಖೋಟಾ ದುಡ್ಡು	5
19	ದ್ವಾರಕೆಗೆ ಇದೇ ಬಾಗಿಲು	2
21	ನನ್ನದಲ್ಲ, ಮುದ್ದಿಸುವವರ ಹಣದ ಪೆಟ್ಟಿಗೆ	2
22	ಅವಸರದಲ್ಲಿ ಅಣಿಗೊಳಿಸಿದ ಮೆಟ್ಟಿಲ ಸಾಲು	3
23	ಮಣಿ ಧರಿಸಿದ ಸುಂದರಿ	3

ಮೇಲಿನಿಂದ ಕೆಳಕ್ಕೆ

1	ಮಾದರಿ ಜನರಿಗೆ ಒಲಿದ ಗ್ರಾಮದೇವತೆ	2
2	ತವರಿನ ಋಣ ತೀರಿಸಿದ ಮಳೆದೇವತೆ	3
3	ಅಗ್ರಸ್ಥಾನದಲ್ಲಿರಿಸಿದ ಇಲ್ಲಿ ಎಲ್ಲ ಸೇರಿದೆ	3
4	ಮಂದಿ ನಕ್ಕ ದಿವಸ	2
7	ಹರಟೆ ಹೊಡೆಯುತ್ತ ನಿಂತ ಶಿವ	2
8	ಮೋಹವಾಗಿರುವ ಕಡೆ ಬೀಸಿದ ಗಾಳಿ	2
10	ಮಾರಣಹೋಮಕ್ಕೆ ಬಲಿಯಾದ ದಡ್ಡ	3
12	ಮಕಮಲ್ಲು ಟೋಪಿ ಧರಿಸಿದ ಮೊಸಳೆ	3
14	ಮಹಾನದಿ ಹರಿದಾಗ ತುಂಬಿದ ಭಾವ	2
15	ಗಣಪತಿಯ ಸುತ್ತ ಸುತ್ತಿದ ಗುಂಪು	2
17	ದೇಗುಲದ ಬಳಿಯ ಮಂಗಳಕರ ಪುಷ್ಕರಿಣಿ	3
18	ಹಮ್ಮಿನಿಂದ ಇರಬಲ್ಲ ಶೂರ	3
20	ಸರಸವಾದ ಮಧುರ ದ್ರವ	2
21	ಅಗಣಿತ ಸಂಪತ್ತು ಹೊಂದಿದ ನಿಕ್ಷೇಪ	2

ದಿನ ವಿಶೇಷ

ಶುಕ್ರವಾರ: 08.05.2026

▪ **ಶ್ರೀ ಶಾಲಿವಾಹನ ಶಕೆ 1948**

▪ **ಸೌರಮಾಸ: ಮೇಷ, ದಿನ: 24**

▪ **ಮು. ಮಾಸ: ದುಲ್ ಖದಾ, ದಿನ: 21**

ಪರಾಭವ ಸಂವತ್ಸರ, **ಅಯನ:** ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ಷಷ್ಠೀ (12.22), **ನಿತ್ಯನಕ್ಷತ್ರ:** ಉತ್ತರಾಷಾಢ (21.18), **ಯೋಗ:** ಶುಭ (26.29), **ಕರಣ: ಭದ್ರಾ (25.17)**
ಮಾಸ ನಿಯಾಮಕ: ಕಮಲಾಲಯ ಮಧುಸೂದನ
ಸೂರ್ಯೋದಯ: 06.00 (**ನಾಳೆ:** 06.00)
ಸೂರ್ಯಾಸ್ತ: 06.48 (**ನಾಳೆ:** 06.48)
ಮಳೆನಕ್ಷತ್ರ: ಭರಣೀ ನಾಲ್ಕನೆಯ ಪಾದ.

ತುಂಬುರ ಮಹರ್ಷಿ ಜಯಂತಿ. ಸ್ವಾಮಿ ಚಿನ್ಮಯಾನಂದ ಜಯಂತಿ. ಅಂಕೋಲಾ ತಾ. ಕುಂಡೋದರಿ ಪ್ರತಿಷ್ಠಾಪನಾ ದಿನ. ಮಾವಿನಕುರ್ವೆ ಬಂಡಿಹಬ್ಬ. ಮಾನ್ವಿ ವೆಂಕಟರಮಣ ಉತ್ಸವ. ಮೇಲುಕೋಟೆ ಪಲ್ಲಕ್ಕಿ ಉತ್ಸವ. ಯದುಗಿರಿಯಲ್ಲಿ ವಸಂತೋತ್ಸವ. ಜೇವರ್ಗಿ ಷಣ್ಮುಖ ಶಿವಯೋಗಿ ರಥ. ರೆಡ್‌ಕ್ರಾಸ್ ಸ್ಥಾಪಕ ಹೆನ್ರಿ ಡ್ಯುನಾಂಟ್, ಸ್ವಾತಂತ್ರ್ಯ ಹೋರಾಟಗಾರ ಗೋಪಬಂಧು ಚೌಧರಿ, ಸಂಗೀತಶಾಸ್ತ್ರಜ್ಞ ಜ್ಞಾನಪ್ರಕಾಶ್ ಘೋಷ್, ಸಂಗೀತಗಾರ್ತಿ ಗಿರಿಜಾದೇವಿ, ವಿಮರ್ಶಕ ಜಿ.ಎಸ್. ಆಮೂರ, ಕಾದಂಬರಿಕಾರ ಶಂಕರ ಮೊಕಾಶಿ ಪುಣೇಕರ ಜನ್ಮದಿನ. ವಿಶ್ವ ಥಲಸ್ಸೆಮಿಯಾ ಜಾಗೃತಿ ದಿನ. ವಿಶ್ವ ರೆಡ್ ಕ್ರಾಸ್ ದಿನ.

ಕ್ಷಮಾಶೀಲತೆಯತ್ತ ಧಾವಿಸಿ

ಮನುಷ್ಯ ದೇವರ ಉತ್ಕೃಷ್ಟ ರಚನೆ. ಅವನಿಗೆ ಅತ್ಯುತ್ತಮ ಶರೀರ ನೀಡಿ ವಿಚಾರ, ಚಿಂತನೆ, ವಿವೇಚನೆ, ಜ್ಞಾನ, ಬುದ್ಧಿಯಂತಹ ಸಾಮರ್ಥ್ಯಗಳನ್ನು ನೀಡಲಾಗಿದೆ. ಎಲ್ಲ ಧರ್ಮಗಳು ಮನುಷ್ಯನನ್ನು ದೇವರು ಸೃಷ್ಟಿಸಿದ ಶ್ರೇಷ್ಠ ಜೀವಿ ಎಂದು ನಂಬುತ್ತವೆ.

ತನ್ನ ರಚನೆಯಲ್ಲಿ ದೇವರಿಗೆ ಎಲ್ಲಿಲ್ಲದ ಸಂತೃಪ್ತಿ. ಮನುಷ್ಯನ ಉತ್ಕರ್ಷಕ್ಕಾಗಿ ಅನೇಕ ಒಳಿತುಗಳನ್ನು ನಿರ್ಮಿಸಿ ಕೆಡಕುಗಳಿಂದ ದೂರವಿರುವ ವಿಧಿವಿಧಾನಗಳನ್ನು ಮನುಷ್ಯನಿಗೆ ಬೋಧಿಸಿದ. ಅಷ್ಟೇ ಅಲ್ಲ. ತನ್ನ ರಚನೆಯನ್ನು ಮರೆಯಲಿಲ್ಲ. ಮಾನವನ ಮೇಲಿನ ಪ್ರೀತಿ ಕರುಣೆಯಿಂದ ಇಡೀ ತನ್ನ ಸೃಷ್ಟಿಯನ್ನು ಅವನ ಉಪಯೋಗಕ್ಕಾಗಿ ನೀಡಿದ. ಕಟ್ಟುಪಾಡುಗಳನ್ನು ಹೇಳಿ ಅವನ ಒಳಿತಿಗಾಗಿ ಅವುಗಳನ್ನು ಮೀರದಂತೆ ಉಪದೇಶಿಸಿದ.

ಈ ಕಟ್ಟುಪಾಡು, ವಿಧಿವಿಧಾನಗಳನ್ನು ಮಾನವ ಮುರಿದು ಪಾಪಕೃತ್ಯಗಳಲ್ಲಿ ತೊಡಗಿದಾಗ ದೇವರು ಅವನಿಂದ ಕ್ಷಮಾಯಾಚನೆ ಬಯಸುತ್ತಾನೆ. ತಪ್ಪು ಮಾಡಿದ ಮಾನವನನ್ನು ಕ್ಷಮಿಸಿ ಉದ್ಧರಿಸಲು ಸದಾ ಸಿದ್ಧನಾಗಿರುತ್ತಾನೆ. ಮನುಷ್ಯ ತನ್ನಲ್ಲಿ ಕ್ಷಮಾಯಾಚನೆ ಮಾಡಿದಾಗಲೆಲ್ಲ ದೇವರು ಸಂತೋಷಪಡುತ್ತಾನೆ ಎಂದು ದಾರ್ಶನಿಕರು ಹೇಳುತ್ತಾರೆ. ತಾನು ನಿರ್ಮಿಸಿರುವ ಮಾನವನಿಗೆ ಪ್ರತಿಯೊಂದು ಸನ್ನಿವೇಶದಲ್ಲಿ ಸಹಾಯ ಮಾಡುತ್ತೇನೆ ಎನ್ನುತ್ತಾನೆ ದೇವರು.

ಗುರುಬೋಧೆ
ಜಿ.ಎಂ. ಶಿರಹಟ್ಟಿ
ದೂರದರ್ಶನ ಮಾಜಿ ನಿರ್ದೇಶಕರು

ಕುರಾನಿನ ಸುಮಾರು 25ಕ್ಕೂ ಹೆಚ್ಚು ಅಧ್ಯಾಯಗಳಲ್ಲಿ ದೇವರು ಈ ವಾಗ್ದಾನವನ್ನು ವಿವರಿಸಿದ್ದಾನೆ (ಅಲ್ ಹಜ್ ಅಹಝಾಬ, ಸಬಾ, ಫಾತಿರ್, ಯಾಸೀನ ಹುಜುರಾತ ಮುಂತಾದವು). ಅನ್ನಿಸಾ (4:99) ಅಧ್ಯಾಯದಲ್ಲಿ ಅಲ್ಲಾಹನು ಮನ್ನಿಸುವವನು, ಕ್ಷಮಾಶೀಲನಾಗಿದ್ದಾನೆ ಎಂದು ಹೇಳಲಾಗಿದೆ. ಅಲ್ ಇಮ್ರಾನ್ (3:155) ಅಧ್ಯಾಯದಲ್ಲಿ ಅಲ್ಲಾಹನು ಮಹಾ ಕ್ಷಮಾಶೀಲನಾಗಿದ್ದಾನೆ. ಅಲ್‌ಹದೀದ (29:21) ಅಧ್ಯಾಯದಲ್ಲಿ, ಧಾವಿಸಿರಿ ನಿಮ್ಮ ಒಡೆಯನ ಕ್ಷಮೆಯಡೆಗೆ ಎಂದೂ ಆಜ್ಞಾಪಿಸಲಾಗಿದೆ. ನನ್ನಲ್ಲಿ ಕ್ಷಮೆ ಯಾಚಿಸಿ, ನಾನು ಖಂಡಿತ ಕ್ಷಮಿಸುವೆನು ಎಂಬ ದೇವರ ಅಭಯವನ್ನು ಇಂಥ ಎಲ್ಲ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಪ್ರವಾದಿವರ್ಯ ಮುಹಮ್ಮದ (ಸ) ಅವರು, ನಾನು ನೂರು ಬಾರಿ ಕ್ಷಮೆ ಯಾಚಿಸುತ್ತೇನೆ. ನೀವು ಹಾಗೆ ಮಾಡಿರಿ ಎಂದು ಉಪದೇಶಿಸುತ್ತ; ದೇವರು ಮಾನವನಿಂದ ಕ್ಷಮಾಯಾಚನೆ ಬಯಸುತ್ತಾನೆ ಹಾಗೂ ಅವನನ್ನು ಕರೆಯುವವರಿಗೆ ಓಗೊಡಲು ಸದಾ ಸಿದ್ಧನಾಗಿರುತ್ತಾನೆ ಎಂದು ತಮ್ಮ ಹದೀಸ್‌ಗಳಲ್ಲಿ ವಿವರಿಸಿದ್ದಾರೆ.

ಇಂದು ಮಾನವ ಪ್ರತಿ ಕ್ಷಣ ವಿಚಲಿತ ಸ್ಥಿತಿಯಲ್ಲಿ ಸಿಲುಕಿ ದೇವರನ್ನು ನೆನಪಿಸಿಕೊಳ್ಳಲೂ ಸಹ ಸಮಯಾವಕಾಶ ಇಲ್ಲದಂತಾಗಿದ್ದಾನೆ. ಈ ದೌರ್ಬಲ್ಯದಿಂದ ಪಾರಾದಾಗ ನಮ್ಮಲ್ಲಿ ಕ್ಷಮಾಯಾಚನೆ ಉಂಟಾಗಿ ನಾವು ಆತನ ಕ್ಷಮಾಶೀಲತೆಗೆ ಅರ್ಹರಾಗುತ್ತೇವೆ. ಕ್ಷಮೆ ಕೇಳಿರಿ, ಕೃತಜ್ಞರಾಗಿರಿ, ನಿಮಗೆ ಹೆಚ್ಚಿನ ಅನುಗ್ರಹ ನೀಡುವೆನು (ಅಧ್ಯಾಯ ಇಬ್ರಾಹೀಮ 14:9) - ಇದು ದೇವರು ಮನುಷ್ಯನಿಗೆ ನೀಡಿದ ವಾಗ್ದಾನ. ಅವನನ್ನು ಕರೆಯಿರಿ, ಅವನು ಕೂಗಳತೆಯಲ್ಲಿಯೇ ಇದ್ದಾನೆ. ■

ಇಂದಿನ ಭವಿಷ್ಯ

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು,
ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

ರಾಹು ಕಾಲ
ಬೆ. 10.30ರಿಂದ 12
ಗುಳಿಕ ಕಾಲ
ಬೆ. 07.30ರಿಂದ 09
ಯಮಗಂಡ ಕಾಲ
ಮ. 03ರಿಂದ 04.30
ಶುಭ ಸಂಖ್ಯೆ
1-6-4-3

ಮೇಷ: ತಪ್ಪು ನಿರ್ಧಾರಗಳಿಂದ ತೊಂದರೆ. ಹೊಸ ಜನರ ಪರಿಚಯ. ವೃತ್ತಿರಂಗದ ಅಡಚಣೆಗಳಿಗೆ ಮುಕ್ತಿ.

ವೃಷಭ: ಆಧ್ಯಾತ್ಮಿಕ ಪ್ರಯಾಣ. ಕಾನೂನಾತ್ಮಕ ವಿಚಾರಗಳಲ್ಲಿ ಕೊಂಚ ಹಿನ್ನಡೆ. ತರಕಾರಿ ವ್ಯಾಪಾರಿಗಳಿಗೆ ಲಾಭ.

ಮಿಥುನ: ನಂಬಿಗಸ್ಥರಿಂದ ಮೋಸ. ಸ್ತ್ರೀಯರಿಂದ ಧನಲಾಭ ಸಂಗೀತಗಾರರಿಗೆ ಶುಭ. ವೃತ್ತಿಯಲ್ಲಿ ಬಡ್ತಿ ಲಭ್ಯ.

ಕರ್ಕ: ಹೊಸ ಒಪ್ಪಂದಕ್ಕೆ ಚಾಲನೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ. ತಾಂತ್ರಿಕ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶುಭ.

ಸಿಂಹ: ಪಿತ್ರಾರ್ಜಿತ ಆಸ್ತಿ ಲಾಭ. ಸರ್ಕಾರದ ಅಧಿಕಾರಿಗಳಿಗೆ ಒತ್ತಡ. ಯಂತ್ರವನ್ನು ಖರೀದಿ ಮಾಡುವ ಯೋಗ.

ಕನ್ಯಾ: ಹಿರಿಯರ ಸಹಕಾರ. ಅನಪೇಕ್ಷಿತ ಜನರ ಜೊತೆ ಮನಸ್ತಾಪ. ಆತ್ಮಗೌರವಕ್ಕೆ ಧಕ್ಕೆ. ಕೃಷಿಕರಿಗೆ ಲಾಭ.

ತುಲಾ: ಷೇರು ವ್ಯವಹಾರದಲ್ಲಿ ಅಲ್ಪ ಲಾಭ. ಅನಿರೀಕ್ಷಿತ ಧನಾಗಮನ. ಪಾಲುದಾರಿಕೆ ವ್ಯವಹಾರಗಳಲ್ಲಿ ಶುಭ.

ವೃಶ್ಚಿಕ: ದಾಯಾದಿ ಬಂಧುಗಳಿಂದ ಶುಭ. ಗೃಹನಿರ್ಮಾಣ ಕಾರ್ಯಾದಿಗಳಿಗೆ ಪುನಃ ಚಾಲನೆ. ಸ್ನೇಹಿತರ ಸಹಕಾರ.

ಧನು: ಸಿಮೆಂಟ್ ವ್ಯಾಪಾರಸ್ಥರಿಗೆ ಲಾಭ. ಕೆತ್ತನೆ ಕೆಲಸಗಾರರಿಗೆ ಶುಭ. ವೈದ್ಯರಿಗೆ ಒತ್ತಡ. ವಿವಾಹಕಾರ್ಯ ವಿಳಂಬ.

ಮಕರ: ಕಳಂಕಿತರಿಂದ ದೂರವಿರಿ. ಕ್ರೀಡಾಳುಗಳಿಗೆ ಶುಭ. ಧಾರ್ಮಿಕ ಗುರು ಭೇಟಿ. ಕೈಗೊಂಡ ಕೆಲಸ ವಿಳಂಬ.

ಕುಂಭ: ವೃತ್ತಿಯ ಸಲುವಾಗಿ ತಿರುಗಾಟ. ದುಡುಕಿನ ನಿರ್ಧಾರದಿಂದ ತೊಂದರೆ. ಲೆಕ್ಕ ಪರಿಶೋಧಕರಿಗೆ ಶುಭ.

ಮೀನ: ಸ್ತ್ರೀಯರಿಂದ ಲಾಭ. ಕರ್ಮ ಸಂಬಂಧಿತ ವ್ಯಾಧಿ. ಆತುರದ ನಿರ್ಧಾರ ಬೇಡ. ದೂರದ ಪ್ರಯಾಣ.

Editor : Mahabaleshwar V. Bhat, Printed and Published by **Ashok Shanbhag** on behalf of Loka Shikshana Trust, Printed and published at Samyukta Karnataka Press, Koppikar Road, Hubballi.
Phone No.0836/2364303 to 06 Advt:2364304 Cir:2364305, e-mail : (editorial) editorsk@gmail.com, RNI Regn.No.3544/57 **Executive Editor : Mohan Hegde**

ಚುಟುಕು ಸುದ್ದಿ

ಸರ್ವೇಯರ್ ಲೋಕಾಯುಕ್ತ ಬಲೆಗೆ

ಹೊಸಪೇಟೆ: ಜಮೀನೊಂದರ ಹದ್ದುಬಸ್ತು ಮಾಡಲು ಲಂಚ ಸ್ವೀಕರಿಸಿದ್ದ ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿಯ ಭೂಮಾಪನ ಇಲಾಖೆಯ ಕಚೇರಿಯ ಸರ್ವೇಯರ್‌ನನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.



ಫೋನ್ ಪೇ ಮೂಲಕ ಹಣ : ಸರ್ವೇಯರ್ ಕೊಟ್ರೇಶ್ ನಾಯ್ಕನನ್ನು ಹರಪನಹಳ್ಳಿ ತಾಲೂಕಿನ ನಂದಿಬೇವೂರು ತಾಂಡಾದಲ್ಲಿಬಂಧಿಸಲಾಗಿದೆ. ತಾಲೂಕಿನ ವರದಾಪುರ ಗ್ರಾಮದ ಹಳ್ಳಿ ದೇವೇಂದ್ರಪ್ಪ ಎನ್ನುವವರ ಜಮೀಮಿನ ಹದ್ದುಬಸ್ತು ಮಾಡಲು ಸರ್ವೇಯರ್ 2024 ರಿಂದ ರೈತನನ್ನು ಸತಾಯಿಸುತ್ತ ಹಣಕ್ಕೆ ಬೇಡಿಕೆ ಇಟ್ಟಿದ್ದನು. 10 ಸಾವಿರ ರೂ. ಪಡೆದೂ ಮತ್ತೆ 30 ಸಾವಿರ ರೂ.ಗೆ ಬೇಡಿಕೆ ಇಟ್ಟಿದ್ದನು.

ರೈತ ದೇವೇಂದ್ರಪ್ಪ ಫೋನ್ ಪೇ ಮೂಲಕ ಹಣ ಪಾವತಿಸಿದ್ದರು. ಸರ್ವೇಯರ್ ಕಾಟ ತಡೆಯಲಾಗದೇ ರೈತ ಹಳ್ಳಿ ದೇವೇಂದ್ರಪ್ಪ ಸ್ವತಃ ಲೋಕಾಯುಕ್ತ ಪೊಲೀಸ್‌ರಿಗೆ ದೂರು ನೀಡಿದ್ದನು.

ಡಿವೈಎಸ್‌ಪಿ ಸಚಿನ್.ಎಸ್ ಛಲವಾದಿ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕ ರಾಜೇಶ ಎಸ್.ಲಮಾಣಿ ನೇತೃತ್ವದಲ್ಲಿ ದಾಳಿ ನಡೆದಿದೆ. ಇನ್ಸ್‌ಪೆಕ್ಟರ್ ಅಮರೇಶ್, ಸುರೇಶ, ಶ್ರೀನಿವಾಸ, ರೇಣುಕಪ್ಪ, ಕುಮಾರ ನಾಯ್ಕ, ಚನ್ನಬಸಪ್ಪ, ಕೃಷ್ಣ ತಂಡದಲ್ಲಿದ್ದರು.

ರೈಲು ಸಂಚಾರ ಭಾಗಶಃ ರದ್ದು

ಹುಬ್ಬಳ್ಳಿ : ಕ್ಯಾಸಲ್‌ರಾಕ್ ಮತ್ತು ಕುಲೇಮ್ ನಡುವಿನ ಘಟ್ಟ ಭಾಗದಲ್ಲಿ ಹಳಿ ನಿರ್ವಹಣ ಕಾಮಗಾರಿ ನಡೆಯುತ್ತಿರುವುದರಿಂದ ಮೇ 4 ರಿಂದ 11ರವರೆಗೆ, ಮೇ 18 ರಿಂದ ಮೇ 25 ರವರೆಗೆ ಮತ್ತು ಜೂನ್ 1 ರಂದು ‘ಜಸಿಡಿಹ್’ನಿಂದ ಹೊರಡುವ ಜಸಿಡಿಹ್ –ವಾಸ್ಕೋಡಗಾಮಾ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು (ರೈಲು ಸಂಖ್ಯೆ– 17322) ಹುಬ್ಬಳ್ಳಿ ಮತ್ತು ವಾಸ್ಕೋಡಗಾಮಾ ನಿಲ್ದಾಣಗಳ ನಡುವೆ ಭಾಗಶಃ ರದ್ದಾಗಲಿದೆ ಎಂದು ನೈರುತ್ಯ ರೈಲ್ವೆ ವಲಯ ಪ್ರಕಟಣೆ ತಿಳಿಸಿದೆ.

ಮೇ 15 ಕೊನೆಯ ದಿನ

ಹೊಸಪೇಟೆ: ಜಿಲ್ಲೆಯ ವಸತಿ ರಹಿತ ಹಾಗೂ ನಿವೇಶನ ರಹಿತ ಅರ್ಹ ಫಲಾನುಭವಿಗಳು ಸರ್ಕಾರದ ವಿವಿಧ ವಸತಿ ಯೋಜನೆಗಳ ಲಾಭ ಪಡೆಯಲು ಮೇ 15ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿ ಪಂ ಮುಖ್ಯ ಕಾ ನಿ ಅಧಿಕಾರಿ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

2018ರ ಸಮೀಕ್ಷಾ ಪಟ್ಟಿಯಲ್ಲಿರುವ ಅರ್ಹರನ್ನು ಕೈಬಿಟ್ಟು, ಬಿಟ್ಟುಹೋಗಿರುವ ಅರ್ಹ ಫಲಾನುಭವಿಗಳನ್ನು ಸೇರಿಸಲು ಅವಕಾಶ ನೀಡಿದೆ. 2026–27ನೇ ಸಾಲಿನ ಆಯವ್ಯಯದಲ್ಲಿ ರಾಜ್ಯಾದ್ಯಂತ ಐಐ ಆಧಾರಿತ 1 ಲಕ್ಷ ಹೊಸ ಮನೆಗಳ ಗುರಿ ಹಂಚಿಕೆಯಾಗಿದ್ದು, ಆನ್‌ಲೈನ್ ಲಾಟರಿ ಮೂಲಕ ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ನಡೆಯಲಿದೆ. ಅದ್ದರಿಂದ ಅರ್ಹ ವಸತಿ ರಹಿತರ ಹೆಸರನ್ನು ಪಟ್ಟಿಗೆ ಸೇರಿಸಲು ಇದೇ ಮೇ 15 ಕೊನೆಯ ದಿನವಾಗಿದೆ. ನಂತರ ಪಟ್ಟಿಯನ್ನು ಸ್ಥಗಿತಗೊಳಿಸಲಾಗುವುದು. ಯಾವುದೇ ಅರ್ಹ ಫಲಾನುಭವಿಗಳು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ವಹಿಸಲಾಗಿದೆ.

ಅರ್ಹರನ್ನು ಕೈಬಿಟ್ಟಿರುವುದು ಕಂಡುಬಂದಲ್ಲಿ ಪಿಡಿಒಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ನಿಟ್ಟಿನಲ್ಲಿ ಈ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ಅತ್ಯಂತ ತುರ್ತಾಗಿ ಮತ್ತು ಆಂದೋಲನದ ಮಾದರಿಯಲ್ಲಿ ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ವಸತಿ ರಹಿತ ಸಾರ್ವಜನಿಕರು ತಕ್ಷಣವೇ ತಮ್ಮ ಗ್ರಾ ಪಂ ಸಂಪರ್ಕಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಜಿ ಪಂ ಮುಖ್ಯ ಕಾ ನಿ ಅಧಿಕಾರಿ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ ಬೈಕ್ ಸವಾರ ಸಾವು

ತಂಬ್ರಹಳ್ಳಿ(ಹಗರಿಬೊಮ್ಮನಹಳ್ಳಿ): ತಾಲೂಕಿನ ವಲ್ಲಭಾಪುರ ಗ್ರಾಮದ ಬಳಿ ಬೈಕ್ ಅಪಘಾತವಾಗಿ ಸ್ಥಳದಲ್ಲಿ ಯುವಕ ಸಾವನ್ನಪ್ಪಿದ ಘಟನೆ ಗುರುವಾರ ಸಂಜೆ ನಡೆದಿದೆ.

ಹಗರಿಬೊಮ್ಮನಹಳ್ಳಿ ಪಟ್ಟಣದ ಹಳೆ ಊರಿನ ನೇಕಾರ ಕಾಲೋನಿ ನಿವಾಸಿ ಮುಂಡರಗಿ ನಾಗರಾಜ (37) ಮೃತ ಬೈಕ್ ಸವಾರ. ಕೊಟ್ಟೂರಿನ ಖಾಸಗಿ ಬ್ಯಾಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದನು. ಪಟ್ಟಣಕ್ಕೆ ಹಿಂದಿರುಗುವ ವೇಳೆ ಸಂಜೆ 4 ಗಂಟೆಗೆ ಅಪಘಾತವಾಗಿದ್ದು, ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಬೈಕ್ ಸವಾರ ಬಿದ್ದು ಸಾವನಪ್ಪಿದ್ದಾನೆ.

20 ದಿನದ ಹಿಂದೆಯಷ್ಟೇ ಮದುವೆಯಾಗಿತ್ತು, ಈ ಕುರಿತು ಹಬೊಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೇಂದ್ರ ಸರ್ಕಾರದ ಪಿ.ಎಂ. ಸ್ವನಿಧಿ ಯೋಜನೆ | ಬೀದಿ ಬದಿ ವ್ಯಾಪಾರಿಗಳ ಉಪ ಘಟಕದಡಿ ಸಹಯೋಗ | ಒಂದೇ ಸೂರಿನಡಿ ಗುಣಮಟ್ಟದ ಖಾದ್ಯ

ಹಂಪಿ ಮೆರುಗಿಗೆ ಇನ್ನು ಶುಚಿ ರುಚಿ ತಿನಿಸಿನ ಬೆಡಗು

ಹೊಸಪೇಟೆ: ವಿಶ್ವವಿಖ್ಯಾತ ಪ್ರವಾಸಿ ತಾಣ ಹಂಪಿಯಲ್ಲಿ ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ಒಂದೇ ಸೂರಿನಡಿ ತರಹೇವಾರಿ ಗುಣಮಟ್ಟದ ಆಹಾರ ಖಾದ್ಯಗಳ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಪಿ.ಎಂ. ಸ್ವನಿಧಿ ಯೋಜನೆಯಡಿ ಅತ್ಯಾಧುನಿಕಸ್ಟ್ರೀಟ್‌ಫುಡ್‌ಹಬ್‌ಸ್ಥಾಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಪಿಎಂ ಸ್ವನಿಧಿ ಯೋಜನೆಯಡಿ ಸ್ಟ್ರೀಟ್ ಫುಡ್ ಹಬ್ ಸ್ಥಾಪನೆಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಂಪಿಗೆ ಬರುವ ಸಾವಿರಾರು ದೇಶಿ–ವಿದೇಶಿ ಪ್ರವಾಸಿಗರಿಗೆ ಒಂದೇ ಸೂರಿನಡಿ ಸ್ವಚ್ಛ ಹಾಗೂ ವೈವಿಧ್ಯಮಯ ಆಹಾರಗಳನ್ನು ಒದಗಿಸುವುದು ಈ ಫುಡ್ ಹಬ್‌ನ ಮುಖ್ಯ ಉದ್ದೇಶವಾಗಿದೆ. ಇದರಿಂದ ಸ್ಥಳೀಯ ಬೀದಿ ಬದಿ ವ್ಯಾಪಾರಿಗಳಿಗೂ ಆರ್ಥಿಕ ಸಬಲೀಕರಣಕ್ಕೆ ಅವಕಾಶ ಸಿಗಲಿದ್ದು, ಹಂಪಿಯ ಪ್ರವಾಸೋದ್ಯಮಕ್ಕೆ ಹೊಸ ಮೆರುಗು ಸಿಗಲಿದೆ.

ಹೊಸಪೇಟೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸ್ಟ್ರೀಟ್ ಫುಡ್ ಹಬ್ ಸ್ಥಾಪನೆ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿದರು.

ಕೇಂದ್ರ ಸರ್ಕಾರದ ಪಿ.ಎಂ. ಸ್ವನಿಧಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳ ಉಪ ಘಟಕದಡಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ರಾಜ್ಯದಲ್ಲಿ ಚಾಮುಂಡಿ ಬೆಟ್ಟ, ಬೇಲೂರು–ಹಳೇಬೀಡು, ಗಾಣಗಾಪುರ, ಪಟ್ಟದಕಲ್ಲು ಹಾಗೂ ಹಂಪಿ ಸೇರಿ 5 ಪ್ರದೇಶಗಳಲ್ಲಿ ಸ್ಟ್ರೀಟ್ ಫುಡ್ ಹಬ್

ಅದರಂತೆ ರಾಜ್ಯದಲ್ಲಿ ಚಾಮುಂಡಿ ಬೆಟ್ಟ, ಬೇಲೂರು–ಹಳೇಬೀಡು, ಗಾಣಗಾಪುರ, ಪಟ್ಟದಕಲ್ಲು ಹಾಗೂ ಹಂಪಿ ಸೇರಿ 5 ಪ್ರದೇಶಗಳಲ್ಲಿ ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು ನಿರ್ಧರಿಸಲಾಗಿದೆ. ಅದರಲ್ಲಿ ನಮ್ಮ ಹಂಪಿಯೂ ಸೇರಿದ್ದು, ಹೆಮ್ಮೆಯ ಸಂಗತಿ.

ಸ್ಥಾಪಿಸಲು ನಿರ್ಧರಿಸಲಾಗಿದೆ. ಅದರಲ್ಲಿ ನಮ್ಮ ಹಂಪಿಯೂ ಸೇರಿದ್ದು, ಹೆಮ್ಮೆಯ ಸಂಗತಿ. ಈ ಸ್ಟ್ರೀಟ್ ಫುಡ್ ಹಬ್ ಸ್ಥಾಪಿಸಲು ಒಂದು ಕ್ಲಸ್ಟರ್‌ಗೆ 4 ಕೋಟಿ ವೆಚ್ಚದಲ್ಲಿ ತಾತ್ಕಾಲಿಕ ಮಳಿಗೆ ಸ್ಥಾಪಿಸಿ ವ್ಯಾಪಾರ ನಡೆಸಲು ಅನುಮತಿ ನೀಡಲಾಗುವುದು.

ಜಂಟಿ ಕಾರ್ಯನಿರ್ವಹಣೆ : ಈ ಯೋಜನೆಯ ಅನುಷ್ಠಾನಕ್ಕಾಗಿ ಹಂಪಿ ಗ್ರಾಮ ಪಂಚಾಯಿತಿ ಹಾಗೂ ಕಮಲಾಪುರ ಪುರಸಭೆ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ. ಈಗಾಗಲೇ ಈ ಯೋಜನೆಗಾಗಿ ಮಳಿಗೆ ಸ್ಥಾಪಿಸಲು ಮೂರು ಸ್ಥಳ ಗುರುತಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪೈಕಿ ಈಗಾಗಲೇ ದೊಡ್ಡ ಆಲದ ಮರದ ಎದುರು ಹಾಗೂ ಹಂಪಿ ಪಾರ್ಕಿಂಗ್ ಸ್ಥಳದ ಹತ್ತಿರ ಗುತ್ತಿಲ್ಯಾಂಡ್ ಸೇರಿ ಎರಡು ಕಡೆ ಸ್ಥಳ ಸಹ ಗುರುತಿಸಲಾಗಿದ್ದು, ಭೂಮಿ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ ನಿಟ್ಟಿನಲ್ಲಿ ಒಂದು ಸ್ಟ್ರೀಟ್ ಫುಡ್ ಹಬ್‌ನಲ್ಲಿ 50 ಜನ ವ್ಯಾಪಾರಸ್ಥರಿಗೆ ಅವಕಾಶವಿದ್ದು, ದೇಶ ವಿದೇಶಗಳಿಂದ ಆಹಾರ ಅರಸಿ ಬರುವವರಿಗೆ ಶುಚಿ ಮತ್ತು ರುಚಿಯಾದ ಶುದ್ಧ ಆಹಾರ ಒದಗಿಸಬೇಕು. ಜತೆಗೆ ಗ್ರಾಹಕರಿಗೆ ನೀರು, ನೆರಳು ಸೇರಿ ಅಗತ್ಯ ಮೂಲ ಸೌಕರ್ಯಗಳನ್ನೊಳಗೊಂಡಂತೆ ಮಳಿಗೆಗಳ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.

ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಉಪವಿಭಾಗಾಧಿಕಾರಿ ವಿವೇಕಾನಂದ, ತಹಶೀಲ್ದಾರ್ ಶೃತಿ ಎಂ, ಹಂಪಿ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ರಮೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಜಿಲ್ಲಾ ಅಭಿಯಾನ ವ್ಯವಸ್ಥಾಪಕ ದೇವರಾಜ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಚಿಕಿತ್ಸೆಗೆ ದಾಖಲಾಗಿದ್ದ ಕೈದಿ ಆಸ್ಪತ್ರೆಯಲ್ಲಿ ಸಾವು

ಬಳ್ಳಾರಿ: ಹೊಟ್ಟೆ ನೋವು ಎಂದು ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಕೈದಿಯೊಬ್ಬರು ಮೃತಪಟ್ಟ ಘಟನೆ ನಡೆದಿದೆ.

ಬಿಮ್ಸ್ ವೈದ್ಯರು ಮತ್ತು ಜೈಲ್ ಸಿಬ್ಬಂದಿ ನಿರ್ಲಕ್ಷ್ಯಕ್ಕೆ ಕೈದಿ ಮೃತಪಟ್ಟಿದ್ದಾನೆ ಎಂಬುದು ಕುಟುಂಬಸ್ಥರ ಆರೋಪವಾಗಿದೆ. ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿ ಹನುಮಂತು (25) ಮೃತಪಟ್ಟ ಕೈದಿ.

ಹನುಮಂತು ಮೂಲತಃ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಸಂಕನಾಳು ಗ್ರಾಮದ ನಿವಾಸಿಯಾಗಿದ್ದ ಈತನನ್ನು ಜನವರಿ ತಿಂಗಳಲ್ಲಿ ಬಳ್ಳಾರಿ ಜೈಲಿನಲ್ಲಿ ಇಡಲಾಗಿತ್ತು.

ಏನಿದು ಘಟನೆ :

ಏಪ್ರಿಲ್ 29ಕ್ಕೆ ಹೊಟ್ಟೆ ನೋವು ಕಾರಣಕ್ಕೆ ಬಳ್ಳಾರಿ ಜೈಲಿನಿಂದ ಬಿಮ್ಸ್ ಆಸ್ಪತ್ರೆಗೆ ಕೈದಿ ಹನುಮಂತು ದಾಖಲಾಗಿದ್ದನು. ಒಂದು ವಾರದಿಂದ ಆಸ್ಪತ್ರೆಗೆ ದಾಖಲಿಸಿದ್ದರೂ ಕುಟುಂಬಸ್ಥರಿಗೆ ಮಾಹಿತಿ ನೀಡಿರಲಿಲ್ಲ. ಆದರೆ ನಿನ್ನೆ ಮೇ.6ರಂದು ಹೊಟ್ಟೆ ನೋವು ತೀವ್ರಗೊಂಡು ಆಸ್ಪತ್ರೆಯಲ್ಲಿ ಹನುಮಂತು ಸಾವನಪ್ಪಿದ್ದಾನೆ. ನನ್ನ ಅಣ್ಣ ಸತ್ತ ಮೇಲೆ ಪೊಲೀಸರು ರಾತ್ರಿ 12 ಗಂಟೆಗೆ ಫೋನ್ ಮಾಡಿದ್ದಾರೆ ಎಂದು ಆತನ ಸಹೋದರಿ ಮರಿಯಮ್ಮ ಆರೋಪಿಸಿದ್ದಾರೆ.

ಮೊದಲು ನಮಗೆ ಮಾಹಿತಿ ನೀಡಿಲ್ಲ ಎಂದು ಮೃತರ ತಂಗಿ ಮರಿಯಮ್ಮ ಗಂಭೀರ ಆರೋಪ ಮಾಡಿದ್ದಾಳೆ. ನಮ್ಮ ಅಣ್ಣನ ಸಾವಿಗೆ ಪೊಲೀಸರ ಮತ್ತು ವೈದ್ಯರ ನಿರ್ಲಕ್ಷ್ಯವೇ ಕಾರಣ ನಮಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದ್ದಾಳೆ. ನಾಲ್ಕು ತಿಂಗಳು ಬಳ್ಳಾರಿ ಜೈಲಿನಲ್ಲಿ ಆರಾಮವಾಗಿದ್ದ ಇದೀಗ ಏಕಾಏಕಿ ಮೃತ ಪಟ್ಟಿರುವ ಬಗ್ಗೆ ನಮಗೆ ಅನುಮಾನ ಇದೆ ಈ ಬಗ್ಗೆ ತನಿಖೆ ನಡೆಯಬೇಕು ಎಂದೂ ಒತ್ತಾಯಿಸಿದ್ದಾರೆ.

ಭಕ್ತರ ಆಶಯದಂತೆ ನೂತನ ಶಿವಾಲಯ

ಕೂಡ್ಲಿಗಿ: ಪಾಳೆಗಾರರ ನಾಡಿನ ಪುರಾತನ ತೊಲೆ, ಕಂಬಗಳ ದೇವಾಲಯವನ್ನು ನಿರ್ಮೂಲನೆಗೊಳಿಸಿ, ಅದೇ, ಶಕ್ತಿ ಸ್ಥಳದಲ್ಲಿಯೇ ನೂತನ ಶಿಲಾಮಂಟಪದ ದೇವಸ್ಥಾನ ಭಕ್ತರ ಆಶಯದಂತೆ ನಿರ್ಮಿಸಲಾಗಿದೆ ಎಂದು ಗ್ರಾಮ ದೇವತೆ ಊರಮ್ಮ ದೇವಿ ದೇವಸ್ಥಾನದ ಕಮಿಟಿ ಅಧ್ಯಕ್ಷ ಕೆ.ಹೆಚ್. ವೀರನಗೌಡ್ರು ಹೇಳಿದರು. ಪಟ್ಟಣದ ಊರಮ್ಮ ದೇವಸ್ಥಾನದಲ್ಲಿ ಸೇರಿದ ಸದ್ಭಕ್ತರ ಸಮ್ಮುಖದಲ್ಲಿ ನೂತನ ದೇವಸ್ಥಾನ ನಿರ್ಮಾಣ, ಜಾತ್ರ ಮಹೋತ್ಸವ, ಇತ್ಯಾದಿ ಖರ್ಚುಗಳ ಲೆಕ್ಕಾಚಾರದ ಸಭೆಯಲ್ಲಿ ಅವರು ಮಾತನಾಡಿದರು. 2022ರಲ್ಲಿ ದೇವಸ್ಥಾನ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಹಾಕಿ ಕಾಮಗಾರಿ ಆರಂಭವಾಯಿತು. ನಂತರ ಕೇವಲ ಎರಡು ವರ್ಷದಲ್ಲಿ ಅತ್ಯಂತ ಭವ್ಯವಾದ ಬೃಹತ್ ಶಿಲೆಗಳಿಂದ ನಿರ್ಮಾಣದ ದೇವಸ್ಥಾನವಾಯಿತು.

ಭಕ್ತರ ಅಪೇಕ್ಷೆಯಂತೆ, ಜಾತ್ರೆ ಮಾಡಲು ತೀರ್ಮಾನಿಸಲಾಯಿತು. ಕಳೆದ ವರ್ಷ ಮೇ ತಿಂಗಳಲ್ಲಿ ಅದ್ದೂರಿ ಜಾತ್ರಾಮಹೋತ್ಸವ ನಡೆಯಿತು. ಇದೆಲ್ಲವೂ ಭಕ್ತ ಶ್ರೇಷ್ಠರ ಕಾಣಿಕೆಯಿಂದಾಗಿದೆ ಎಂದರು. ಊರಿನ ದೈವಸ್ಥರು ಹಾಗೂ ಭಕ್ತರ ಸಮ್ಮುಖದಲ್ಲಿ ಖರ್ಚು, ವೆಚ್ಚದ ಲೆಕ್ಕವನ್ನು ನೀಡಿದರು. ಮಲ್ಲಾಪುರದ ಭರಮಣ್ಣ, ಪಪಂ ಮಾಜಿ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ, ಬಿ. ಭೀಮೇಶ, ಸಣ್ಣ ಕೊತ್ಲಪ್ಪ, ಟಿ.ಜಿ. ಮಲ್ಲಿಕಾರ್ಜುನ ಗೌಡ, ಬಾಣದ ಶಿವಶಂಕರ್, ಕೆ.ಬಿ. ನಾಗರಾಜ ಸೇರಿದಂತೆ ಇತರರಿದ್ದರು.

ಸಿಲೆಂಡರ್ ಸ್ಫೋಟ : ಅಪಾಯದಿಂದ ಪಾರು

ಕೂಡ್ಲಿಗಿ: ಪಟ್ಟಣದ ಬಸವೇಶ್ವರ ವೃತ್ತದ ಬಳಿ ಚಿಕನ್ ಅಂಗಡಿಯಲ್ಲಿ ಗ್ಯಾಸ್ ಸಿಲೆಂಡರ್ ಸ್ಫೋಟವಾಗಿ ಅಂಗಡಿ ಮಾಲೀಕ ಸೇರಿದಂತೆ ಸಾರ್ವಜನಿಕರು ಪ್ರಾಣಾಪಾಯದಿಂದ ಪಾರಾದ ಘಟನೆ ಜರುಗಿದೆ. ಎಂದಿನಂತೆ ಅಂಗಡಿ ಮಾಲೀಕ ಗ್ಯಾಸ್ ಹಚ್ಚಿದ್ದಾನೆ. ಸ್ಟವ್‌ನಿಂದ ಸಿಲಿಂಡರ್‌ಗೆ ಹೋಗಿರುವ ಪೈಪ್ ಹಾಳಾಗಿದ್ದು, ಒಲೆಗೆ ಬೆಂಕಿ ಹಚ್ಚಿದ ತಕ್ಷಣ ಪೈಪ್ ಮೂಲಕ ಬೆಂಕಿ ಆವರಿಸಿದೆ. ಇದರಿಂದ ವಿಚಲಿತನಾದ ಮಾಲೀಕ ಅಂಗಡಿಯಿಂದ ಹೊರಗಡೆ ಓಡಿ ಬಂದಿದ್ದಾನೆ. ಇದೇ ರಸ್ತೆಯ ಮಾರ್ಗವಾಗಿ ಹೋಗುತ್ತಿದ್ದ ಪಿಎಸ್‌ಐ ಪ್ರಕಾಶ ತಕ್ಷಣವೇ ಜಾಗೃತರಾಗಿ ಸಾರ್ವಜನಿಕರು ಆ ಮಾರ್ಗದಲ್ಲಿ ಸಂಚಾರ ಮಾಡದಂತೆ ರಸ್ತೆಯನ್ನು ನಿರ್ಬಂಧ ಮಾಡಿದ್ದಾರೆ. ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ.

ನಂತರ ಬೆಂಕಿ ಅಂಗಡಿಯನ್ನು ಆವರಿಸಿ ಸಿಲಿಂಡರ್ ಸ್ಫೋಟವಾಗಿದೆ. ಯಾರಿಗೂ ಪ್ರಾಣಪಾಯವಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದು ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪಾದಚಾರಿ ಮಾರ್ಗಗಳಲ್ಲಿ ಗೋಬಿ ಹೋಟೆಲ್, ಪಾನಿಪೂರಿ ಅಂಗಡಿ ಸೇರಿದಂತೆ ಇತರೆ ಅಂಗಡಿಗಳು ಇರುವುದರಿಂದ ಗ್ರಾಹಕರು ರಸ್ತೆಗಳಲ್ಲಿ ವಾಹನಗಳನ್ನು ಬಿಟ್ಟು ವ್ಯಾಪಾರ ಮಾಡುತ್ತಾರೆ. ಇದರಿಂದ ವಾಹನ ಸವಾರರು ಸೇರಿದಂತೆ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ತುಂಬಾ ತೊಂದರೆ ಎದುರಾಗಿದೆ. ಅನೇಕ ಸಲ ಅಪಘಾತಗಳು ಸಂಭವಿಸಿವೆ. ದೂರು ನೀಡಿದರೂ ಕ್ರಮ ಜರುಗಿಸಿಲ್ಲ ಎನ್ನುವುದು ಜನರ ಆರೋಪ, ಸಂಬಂಧಿಸಿದ ಅಧಿಕಾರಿಗಳು ಇದಕ್ಕೆ ಕಡಿವಾಣಹಾಕಲು ದೂರಿದ್ದಾರೆ.

ಕೂಡ್ಲಿಗಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಚಿಕನ್ ಅಂಗಡಿಯಲ್ಲಿ ಗ್ಯಾಸ್ ಸೋರಿಕೆಯಾಗಿ ಸ್ಫೋಟದಿಂದ ಅಂಗಡಿ ಸುಟ್ಟಿರುವುದು.

ಹೂಳು ತೆರವುಗೊಳಿಸದಿದ್ದರೆ ಪ್ರತಿಭಟನೆ ಖಚಿತ..

ಬಳ್ಳಾರಿ: ಅಖಂಡ ಬಳ್ಳಾರಿ ಜಿಲ್ಲೆಯ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ದಿನದಿಂದ ದಿನಕ್ಕೆ ಹೂಳು ಹೆಚ್ಚುತ್ತಿದೆ. ನೀರು ಸಂಗ್ರಹ ಸಾಮರ್ಥ್ಯ ಕುಸಿಯುತ್ತಿರುವ ಹಿನ್ನೆಲೆ ಸರ್ಕಾರ ತಕ್ಷಣವೇ ಹೂಳು ತೆರವು ಕಾರ್ಯ ಕೈಗೊಳ್ಳಬೇಕು. ಇಲ್ಲವಾದರೆ ತುಂಗಭದ್ರ ಡ್ಯಾಂ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತುಂಗಭದ್ರ ರೈತ ಸಂಘದ ಅಧ್ಯಕ್ಷ ಡಾ. ಜಿ. ಪುರುಷೋತ್ತಮ ಗೌಡ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತುಂಗಭದ್ರ ಡ್ಯಾಂನ ಇಂದಿನ ದುಸ್ಥಿತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು. ಜಲಸಂಪನ್ಮೂಲ ಇಲಾಖೆಯ ನಿವೃತ್ತ ಮುಖ್ಯ ಕಾ ನಿ ಅಭಿಯಂತರ ವಿ.ಪಿ. ಉದ್ಯಾಳ್ ಮಾತನಾಡಿ, ಜಲಾಶಯದಲ್ಲಿ ಹೆಚ್ಚುತ್ತಿರುವ ಹೂಳು ನೀರು ಸಂಗ್ರಹ ಸಾಮರ್ಥ್ಯವನ್ನು ಹಾಳು ಮಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. 2017ರಲ್ಲಿಯೇ ವಿಧಾನಸಭೆ ಹಾಗೂ ಪರಿಷತ್‌ನಲ್ಲಿ ಈ ವಿಚಾರ ಪ್ರಸ್ತಾಪಿಸಲಾಗಿತ್ತು.

ಹೂಳಿನ ಜಾತ್ರೆಯ ಮೂಲಕ ಸರ್ಕಾರದ ಗಮನ ಸೆಳೆಯಲಾಗಿತ್ತು. ಆದರೂ ಇದುವರೆಗೆ ಸಮರ್ಪಕ ಕ್ರಮ ಕೈಗೊಳ್ಳದ ಪರಿಣಾಮ ಇಂದು ಡ್ಯಾಂನ ನೀರಿನಮಟ್ಟಕುಸಿಯುವಪರಿಸ್ಥಿತಿನಿರ್ಮಾಣವಾಗಿದೆ ಎಂದರು.

ಪ್ರಸ್ತುತ ಡ್ಯಾಂನ ನೀರು ಸಂಗ್ರಹ ಸಾಮರ್ಥ್ಯ ಕೇವಲ 102 ಅಡಿ ಮಟ್ಟಕ್ಕೆ ಸೀಮಿತವಾಗಿರುವುದು ಆತಂಕಕಾರಿ ಬೆಳವಣಿಗೆ. ತುರ್ತಾಗಿ ಹೂಳು ತೆರವು ಕಾರ್ಯ ಕೈಗೊಂಡು ಜಲಾಶಯದ ಮೂಲ ಸಾಮರ್ಥ್ಯ ಉಳಿಸಲು ಒತ್ತಾಯಿಸಿದರು. ಡ್ಯಾಂನ ಹೊರವಲಯ ಹಾಗೂ ಹಿನ್ನೀರು ಪ್ರದೇಶಗಳಲ್ಲಿ ಹೂಳು ತೆಗೆಯುವ ಕಾರ್ಯಕ್ಕೆ ಯಾವುದೇ ಅಡ್ಡಿಪಡಿಸಬಾರದು. ಇದರಿಂದ ಜಲಾಶಯದಲ್ಲಿನ ಹೂಳು ಹೊರ ಹೋಗಲು ಸಹಕಾರವಾಗುತ್ತದೆ ಎಂದು ತಿಳಿಸಿದರು. ಮಹತ್ವದ ವಿಚಾರದಲ್ಲಿ ಪಕ್ಷಾತೀತವಾಗಿ ಎಲ್ಲಾ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ದೊಡ್ಡ ದಾಸಪ್ಪ, ಕೊಂಚಿಗೇರಿ ರಾಜಗೌಡ, ವೀರಭದ್ರಗೌಡ, ಶ್ರೀಧರ್, ದರೂರು ಬಸವರಾಜ್, ಗೋವಿಂದಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತುಂಗಭದ್ರಾ ಜಲಾಶಯ ಹೂಳು ತೆರವಿಗೆ ಆಗ್ರಹಿಸಿ ರೈತ ಮುಖಂಡ ಪುರುಷೋತ್ತಮಗೌಡ ಪತ್ರಿಕಾಗೋಷ್ಠಿ ನಡೆಸಿದರು.

ಹೃದಯದ ಭಾಷೆಯಾಗಿ ಕನ್ನಡ ಮಿಡಿಯಲಿ..

ಕೂಡ್ಲಿಗಿ: ಶ್ರೀಗಂಧದನಾಡಿನಲ್ಲಿ ಕನ್ನಡ ಹೃದಯ ಭಾಷೆಯಾಗಿ ಮಿಡಿಯಬೇಕಾಗಿದೆ ಎಂದು ತಹಶೀಲ್ದಾರ ವಿ.ಕೆ. ನೇತ್ರಾವತಿ ಅಭಿಪ್ರಾಯಪಟ್ಟರು. ಪಟ್ಟಣದ ಹೊರವಲಯ ಗುಂಡಿನಹೊಳೆಯ ಜ್ಞಾನ ಮಂಟಪ ವಿದ್ಯಾ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದಿಂದ ಆಯೋಜಿಸಿದ್ದ 112ನೇ ಸಂಸ್ಥಾಪನಾ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ಎಲ್ಲಾ ಭಾಷೆಗಳನ್ನು ಕಲಿಯಬೇಕಾದ ಅನಿವಾರ್ಯತೆ ಇಂದು ಜಾಗತಿಕ ಬದಲಾವಣೆಯಲ್ಲಿ ಕಂಡುಬಂದರು. ಕನ್ನಡವನ್ನು ಹೃದಯಭಾಷೆಯಾಗಿ ಪ್ರೀತಿಸಬೇಕಾಗಿದೆ. ಇದರಿಂದ ಕನ್ನಡವನ್ನು ಅತಿ ಹೆಚ್ಚು ಬಳಸುವ ಮೂಲಕ ಕನ್ನಡ ಭಾಷೆಗೆ ತನ್ನದೇ ಆದ ಮೌಲ್ಯ ಇದೆ.

ಹಳೆಗನ್ನಡ, ನಡುಗನ್ನಡ, ನವ್ಯಕನ್ನಡದಿಂದ ಸುಮಾರು 2000ವರ್ಷಗಳ ಇತಿಹಾಸ ಇರುವ ಕನ್ನಡದ ಕವಿಪುಂಗವರು ನಾಡಿನಾದ್ಯಂತ ಕಂಪು ಪಸರಿಸಿದ್ದಾರೆ ಎಂದರು. ಸಂಡೂರಿನ ಉರ್ದು ಪ್ರೌಢ ಶಾಲೆ ಮುಖ್ಯಶಿಕ್ಷಕಿ ಎ. ಸುಮಂಗಲ ಪಾಲ್ತೂರು ವಿಶೇಷ ಉಪನ್ಯಾಸ ನೀಡಿ, 1915ರಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಶಯದಂತೆ ಕನ್ನಡ ಭಾಷೆಯನ್ನು ಪರಿಷ್ಕರಿಸುವುದರ ಮೂಲಕ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪಿಸಿದರು 1938ರಲ್ಲಿ ಬಳ್ಳಾರಿಯಲ್ಲಿ ನಡೆದ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತುಎಂದುಮರುನಾಮಕರಣಮಾಡಲಾಯಿತು ಎಂದರು. ಸಮಾಜದ ವಿವಿಧ ಕ್ಷೇತ್ರಗಳಿಗೆ ಉಪಯುಕ್ತವಾಗುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ಶತಮಾನಕ್ಕೂ ಹೆಚ್ಚು ಕಾಲ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆಯ ಉಳಿವಿಗೆ, ಬೆಳವಣಿಗೆಗೆ ಮತ್ತು ಸಾಹಿತ್ಯ ಸಮ್ಮೇಳನಗಳಿಂದ ಭಾಷಾ ಪ್ರೇಮವನ್ನು ಜನರಲ್ಲಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಕಸಾಪ ಇಂದಿಗೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅತ್ಯಂತ ಮಹತ್ವದ ಕೊಡುಗೆ ನೀಡುತ್ತಿರುವ ಸಂಸ್ಥೆಯಾಗಿದೆ ಎಂದರು. ತಾಲೂಕಿನಲ್ಲಿ ಹಿ.ಮ. ನಾಗಯ್ಯ, ಕೋ. ಚೆ, ಕುಂವೀ ಸೇರಿದಂತೆ ಅನೇಕರು ಸಾಹಿತ್ಯ ರಚನೆ ಮಾಡಿ ನಾಡಿನ ಸಾಹಿತ್ಯದ ಲೋಕಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ ಎಂದು ಹೇಳಿದರು. ಕನ್ನಡ ಭಾಷಾ ಉಳಿವಿಗೆ ಶ್ರಮಿಸಿದ ಕನ್ನಡ ಭಾಷೆ ಪ್ರೇಮಿಗಳಾದ ತಾಲೂಕಿನ ಅಮಲಾಪುರ ಗ್ರಾಮದ ಕೆ. ವೆಂಕಟೇಶ, ಪಟ್ಟಣದ ಹೇರ್ ಕಟ್ಟಿಂಗ್ ಷಲ್ಯೂಷನ್ ಷಾಪ್‌ನ ಸುಧಾಕರ ಇವರಿಗೆ ಸನ್ಮಾನ ನೆರವೇರಿಸಲಾಯಿತು. ಪೇಟೆ ಬಸವೇಶ್ವರ ಸಂಗೀತ ಪಾಠ ಶಾಲೆಯ ಅಗಸಗಟ್ಟೆ ತಿಂದಪ್ಪ ತಂಡದವರಿಂದ ಸುಗಮ ಸಂಗೀತ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಜ್ಞಾನ ಮಂಟಪ ವಿದ್ಯಾ ಮಂದಿರದ ಸಂಸ್ಥಾಪಕ ಅಧ್ಯಕ್ಷ ಜಿ. ಉಮೇಶ, ಕಸಾಪ ತಾಲೂಕು ಅಧ್ಯಕ್ಷ ವೀರೇಶ ಅಮಗಡಿ, ಸಿಡಿಪಿಒ ಮಾಲುಂಭಿ, ಬಿಇಡಿ ಪ್ರಾಚಾರ್ಯ ಚಾರೇಶ, ಎಐಕೆಎಸ್ ರಾಜ್ಯ ಉಪಾಧ್ಯಕ್ಷ ಹೆಚ್. ವೀರಣ್ಣ, ಕಸಾಪ ಕಾರ್ಯದರ್ಶಿ ನಂದಿ ಬಸವರಾಜ, ಪಿ. ಶಿವರಾಜ, ಎಸ್.ವಿ. ಸಿದ್ಧರಾಧ್ಯ, ರಿಯಾಜ್ ಪಾಷಾ, ಕಜಾಪ ತಾಲೂಕು ಅಧ್ಯಕ್ಷ ಕೆ.ಎಂ. ವೀರೇಶ, ರಂಗಾ ರಾಘವೇಂದ್ರ ಶೆಟ್ಟಿ ಇದ್ದರು.

ಕೂಡ್ಲಿಗಿ ಪಟ್ಟಣದ ಹೊರವಲಯ ಗುಂಡಿನಹೊಳೆಯ ಜ್ಞಾನ ಮಂಟಪ ವಿದ್ಯಾ ಮಂದಿರದಲ್ಲಿ ಕಸಾಪ ತಾಲೂಕು ಘಟಕದಿಂದ ಆಯೋಜಿಸಿದ್ದ ಸಂಸ್ಥಾಪನಾ ದಿನಾಚರಣೆಗೆ ತಹಶೀಲ್ದಾರ ವಿ.ಕೆ. ನೇತ್ರಾವತಿ ಚಾಲನೆ ನೀಡಿದರು.

ಪೊಲೀಸರ ವಿರುದ್ಧ ಆಕ್ರೋಶ, ಮಾತಿನ ಚಕಮಕಿ | ಬಾಲಕಿಯೊಂದಿಗೆ ಮುಸ್ಲಿಂ ಯುವಕ ಪ್ರಕರಣ

ಲವ್ ಜಿಹಾದ್ ಆರೋಪ: ಯುವಕರ ಬಂಧನ

ಕೊಪ್ಪಳ: ಹಿಂದೂ ಬಾಲಕಿ ಜತೆಗಿದ್ದ ಮುಸ್ಲಿಂ ಯುವಕನನ್ನು ಪ್ರಶ್ನಿಸಿದ್ದಕ್ಕೆ ಹಿಂದೂ ಯುವಕರ ಮೇಲೆಯೇ ಹಲ್ಲೆ ಪ್ರಕರಣ ದಾಖಲಿಸಲಾಗಿದೆ ಎಂದು ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಲ್ಲೆ ಆರೋಪದ ಹಿನ್ನೆಲೆ ಆರು ಹಿಂದೂ ಯುವಕರನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದು ಇದು ಅನೇಕರನ್ನು ಕುಪಿತರನ್ನಾಗಿಸಿದೆ.

ನಗರದ ಹರ್ಷಾ ಹೋಟೆಲ್ ಬಳಿ ಬುಧವಾರ ಹಿಂದೂ ಯುವತಿ ಯೊಂದಿಗೆ ಮಾತನಾಡುತ್ತಿದ್ದ ಮುಸ್ಲಿಂ ಯುವಕ ಸಮೀರ್ ಮೂಲಿಮನಿಯನ್ನು ಹಿಂದೂ ಸಂಘಟನೆಯವರು ಮಾತನಾಡಿಸಿದ್ದು, ಪರಸ್ಪರ ಮಾತಿನ ಚಕಮಕಿ ನಡೆದಿದೆ. ಆದರೆ ಕಣ್ಣಿಗೆ ಬಟ್ಟೆಕಟ್ಟಿ ಬೈಕ್‌ನಲ್ಲಿ ಕೂರಿಸಿಕೊಂಡು, ನಗರದ ಹೊಸಪೇಟೆ ರಸ್ತೆಯ ಬಲ್ಡೋಟಾ ಕಾರ್ಖಾನೆಯ ಮುಖ್ಯದ್ವಾರದ ಬಳಿ ಕರೆದೊಯ್ದು ಹಲ್ಲೆ ಮಾಡಿದ್ದಾರೆ. ನಂತರ ಸರ್ಕಾರಿ ಜಿಲ್ಲಾಸ್ಪತ್ರೆಯ ಹತ್ತಿರ ಬಿಟ್ಟು ಹೋಗಿದ್ದಾರೆ ಎಂದು ಸಮೀರ್ ಮೂಲಿಮನಿ ಆರೋಪಿಸಿದ್ದಾನೆ.

ಜಿಲ್ಲಾಸ್ಪತ್ರೆಯಲ್ಲಿ ಸಮೀರ್ ಚಿಕಿತ್ಸೆ ಪಡೆಯುತ್ತಿದ್ದು, ಈ ಕುರಿತು ಪ್ರಕರಣ ದಾಖಲಾಗಿದೆ. ನಾನು ಪ್ರೀತಿಸುತ್ತಿದ್ದ ಯುವತಿಯ ಸಹೋದರರಿಬ್ಬರು ಹಲ್ಲೆ ಮಾಡಿದ್ದಾರೆ ಎಂದು ಸಮೀರ್ ಆರೋಪಿಸಿದ್ದಾನೆ.

ಸಮೀರ್, ಮೂವರು ಹಿಂದೂ ಯುವತಿಯರೊಂದಿಗೆ ಪ್ರೀತಿ ಪ್ರೇಮದ ಹೆಸರಲ್ಲಿ ಹಣ, ಬಂಗಾರ ಪಡೆದಿದ್ದಾನೆ ಎಂಬ ಆರೋಪದ ಹಿನ್ನೆಲೆ ಈ ಹಿಂದೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾಗ ರಾಜಿ ಮಾಡಿ ಕಳುಹಿಸಲಾಗಿತ್ತು. ಯುವತಿ ಕಡೆಯವರು ಪ್ರಕರಣ ದಾಖಲಿಸಲು ಹಿಂದೇಟು ಹಾಕಿದ್ದರು. ಈ ನಿಟ್ಟಿನಲ್ಲಿ ಪದೇ ಪದೇ ಲವ್ ಜಿಹಾದ್ ಆರೋಪದ ಅಡಿ ಪ್ರಕರಣ ಬೆಳಕಿಗೆ ಬರುತ್ತಿದ್ದು, ಇದರಿಂದ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳದ ಕಾರ್ಯಕರ್ತರು ಧ್ವನಿ ಎತ್ತುತ್ತಲೇ ಬಂದಿದ್ದಾರೆ. ಆದರೆ, ಅವರ ಮೇಲೆಯೇ ಪ್ರಕರಣಗಳು ದಾಖಲಾಗುತ್ತಿವೆ. ಈಗ ಮತ್ತೆ ಬಜರಂಗದಳ ಮತ್ತು ಕೊಪ್ಪಳ ಕಾ ರಾಜ ಬಳಗದ ಯುವಕರನ್ನೇ ವಶಕ್ಕೆ ಪಡೆಲಾಗಿದೆ ಎಂದು ಹಿಂದೂ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಕೊಪ್ಪಳ ನಗರ ಪೊಲೀಸ್ ಠಾಣೆ ಕಚೇರಿಯ ಮುಂದೆ ಬುಧವಾರ ಎಸ್ಪಿ ಡಾ. ರಾಮ್ ಎಲ್. ಅರಸಿದ್ಧಿ ಮತ್ತು ಬಿಜೆಪಿ ಮುಖಂಡರು ಸೇರಿರುವುದು. ಒಳಚಿತ್ರದಲ್ಲಿ ಸಮೀರ್ ಮೂಲಿಮನಿ.

> ಹುಡುಗಿಯೊಂದಿಗೆ ಮಾತನಾಡುತ್ತಿರುವಾಗ ಅಪರಿಚಿತ ಯುವಕರು ಹಲ್ಲೆ ಮಾಡಿದ್ದಾರೆ ಎಂದು ಮುಸ್ಲಿಂ ಯುವಕ ಸಮೀರ್ ಮೂಲಿಮನಿ ದೂರು ನೀಡಿದ್ದು, ಇದಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರು ಜನರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದೇವೆ.
>
> ■ ಡಾ. ರಾಮ್ ಎಲ್. ಅರಸಿದ್ಧಿ, | ಎಸ್ಪಿ, ಕೊಪ್ಪಳ

ಎಂಎಲ್ಸಿ-ಎಸ್ಪಿ ನಡುವೆ ವಾಗ್ವಾದ

ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಠಾಣೆಗೆ ಗುರುವಾರ ವಿಪ ಸದಸ್ಯೆ ಹೇಮಲತಾ ನಾಯಕ್ ಭೇಟಿ ಎಸ್ಪಿ ಡಾ.ರಾಮ್ ಎಲ್. ಅರಸಿದ್ಧಿಯೊಂದಿಗೆ ವಾಗ್ವಾದ ನಡೆಸಿದರು. ಕಳೆದ ಆರೇಳು ತಿಂಗಳಿಂದಲೂ ಲವ್ ಜಿಹಾದ್ ಪ್ರಕರಣ ನಡೆಯುತ್ತಲೇ ಇವೆ. ಇದರಿಂದ ಅಮಾಯಕ ಯುವತಿಯರು ಬಲಿಯಾಗುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ವಿಡಿಯೋಗಳಿವೆ. ಇದನ್ನಾಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು. ಆದರೆ, ಪ್ರಶ್ನಿಸುತ್ತಿರುವ ಹಿಂದೂ ಯುವಕರ ಮೇಲೆಯೇ ಪ್ರಕರಣ ದಾಖಲಿಸಿ, ಭಯ ಪಡಿಸುತ್ತಿದ್ದೀರಿ ಎಂದು ಎಂಎಲ್ಸಿ ಹೇಮಲತಾ ನಾಯಕ್ ಆಕ್ರೋಶ ವ್ಯಕ್ತಪಡಿಸಿದರು. ಎಸ್ಪಿ ಪ್ರತಿಕ್ರಿಯಿಸಿ, ಲಿಖಿತ ದೂರು ನೀಡಿದರೆ ಮಾತ್ರ ಪ್ರಕರಣ ದಾಖಲಿಸುತ್ತೇವೆ. ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳುವುದಿಲ್ಲ. ನಮ್ಮನ್ನೇ ಏಕೆ ಟಾರ್ಗೆಟ್ ಮಾಡುತ್ತಿದ್ದೀರಿ ಪ್ರಶ್ನಿಸಿದರು.

ಅಕ್ರಮ ಕಲ್ಲು ಗಣಿಗಾರಿಕೆ, ಮರಳು ಸಾಗಾಣಿಕೆಗೆ ದಂಡ

- 16 ಪ್ರಕರಣ ದಾಖಲು 4.45 ಲಕ್ಷ ದಂಡ
- ಜಿಲ್ಲಾ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಡಿಸಿ

ಹೊಸಪೇಟೆ: ಜಿಲ್ಲೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ, ಮರಳು ಸಾಗಾಣಿಕೆ, ಮುರ್ರಂ ಹೀಗೆ ವಿವಿಧ ರೀತಿಯ ಒಟ್ಟು 16 ಪ್ರಕರಣಗಳ ದಾಖಲಾಗಿವೆ. ಅಂದಾಜು 4.45 ಲಕ್ಷ ರೂ. ದಂಡ ವಿಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾಹಿತಿ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಉಪಖನಿಜ ಕಟ್ಟಡ ಕಲ್ಲು ಅನಧಿಕೃತ ಸಾಗಾಣಿಕೆ ಸಂಬಂಧಿಸಿದಂತೆ 9 ಪ್ರಕರಣ ದಾಖಲಾಗಿದ್ದು, 3.9 ಲಕ್ಷ ದಂಡ ವಿಧಿಸಲಾಗಿದೆ. ಅಕ್ರಮ ಮರಳು ಸಾಗಾಣೆಗೆ ಸಂಬಂಧಿಸಿ 6 ಪ್ರಕರಣ ದಾಖಲಾಗಿದ್ದು, 1.2 ಲಕ್ಷ ದಂಡ ಮತ್ತು ಮುರ್ರಂಗೆ ಸಂಬಂಧಿಸಿದ ಅನಧಿಕೃತ ಸಾಗಾಣಿಕೆ 1 ಪ್ರಕರಣ ಸೇರಿ ಜಿಲ್ಲೆಯಲ್ಲಿ ಒಟ್ಟು 16 ಪ್ರಕರಣಕ್ಕೆ ಒಟ್ಟು 4.45 ಲಕ್ಷ ರೂಪಾಯಿ ದಂಡ ವಸೂಲಿ ಮಾಡಲಾಗಿದೆ.

ಹೊಸಪೇಟೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿದರು.

ಪ್ರಸ್ತುತ ಬಿರು ಬೇಸಿಗೆ ಇರುವ ಕಾರಣ ಮಕ್ಕಳು ಕೆರೆ, ಬಾವಿಗಳಿಗೆ ಈಜಲು ಹೋಗಿ ಸಾಕಷ್ಟು ಸಾವು ನೋವು ಸಂಭವಿಸುತ್ತಿವೆ. ಆದ್ದರಿಂದ ಅದಕ್ಕೆ ಕಡಿವಾಣ ಹಾಕಲು ಆಯಾಕಟ್ಟಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಸೂಚನಾ ಫಲಕ ಅಳವಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದಕ್ಕೆ ಅಧಿಕಾರಿಗಳು ಸಕರಾತ್ಮಕವಾಗಿ ಸ್ಪಂದಿಸಿದರು.

ಜಿಲ್ಲೆಯ ನದಿ ಪಾತ್ರಗಳಲ್ಲಿ ಹಾಗೂ ಹಳ್ಳ–ಕೊಳ್ಳಗಳಲ್ಲಿ ರಾಜಾರೋಷ ನಡೆಯುತ್ತಿರುವ ಮರಳು ದಂಧೆ ತಡೆಯಲು ಪೊಲೀಸ್ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಬೇಕು. ಅಕ್ರಮವಾಗಿ ಮರಳು ಸಾಗಿಸುವ ವಾಹನಗಳನ್ನು ವಶಪಡಿಸಿಕೊಂಡು, ಅಂತವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಜಿಲ್ಲೆಯ ಗಡಿಭಾಗದ ಚೆಕ್ ಪೋಸ್ಟ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ, 24/7 ನಿಗಾ ಇರಿಸಬೇಕು. ರಾತ್ರಿ ವೇಳೆ ನಡೆಯುವ ಅಕ್ರಮ ಗಣಿ ಮತ್ತು ಮರಳು ಸಾಗಾಣಿ ತಡೆಯಲು ರಾತ್ರಿ ಗಸ್ತು ಪಡೆಯನ್ನು ಬಲಪಡಿಸಲು ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು. ನೈಸರ್ಗಿಕ ಸಂಪನ್ಮೂಲಗಳ ಲೂಟಿ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಖಡಕ್ ಎಚ್ಚರಿಕೆ ನೀಡಿದರು.

ಹೊಸದಾಗಿ ಗುರುತಿಸಲಾದ ಮರಳು ಬ್ಲಾಕ್‌ಗಳಲ್ಲಿ ಗಣಿಗಾರಿಕೆ ಪ್ರಾರಂಭಿಸುವ ಮುನ್ನ ರಾಜ್ಯ ಪರಿಸರ ಪರಿಣಾಮ ಅಂದಾಜು ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು.

ಕೂಡ್ಲಿಗಿ ತಾಲ್ಲೂಕಿನ ಹಾಲಸಾಗರ ಗ್ರಾಮದ ಕೈಲಾಶ್ ಸ್ಟೋನ್ ಕ್ರಷರ್ ಘಟಕದ ಪರವಾನಿಗೆ ಮುಕ್ತಾಯವಾಗಿದ್ದು, ನವೀಕರಣಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವರದಾಪುರ ಗ್ರಾಮದಲ್ಲಿ ಹೊಸದಾಗಿ ಸ್ಟೋನ್ ಕ್ರಷರ್ ಸ್ಥಾಪಿಸಲು ಸಲ್ಲಿಕೆಯಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ರಿಯಾಜ್ ಸಭೆಗೆ ಮಾಹಿತಿ ನೀಡಿದರು. ಜಿ ಪಂ ಸಿ ಇ ಓ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಅರಣ್ಯ ಇಲಾಖೆ ಉಪಸಂರಕ್ಷಣಾಧಿಕಾರಿ ಅನುಪಮ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ರಿಯಾಜ್, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ, ಕಾರ್ಯಪಾಲಕ ಅಭಿಯಂತರ ಹೇಮರಾಜ್, ತಹಸೀಲ್ದಾರ್ ಶೃತಿ ಎಂ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಪ್ಪನ ಅಗ್ರಹಾರ ಜೈಲಲ್ಲಿ ಶಿಶುಪಾಲನಾ ಘಟಕ

ದೇಶದಲ್ಲೇ ಮೊದಲ ಘಟಕದಲ್ಲಿ ಒಂಭತ್ತು ಮಕ್ಕಳಿಗೆ ಆಶ್ರಯ | ಇಬ್ಬರು ಶಿಕ್ಷಕರ ನೇಮಕ

ಸಂ.ಕ. ಸಮಾಚಾರ ಬೆಂಗಳೂರು

ಅಪರಾಧ ಪ್ರಕರಣಗಳಲ್ಲಿ ಜೈಲಿನಲ್ಲಿ ಇರುವ ತಾಯಂದಿರು ತಮ್ಮ ಮಕ್ಕಳಿಗೆ ಹಾಲುಣಿಸುವ ಸಲುವಾಗಿ ವಿಶೇಷ ಶಿಶುಪಾಲನಾ ಕೇಂದ್ರವನ್ನು ಆರಂಭಿಸಲಾಗಿದೆ.

ಜೈಲಿನಲ್ಲಿ ದೇಶದ ಮೊದಲ ವಿಶೇಷ ಶಿಶುಪಾಲನಾ ಕೇಂದ್ರ ಆರಂಭಿಸಲಾಗಿದೆ. ತಾಯಂದಿರು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವಾಗ, ಅವರನ್ನೇ ಅವಲಂಬಿಸಿರುವ ಹಸುಗೂಸುಗಳು ಮತ್ತು ಆರು ವರ್ಷದೊಳಗಿನ ಮಕ್ಕಳು ಯಾವುದೇ ಅಪರಾಧ ಮಾಡದಿದ್ದರೂ ಜೈಲಿನ ನಾಲ್ಕು ಗೋಡೆಗಳ ಮಧ್ಯೆ ಬೆಳೆಯಬೇಕಾದ ಅನಿವಾರ್ಯತೆ ಇರುತ್ತದೆ. ಇಂತಹ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಲು ಕರ್ನಾಟಕ ಮಕ್ಕಳ ರಕ್ಷಣಾ ನಿರ್ದೇಶನಾಲಯ ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಿಶುಪಾಲನಾ ಕೇಂದ್ರ ಆರಂಭಿಸಿದೆ. ರಾಜ್ಯದ ವಿವಿಧ ಜೈಲುಗಳಲ್ಲಿ ಅಗತ್ಯ ಬಿದ್ದರೆ ಇಂತಹ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಜೈಲಿನ ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪ್ರಭಾವ ಬೀರಬಾರದು ಎಂಬ ಉದ್ದೇಶದಿಂದ ಈ ಘಟಕವನ್ನು ಸ್ಥಾಪಿಸಲಾಗಿದೆ. ಮಕ್ಕಳಿಗೆ ಕೇವಲ ಅಕ್ಷರಭ್ಯಾಸ ಮಾತ್ರವಲ್ಲದೆ, ಅವರ ಭಾವನಾತ್ಮಕ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಲಾಗಿದೆ. ಇಬ್ಬರು ವಿಶೇಷ ಶಿಕ್ಷಕರು ವರ್ಣಮಾಲೆ, ಅಂಕಿಅಂಶಗಳು, ಪ್ರಾಸಬದ್ಧ ಹಾಡುಗಳು ಮತ್ತು ಸೃಜನಶೀಲ ಕಲೆಗಳನ್ನು ಕಲಿಸುತ್ತಿದ್ದಾರೆ. ಜೊತೆಗೆ ಇಂದಿನ ಜಗತ್ತಿನಲ್ಲಿ ಸುರಕ್ಷಿತವಾಗಿರಲು ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆಯೂ ಅರಿವು ಮೂಡಿಸಲಾಗುತ್ತಿದೆ.



ಮಕ್ಕಳಿಗೆ ಬಾಲ್ಯದಲ್ಲಿ ಜೈಲಿನ ವಾತಾವರಣ ಬೀಳಬಾರದು ಎಂಬ ಕಾರಣದಿಂದ ಅಲ್ಲಿ ಕಲಿಕೆಯ ವಾತಾವರಣ ನಿರ್ಮಿಸಲಾಗುವುದು. ಮಕ್ಕಳ ಈ ಕಲಿಕೆಯಿಂದ ಅಲ್ಲಿ ಹೊಸ ವಾತಾವರಣ ನಿರ್ಮಾಣವಾಗುತ್ತದೆ. ತಾಯಂದಿರಿಗೂ ಸಹ ಮನಪರಿವರ್ತನೆ ಆಗುವಲ್ಲಿ ಸಹಾಯಕವಾಗುತ್ತದೆ. ಯಾವುದೋ ಆರೋಪದಿಂದ ಸಣ್ಣ ವಯಸ್ಸಿನಲ್ಲಿಯೇ ಜೈಲುಗಳಿಗೆ ಬಂದು ಅಲ್ಲಿಂದಲೇ ಉನ್ನತ ಶಿಕ್ಷಣದ ವ್ಯಾಸಂಗ ಮಾಡಿ ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಅನೇಕರ ಉದಾಹರಣೆಗಳನ್ನೂ ಸಹ ಈ ಸಂದರ್ಭದಲ್ಲಿ ನೀಡಲಾಗುತ್ತಿದೆ. ಹಾಗೂ ಮನೋವೈದ್ಯರಿಂದ ಅನೇಕ ಪಾಠ ಪ್ರವಚಗಳನ್ನೂ ಸಹ ಮಾಡಿಸಲಾಗುವುದು. ಸಮಾಜದೆಡೆಗೆ ಮಕ್ಕಳು ಕನಸು ಇಟ್ಟುಕೊಂಡು ಮುಂದುವರಿಯಲಿ ಎಂಬ ಉದ್ದೇಶ ಈ ಯೋಜನೆದ್ದು ಎಂದು ಜೈಲಿನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿ: ಮಕ್ಕಳಲ್ಲಿ ಶಿಸ್ತು ಮತ್ತು ವ್ಯಕ್ತಿತ್ವ ವಿಕಸನ ಬೆಳೆಸಲು ಊಟದ ಕ್ರಮಗಳು ಹಿರಿಯರಿಗೆ ಗೌರವ ನೀಡುವುದು ಮುಂತಾದ ಸಾಮಾಜಿಕ ಕೌಶಲಗಳನ್ನು ಕಲಿಸಲಾಗುತ್ತಿದೆ. ಜೈಲು ಕೈಪಿಡಿ ಮತ್ತು ಸುಪ್ರೀಂ ಕೋರ್ಟ್ ನಿಯಮದಂತೆ 6 ವರ್ಷದೊಳಗಿನ ಮಕ್ಕಳಿಗೆ ತಾಯಿಯೊಂದಿಗೆ ಇರಲು ಅವಕಾಶವಿದ್ದು, ಅವರ ರಕ್ಷಣೆ ಮತ್ತು ಶಾಲಾ ಸಿದ್ಧತೆಯ ಜವಾಬ್ದಾರಿಯನ್ನು ಈ ಕೇಂದ್ರ ಹೊತ್ತಿದೆ. ಒಂದು ವೇಳೆ ಮಗುವಿಗೆ ಆರು ವರ್ಷ ತುಂಬಿದ ನಂತರ ಕುಟುಂಬದವರು ಜವಾಬ್ದಾರಿ ವಹಿಸಿಕೊಳ್ಳದಿದ್ದರೆ, ಎನ್.ಜಿ.ಒಗಳ ಮೂಲಕ ಶಿಕ್ಷಣ ನೀಡಲು ಕ್ರಮ ವಹಿಸಲಾಗುತ್ತದೆ.

ವಿಶೇಷ ಸೌಲಭ್ಯಗಳು : ಪ್ರಸ್ತುತ ಒಂಬತ್ತು ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದು, ಅವರಲ್ಲಿ ಮೂವರು ವಿದೇಶಿ ಪ್ರಜೆಗಳ ಮಕ್ಕಳಾಗಿದ್ದಾರೆ. ಜೈಲಿನ ಕಠಿಣ ವಾತಾವರಣವನ್ನು 'ಕಲಿಕೆಯ ತಾಣ'ವನ್ನಾಗಿ ಬದಲಿಸಲು ಗೋಡೆಗಳ ಮೇಲೆ ಸುಂದರವಾದ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಆಧುನಿಕ ಶೌಚಾಲಯ, ಕೈ ತೊಳೆಯುವ ವ್ಯವಸ್ಥೆ ಮತ್ತು ಆಟವಾಡುವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೇಂದ್ರ ಸರ್ಕಾರದ 'ಮಿಷನ್ ವಾತ್ಸಲ್ಯ' ಮತ್ತು ಬಾಲನ್ಯಾಯ ಕಾಯ್ದೆಯಡಿ ಈ ಸೌಲಭ್ಯಗಳನ್ನು ಒದಗಿಸಲಾಗಿದೆ.

ಸುದ್ದಿ ಸಮಾಚಾರ

ಜೀವಾವಧಿ ಶಿಕ್ಷೆ ಪ್ರಶ್ನಿಸಿ ವಿನಯ್ ಸಲ್ಲಿಸಿದ್ದ ಅರ್ಜಿ 26ಕ್ಕೆ ವಿಚಾರಣೆ

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೇಶ್‌ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿರುವ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪ್ರಕರಣದ ಅಪರಾಧಿ ವಿನಯ್ ಕುಲಕರ್ಣಿ ಮತ್ತಿತರರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಮೇ 26ಕ್ಕೆ ನಿಗದಿಪಡಿಸಿದೆ.

ಅರ್ಜಿಯ ವಿಚಾರಣೆ ಆರಂಭವಾಗುತ್ತಿದ್ದಂತೆ ಸಿಬಿಐ ಪರ ವಕೀಲರು, ಅರ್ಜಿಗೆ ಆಕ್ಷೇಪಣೆ ಸಲ್ಲಿಸಬೇಕಾಗಿದ್ದು, ಮತ್ತಷ್ಟು ಕಾಲಾವಕಾಶ ನೀಡಬೇಕು ಎಂದು ಕೋರಿದರು. ಈ ಮನವಿಯನ್ನು ಪುರಸ್ಕರಿಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಮತ್ತು ನ್ಯಾಯಮೂರ್ತಿ ರಾಜೇಶ್ ರೈ. ಕೆ ಅವರಿದ್ದ ವಿಭಾಗೀಯ ಪೀಠ, ವಿಚಾರಣೆಯನ್ನು ಮುಂದೂಡಿತು.

ಇದೇ ಪ್ರಕರಣದಲ್ಲಿ 7 ವರ್ಷ ಶಿಕ್ಷೆಗೆ ಗುರಿಯಾಗಿರುವ ಪೊಲೀಸ್ ವೃತ್ತ ನಿರೀಕ್ಷಕ ಚನ್ನಕೇಶವ ಟಿಂಗರೀಕರ ಪರ ವಕೀಲರು, ಅರ್ಜಿದಾರರಿಗೆ 7 ವರ್ಷ ಶಿಕ್ಷೆ ವಿಧಿಸಿದ್ದು ಏಕ ಸದಸ್ಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು. ಆದರೆ, ಏಕ ಸದಸ್ಯ ಪೀಠ, ಪ್ರಕರಣವನ್ನು ಇತರೆ ಆರೋಪಿಗಳ ಅರ್ಜಿದಾರರೊಂದಿಗೆ ಸೇರ್ಪಡೆ ಮಾಡಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಅವರ ವಿರುದ್ಧ ಜಾಮೀನು ನೀಡಬಹುದಾದ ಅಪರಾಧಗಳು ಮಾತ್ರ ಇವೆ. ಆದ್ದರಿಂದ ಅವರು ಜೈಲು ಶಿಕ್ಷೆ ಅನುಭವಿಸುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಜಾಮೀನು ನೀಡಬೇಕು ಎಂದು ಕೋರಿದರು. ವಾದ ಆಲಿಸಿದ ನ್ಯಾಯಪೀಠ, ಟಿಂಗರೀಕರ್ ಅವರ ಅರ್ಜಿಯನ್ನು ಪ್ರತ್ಯೇಕಿಸಿ ವಿಚಾರಣೆ ನಡೆಸಬಹುದು ಎಂದು ಸೂಚನೆ ನೀಡಿ ವಿಚಾರಣೆಯನ್ನು ಮೇ 14ಕ್ಕೆ ಮುಂದೂಡಿತು.

ಪತ್ರಕರ್ತ ಪ್ರಹ್ಲಾದ್ ಕುಳಲಿ ನಿಧನ

ಬೆಂಗಳೂರು: ಕನ್ನಡ ಪತ್ರಿಕೋದ್ಯಮ ಕ್ಷೇತ್ರದ ಹಿರಿಯ ಪತ್ರಕರ್ತರು ಹಾಗೂ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಪ್ರಹ್ಲಾದ್ ಕುಳಲಿ(88) ಅವರು ಗುರುವಾರ ಬೆಳಗ್ಗೆ ಬೆಂಗಳೂರಿನ ಕೆಂಗೇರಿಯ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಅವರು ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮ ವಿಶಿಷ್ಟ ಶೈಲಿ, ಸರಳ ವ್ಯಕ್ತಿತ್ವ ಹಾಗೂ ನಿಖರ ಬರವಣಿಗೆಯ ಮೂಲಕ ಅಪಾರ ಗೌರವ ಪಡೆದಿದ್ದರು. 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಮುಖ್ಯ ವರದಿಗಾರ ಹಾಗೂ ಸಹಾಯಕ ಸಂಪಾದಕರಾಗಿ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿ, ಅನೇಕ ಯುವ ಪತ್ರಕರ್ತರಿಗೆ ಮಾರ್ಗದರ್ಶನ ನೀಡಿದ್ದರು. ದಿವಂಗತ ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರ ಮಾಧ್ಯಮ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದರು. ರಾಜಕೀಯ ಮತ್ತು ಆಡಳಿತ ಕ್ಷೇತ್ರದ ಒಳನೋಟವನ್ನು ಮಾಧ್ಯಮಕ್ಕೆ ಸಮರ್ಪಕವಾಗಿ ತಲುಪಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು. ಮೃತರ ಅಂತ್ಯಕ್ರಿಯೆ ಗುರುವಾರ ಬೆಂಗಳೂರಿನ ಚಾಮರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

ಗಣ್ಯರ ಸಂತಾಪ

ಪ್ರಹ್ಲಾದ್ ಕುಳಲಿ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವಾರು ಗಣ್ಯರು ಸಂತಾಪ ವ್ಯಕ್ತಪಡಿಸಿ, ಪತ್ರಿಕಾ ಕ್ಷೇತ್ರದ ಸೇವೆಯನ್ನು ಸ್ಮರಿಸಿದ್ದಾರೆ.

ರಾಜ್ಯದಲ್ಲಿ ನ್ಯಾಕ್ ಮಾದರಿಯ ಮಾನ್ಯತಾ ಪ್ರಾಧಿಕಾರ ಸ್ಥಾಪನೆ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ ಮತ್ತು ಮಾನ್ಯತೆ ನೀಡಲು ನ್ಯಾಕ್ ಮಾದರಿಯ ವಿಶೇಷ ಪ್ರಾಧಿಕಾರ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ. ಇದು ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮೌಲ್ಯಮಾಪನ ಮತ್ತು ಮಾನ್ಯತೆ ನೀಡುವ ನ್ಯಾಷನಲ್ ಅಸೆಸ್ಮೆಂಟ್ ಅಂಡ್ ಅಕ್ರಿಡಿಟೇಶನ್ ಕೌನ್ಸಿಲ್ ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ. ರಾಜ್ಯ ಮಟ್ಟದ ಮೌಲ್ಯಮಾಪನ ಮತ್ತು ಮಾನ್ಯತಾ ಪ್ರಾಧಿಕಾರ ಸ್ಥಾಪನೆ ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸುಗಳಲ್ಲಿ ಒಂದಾಗಿದೆ. ಕರ್ನಾಟಕದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಈ ರಾಜ್ಯ ಮಟ್ಟದ ಸಂಸ್ಥೆಯ ಮೌಲ್ಯಮಾಪನ ಕಡ್ಡಾಯವಾಗಲಿದೆ. ರಾಜ್ಯ ಮಟ್ಟದ ಸಂಸ್ಥೆಯಿಂದ ನೀಡುವ ಗ್ರೇಡಿಂಗ್ ಅಥವಾ ರ್‍ಯಾಂಕಿಂಗ್ ಕಾಲೇಜುಗಳ ಸಂಬಂಧ ನವೀಕರಣ, ಆಸನಗಳ ಹೆಚ್ಚಳ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಿಫಾರಸಿನ ಪ್ರಕಾರ, ಕಾಲೇಜುಗಳಿಗೆ ಎ+, ಎ, ಬಿ+, ಬಿ, ಸಿ+, ಸಿ ಮತ್ತು ಡಿ ಗ್ರೇಡ್‌ಗಳನ್ನು ನೀಡಲಾಗುತ್ತದೆ. ಮೂರು ವರ್ಷಕ್ಕಿಂತ ಹಳೆಯ ಎಲ್ಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ಪಡೆಯುವುದು ಕಡ್ಡಾಯವಾಗಲಿದೆ. ಈ ಮಾಹಿತಿಯನ್ನು ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಪ್ರವೇಶ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಸಹಾಯವಾಗುತ್ತದೆ. ಕಾಲೇಜಿನ ಹಿಂದಿನ ವರ್ಷಗಳ ಫಲಿತಾಂಶ ಉತ್ತಮವಾಗಿರಬೇಕು. ಕಾಲೇಜು ಆರಂಭದ ವೇಳೆ ಇಲಾಖೆ ಪ್ರವೇಶಾತಿಗೆ ನೀಡಿದ ಅನುಮತಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶಾತಿ ಪಡೆದಿದ್ದಾರೆ ಎಂಬುದು ಕೂಡಾ ಗ್ರೇಡ್ ನೀಡಲು ಪ್ರಮುಖ ಮಾನದಂಡವಾಗಿರುತ್ತದೆ. ವಿದ್ಯಾರ್ಥಿಗಳಿಗೆ ನೀಡಲಾಗುವ ಕೋರ್ಸ್‌ಗಳು, ವಿದ್ಯಾರ್ಥಿಗಳ ಸಂಖ್ಯೆ, ಪ್ಲೇಸ್ಮೆಂಟ್ ಶೇಕಡಾವಾರು, ಕೌಶಲ್ಯಾಭಿವೃದ್ಧಿ ಕೋರ್ಸ್‌ಗಳು, ವಿದ್ಯಾರ್ಥಿಗಳ ದೂರು ಪರಿಹಾರ ವ್ಯವಸ್ಥೆ ಮತ್ತು ವಸತಿ ಸೌಲಭ್ಯಗಳು ಸೇರಿದಂತೆ ಈ ಎಲ್ಲಾ ಮಾನದಂಡಗಳನ್ನು ಪೂರೈಸಿದ ಸಂಸ್ಥೆಗಳಿಗೆ ಗ್ರೇಡಿಂಗ್ ನೀಡಲಾಗುತ್ತದೆ.

ಶಾಸಕ ಜೀವರಾಜ್ ವಿರುದ್ಧ ಎಫ್‌ಐಆರ್‌ಗೆ ನೀಡಿದ ತಡೆಯಾಜ್ಞೆ ಜೂ. 3ರವರೆಗೆ ವಿಸ್ತರಣೆ

ಸಂ.ಕ. ಸಮಾಚಾರ ಬೆಂಗಳೂರು

ಅಂಚೆ ಮತಗಳ ಮರು ಎಣಿಕೆಯಲ್ಲಿ ತಿರುಚಿದ ಆರೋಪ ಸಂಬಂಧ ಶೃಂಗೇರಿಯ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್. ಜೀವರಾಜ್ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ನೀಡಲಾಗಿರುವ ಮಧ್ಯಂತರ ತಡೆಯಾಜ್ಞೆ ಆದೇಶವನ್ನು ಹೈಕೋರ್ಟ್ ಜೂನ್ 3ರವರೆಗೆ ವಿಸ್ತರಿಸಿದೆ.



ಮತ ತಿರುಚಿದ ಆರೋಪದಲ್ಲಿ ಕಾಂಗ್ರೆಸ್ ಪಕ್ಷದ ಏಜೆಂಟ್ ಆಗಿದ್ದ ಸುಧೀರ್ ಮುರೋಳ್ಳಿ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಜೀವರಾಜ್ ಹಾಗೂ ಚಿಕ್ಕಮಗಳೂರು ಹಿಂದಿನ ಜಿಲ್ಲಾಧಿಕಾರಿ ಕೆ. ಎನ್. ರಮೇಶ್ ಸಲ್ಲಿಸಿರುವ ಅರ್ಜಿಗಳು ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ರಜಾ ಕಾಲದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಇದೇ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿರುವ 2023ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಶೃಂಗೇರಿ ಕ್ಷೇತ್ರದ ಚುನಾವಣಾಧಿಕಾರಿಯಾಗಿದ್ದ ಟಿ.ಆರ್. ವೇದಮೂರ್ತಿ ಅವರು ಎಫ್‌ಐಆರ್ ರದ್ದು ಕೋರಿರುವ ಅರ್ಜಿ ಮೊದಲ ಬಾರಿಗೆ ವಿಚಾರಣೆಗೆ ಬಂದಿತ್ತು.

ವಿಚಾರಣೆ ವೇಳೆ ಪ್ರಕರಣದ ಮೂಲ ದೂರುದಾರ ಸುಧೀರ್ ಮುರೋಳ್ಳಿಗೆ ಅವರ ಪರ ವಕೀಲರು, ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ನ್ಯಾಯಾಲಯವನ್ನು ಕೋರಿದ್ದರು. ಈ ಅಂಶವನ್ನು ಪರಿಗಣಿಸಿದ ಪೀಠ, ವಿಚಾರಣೆಯನ್ನು ಜೂನ್ 3ಕ್ಕೆ ಮುಂದೂಡಿತು. ಅಲ್ಲಿಯವರೆಗೆ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡಿ ಮೇ 5ರಂದು ಹೊರಡಿಸಿದ್ದ ಮಧ್ಯಂತರ ತಡೆಯಾಜ್ಞೆ ಆದೇಶವನ್ನು ವಿಸ್ತರಿಸಿತು. ಈ ಆದೇಶವನ್ನು ವೇದಮೂರ್ತಿ ಅವರ ಅರ್ಜಿಗೂ ಅನ್ವಯಿಸಿತು.

ಅಂಚೆ ಮತಪತ್ರ ತಿದ್ದಿರುವುದಾಗಿ ಕೈ ಅಭ್ಯರ್ಥಿ ರಾಜೇಗೌಡ ದೂರು

ಬೆಂಗಳೂರು: ಶೃಂಗೇರಿ ಅಂಚೆ ಮತ ಮರು ಎಣಿಕೆಯಲ್ಲಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಯನ್ನು ಭೇಟಿಯಾಗಿ ಮತಪತ್ರ ತಿದ್ದಿರುವುದಾಗಿ ಆರೋಪಿಸಿ ತನಿಖೆ ನಡೆಸುವಂತೆ ದೂರು ನೀಡಿದ್ದಾರೆ.

ದೂರು ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 2023ರ ಚುನಾವಣೆ ಮತ ಎಣಿಕೆಯ ವೇಳೆ ಜೆಡಿಎಸ್ ಕಾಂಗ್ರೆಸ್, ಬಿಜೆಪಿ, ಪಕ್ಷೇತರರ ಅಭ್ಯರ್ಥಿಗಳ ಕೌಂಟಿಂಗ್ ಏಜೆಂಟ್ ಇದ್ದರು. ಪಾರದರ್ಶಕವಾಗಿ ಮತ ಎಣಿಕೆ ಆಗಿತ್ತು. ಮತ ಎಣಿಕೆ ಬಳಿಕ ರಾಜೇಗೌಡ ಗೆದ್ದರು ಎಂದು ಘೋಷಣೆ ಮಾಡಿದ್ದರು. ಅರ್ಹ ಹಾಗೂ ಅನರ್ಹ ಮತಗಳು ಯಾವುದು ಎಂದು ಎಲ್ಲರಿಗೂ ತೋರಿಸಿದ್ದರು. ಆಮೇಲೆ ನನ್ನ ವಿರುದ್ಧ ಚುನಾವಣಾ ಅಕ್ರಮದ ಕೇಸ್ ಹಾಕಿ, ಅನೇಕ ಆರೋಪ ಮಾಡಿದರು. ಈ ಹಿನ್ನೆಲೆ ಮರು ಎಣಿಕೆಗೆ ಉಚ್ಚ ನ್ಯಾಯಾಲಯ ಆದೇಶ ಮಾಡಿತ್ತು.

ಹೈಕೋರ್ಟ್ 279 ಅನರ್ಹ ಮತವನ್ನು ಮರು ಎಣಿಕೆ ಮಾಡಲು ಸೂಚಿಸಿತ್ತು.. ಮರು ಎಣಿಕೆ ವೇಳೆ ಬಂಡಲ್ ಬಂಡಲ್ ಇನ್‌ವ್ಯಾಲಿಡ್ ಆಗಿದೆ. ವೋಟ್ ಟ್ಯಾಂಪರಿಂಗ್ ಆಗಿದೆ ಎನ್ನುವುದು ನಮ್ಮ ಅನುಮಾನ. ನ್ಯಾಯಯುತ ತನಿಖೆ ಆಗಲಿ ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ ಎಂದರು.

ಆಗಸ್ಟ್‌ನಲ್ಲಿ ಅಂಗವಿಕಲರಿಗಾಗಿ ಉದ್ಯೋಗ ಮೇಳ

ಸಮಗ್ರ ಉದ್ಯೋಗ, ಕೌಶಲ್ಯ ವೇದಿಕೆಯಾದ ಆದಿದ್ವಾರ ಅಪ್ಲಿಕೇಶನ್ ಬಿಡುಗಡೆ: ಡಾ. ಪಾಟೀಲ್

ಸಂ.ಕ.ಸಮಾಚಾರ, ಬೆಂಗಳೂರು

ಅಂಗವಿಕಲರು ಯಾರಿಗೂ ಎರಡನೆಯವರಲ್ಲ. ಅವರು ಬೇರೆಯವರಂತೆ ಪ್ರತಿಭಾನ್ವಿತರು ಮತ್ತು ಕಾರ್ಪೊರೇಟ್‌ಗಳು ನೇಮಕಾತಿಯ ಸಮಯದಲ್ಲಿ ಅವರಿಗೆ ಸಮಾನ ಅವಕಾಶ ಮತ್ತು ಚಿಕಿತ್ಸೆಯನ್ನು ನೀಡಬೇಕು ಎಂದು ಕೌಶಲ್ಯ ಅಭಿವೃದ್ಧಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಆರ್. ಪಾಟೀಲ್ ಹೇಳಿದರು.

ಅಸಿಸ್ಟೆಕ್ ಫೌಂಡೇಶನ್ ಸಹಯೋಗದೊಂದಿಗೆ ವಿಕಾಸಸೌಧದಲ್ಲಿ ಗುರುವಾರ ಸಮಗ್ರ ಉದ್ಯೋಗ ಮತ್ತು ಕೌಶಲ್ಯ ವೇದಿಕೆಯಾದ ಆದಿದ್ವಾರ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅಂಗವಿಕಲರಿಗೆ ವಿಶೇಷ ಉದ್ಯೋಗ ಮೇಳವನ್ನು ಆಗಸ್ಟ್ ತಿಂಗಳಲ್ಲಿ ನಡೆಸಲಾಗುವುದು ಎಂದರು.

ಆದಿದ್ವಾರ ವೇದಿಕೆಯು ಪಿಡಬ್ಲ್ಯೂಡಿಗಳನ್ನು ಉದ್ಯೋಗಾವಕಾಶಗಳು, ಇಂಟರ್ನ್‌ಶಿಪ್‌ಗಳು ಮತ್ತು ಕೌಶಲ್ಯ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಪರ್ಕಿಸುತ್ತದೆ. ಅದೇ ಸಮಯದಲ್ಲಿ ಉದ್ಯೋಗದಾತರು ಸಮಗ್ರ ಉದ್ಯೋಗ ಪಾತ್ರಗಳನ್ನು ಪೋಸ್ಟ್ ಮಾಡಲು ಮತ್ತು ವೈವಿಧ್ಯಮಯ ಪ್ರತಿಭಾ ಪೂಲ್ ಅನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಇದರ ಎಐ-ಚಾಲಿತ ಉದ್ಯೋಗ-ಅಭ್ಯರ್ಥಿ ಹೊಂದಾಣಿಕೆಯ ಎಂಜಿನ್ ಕೌಶಲ್ಯಗಳು, ಆಸಕ್ತಿಗಳು ಮತ್ತು ಪ್ರವೇಶದ ಅವಶ್ಯಕತೆಗಳನ್ನು ಸೂಕ್ತ ಪಾತ್ರಗಳೊಂದಿಗೆ ಜೋಡಿಸುತ್ತದೆ. ಅರ್ಥಪೂರ್ಣ ಮತ್ತು ಫಲಿತಾಂಶ-ಕೇಂದ್ರಿತ ನೇಮಕಾತಿಯನ್ನು ಬೆಂಬಲಿಸುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಮುಂಬರುವ ಉದ್ಯೋಗ ಮೇಳದ ಅಧಿಕೃತ ಲೋಗೋವನ್ನು ಸಹ ಅನಾವರಣಗೊಳಿಸಿದರು, ಇದು ಕರ್ನಾಟಕದಲ್ಲಿ ಸಮಗ್ರ ಕಾರ್ಯಪಡೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಸರ್ಕಾರದ ಬದ್ಧತೆಯನ್ನು ಸೂಚಿಸುತ್ತದೆ. ಆಗಸ್ಟ್‌ನಲ್ಲಿ ನಿಗದಿಯಾಗಿರುವ ಆದಿದ್ವಾರ ಉದ್ಯೋಗ ಮೇಳವು ಉದ್ಯೋಗ-ಸಿದ್ಧ ಪಿಡಬ್ಲ್ಯೂಡಿಗಳನ್ನು ಉದ್ಯೋಗದಾತರು, ತರಬೇತಿ ಪಾಲುದಾರರು ಮತ್ತು ಸಹಾಯಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳೊಂದಿಗೆ ಸಂಪರ್ಕಿಸಲು ವಿನ್ಯಾಸಗೊಳಿಸಲಾದ ದೊಡ್ಡ ಪ್ರಮಾಣದ ಸಮಗ್ರ ಉದ್ಯೋಗ ಮತ್ತು ಕೌಶಲ್ಯ ಉತ್ಸವವಾಗಿರುತ್ತದೆ. ಈ ಕಾರ್ಯಕ್ರಮವು ನೇರ ನೇಮಕಾತಿ ಡ್ರೈವ್‌ಗಳು, ವೃತ್ತಿ ಮಾರ್ಗದರ್ಶನ ಅವಧಿಗಳು, ಕೌಶಲ್ಯ ಮಾರ್ಗ ಜಾಗೃತಿ ಕಾರ್ಯಕ್ರಮಗಳು ಮತ್ತು ತಂತ್ರಜ್ಞಾನ ಪ್ರದರ್ಶನಗಳನ್ನು ಒಳಗೊಂಡಿರುತ್ತದೆ ಎಂದರು.

ಐಟಿ, ಚಿಲ್ಲರೆ ವ್ಯಾಪಾರ, ಉತ್ಪಾದನೆ, ಬಿಎಫ್‌ಎಸ್‌ಐ, ಆತಿಥ್ಯ ಮತ್ತು ಸೇವೆಗಳು ಸೇರಿದಂತೆ ವಲಯಗಳ ಉದ್ಯೋಗದಾತರು ಭಾಗವಹಿಸುವ ನಿರೀಕ್ಷೆಯಿದೆ. ಎಲ್ಲಾ 21 ಅಧಿಸೂಚಿತ ಅಂಗವೈಕಲ್ಯ ವಿಭಾಗಗಳನ್ನು ಪ್ರತಿನಿಧಿಸುವ 3,000ಕ್ಕೂ ಹೆಚ್ಚು ಅಂಗವಿಕಲ ಉದ್ಯೋಗಾಕಾಂಕ್ಷಿಗಳು ಭಾಗವಹಿಸುವ ನಿರೀಕ್ಷೆಯಿದೆ. ನೇರ ನೇಮಕಾತಿ ಮತ್ತು ರಚನಾತ್ಮಕ ಉದ್ಯೋಗದಾತ-ಅಭ್ಯರ್ಥಿ ಸಂವಾದ ಎರಡಕ್ಕೂ ಅವಕಾಶಗಳಿವೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಎಂಎಲ್‌ಸಿ ಸುಧಾಮ್ ದಾಸ್ ಮತ್ತು ಎಟಿಎಫ್ ಸಿಇಒ ಪ್ರತೀಕ್ ಮಾಧವ್ ಉಪಸ್ಥಿತರಿದ್ದರು.

ಜೂನ್ 2ನೇ ವಾರ ವಿಟಿಯು ಪಿಜಿ, ಯುಜಿ ಕೋರ್ಸ್ ಪರೀಕ್ಷೆ

ಸಂ.ಕ. ಸಮಾಚಾರ, ಬೆಂಗಳೂರು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಪದವಿ (ಯುಜಿ) ಹಾಗೂ ಸ್ನಾತಕೋತ್ತರ (ಪಿಜಿ) ಕೋರ್ಸ್‌ಗಳ ಪರೀಕ್ಷಾ ವೇಳಾಪಟ್ಟಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದು, ಜೂನ್ ಎರಡನೇ ವಾರದಿಂದ ಆಗಸ್ಟ್ ಮೂರನೇ ವಾರದವರೆಗೆ ಪರೀಕ್ಷೆಗಳು ನಡೆಯಲಿವೆ.

ವಿಶ್ವವಿದ್ಯಾಲಯವು ಈ ವೇಳಾಪಟ್ಟಿಯನ್ನು ತನ್ನ ಅಧೀನದಲ್ಲಿರುವ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ರವಾನಿಸಿದ್ದು, ವಿದ್ಯಾರ್ಥಿಗಳ ಗಮನಕ್ಕೆ ತರಲು ಕಾಲೇಜುಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲು ಸೂಚನೆ ನೀಡಲಾಗಿದೆ. ಜೊತೆಗೆ, ವಿದ್ಯಾರ್ಥಿಗಳು ಯಾವುದೇ ಗೊಂದಲವಿಲ್ಲದೆ ತಮ್ಮ ಪರೀಕ್ಷಾ ದಿನಾಂಕಗಳನ್ನು ತಿಳಿದುಕೊಳ್ಳಲು ಅಧಿಕೃತ ವೆಬ್‌ಸೈಟ್‌ನಲ್ಲಿಯೂ ವೇಳಾಪಟ್ಟಿ ಲಭ್ಯವಿದೆ.

ವಿದ್ಯಾರ್ಥಿಗಳು ಪರೀಕ್ಷಾ ವೇಳಾಪಟ್ಟಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ ತಿಣಣಿ.ಚಿಥಿಟಿ ನಲ್ಲಿ ಪರಿಶೀಲಿಸಬಹುದಾಗಿದೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ತಮ್ಮ ಪಠ್ಯಕ್ರಮಕ್ಕೆ ಅನುಗುಣವಾಗಿ ದಿನಾಂಕಗಳನ್ನು ಪರಿಶೀಲಿಸಿ ಸಿದ್ಧತೆ ನಡೆಸುವಂತೆ ವಿಶ್ವವಿದ್ಯಾಲಯ ಸೂಚಿಸಿದೆ. ಹೊಸ ಪಠ್ಯಕ್ರಮ ಹಾಗೂ ಹಳೆಯ ಪಠ್ಯಕ್ರಮದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿ ವೇಳಾಪಟ್ಟಿಗಳನ್ನು ಪ್ರಕಟಿಸಲಾಗಿದೆ.

ತಮಿಳ್ನಾಡಿನ ರಾಜ್ಯಪಾಲರ ನಡೆಗೆ ಡಿಕೆಶಿ ಅಸಮಾಧಾನ

ಸಂ.ಕ. ಸಮಾಚಾರ ಬೆಂಗಳೂರು

ವಿಜಯ್ ಅವರಿಗೆ ಸರ್ಕಾರ ರಚನೆ ಮಾಡಿ ಬಹುಮತ ಸಾಬೀತು ಪಡಿಸುವುದನ್ನು ತಡೆಯಲು ತಮಿಳುನಾಡಿನ ರಾಜ್ಯಪಾಲರಿಗೆ ಯಾವುದೇ ರೀತಿಯ ಅಧಿಕಾರ ಇಲ್ಲ. ರಾಜ್ಯಪಾಲರ ನಡೆ ಸರಿಯಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಟಿವಿಕೆ ಪಕ್ಷಕ್ಕೆ ಸರ್ಕಾರ ರಚನೆಗೆ ರಾಜ್ಯಪಾಲರು ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರಿಗೆ ರಾಜ್ಯಪಾಲರು ಅನುಮತಿ ನೀಡಿದ್ದರು. ಹೆಚ್ಚು ಸ್ಥಾನ ಗಳಿಸಿದ ಪಕ್ಷಗಳಿಗೆ ಸರ್ಕಾರ ರಚಿಸಲು ಈ ಹಿಂದೆಯೂ ಅನುಮತಿ ನೀಡಲಾಗಿತ್ತು. ರಾಷ್ಟ್ರಪತಿಗಳಾಗಿದ್ದ ನಾರಾಯಣನ್, ಅಬ್ದುಲ್ ಕಲಾಂ ಅವರೂ ಈ ರೀತಿ ಮಾಡಿದ್ದರು. ವಾಜಪೇಯಿ ಅವರಿಗೂ ಸಹ ಇದೇ ರೀತಿ ಸರ್ಕಾರ ರಚಿಸಲು ಅನುಮತಿ ನೀಡಿ ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಲಾಗಿತ್ತು. ಆದರೆ ಈಗ ಟಿವಿಕೆಗೆ ಅವಕಾಶ ನೀಡದಿರುವುದು ತಪ್ಪು ಎಂದರು.

ಮೊದಲು ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ಒಂದು ರಾಜ್ಯದ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಇದು ಪ್ರಜಾಪ್ರಭುತ್ವ. ಒಂದು ಮತದಿಂದ ಬಹುಮತ ಬರಬಹುದು ಅಥವಾ ಕಳೆದುಕೊಳ್ಳಬಹುದು. ವಾಜಪೇಯಿ ಅವರಿಗೆ ಇದೇ ರೀತಿ ಆಗಲಿಲ್ಲವೇ. ಒಂದೊಮ್ಮೆ ಬಹುಮತ ಸಾಬೀತು ಆಗದೇ ಹೋದರೆ ಮುಂದಿನ ಆಯ್ಕೆ ನೋಡಬಹುದು ಎಂದರು.

ಡಿಜಿಪಿ ರಾವ್ ನಿವೃತ್ತಿ ಹಿನ್ನೆಲೆಯಲ್ಲಿ ಸಸ್ಪೆಂಡ್ ವಾಪಸ್: ಪರಂ

ಸಂ.ಕ. ಸಮಾಚಾರ ಬೆಂಗಳೂರು

ಡಿಜಿಪಿ ರಾಮಚಂದ್ರರಾವ್ ಈ ತಿಂಗಳಲ್ಲೇ ನಿವೃತ್ತಿ ಆಗುತ್ತಿರುವ ಹಿನ್ನೆಲೆಯಲ್ಲಿ ಅಮಾನತು ವಾಪಸ್ ಪಡೆದಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿಎಂ ಅವರ ಅನುಮತಿ ಪಡೆದು ಡಿಪಿಆರ್ ಅಮಾನತು ವಾಪಸ್ ಪಡೆದಿದ್ದಾರೆ. ಸಿಎಂ ಬಳಿ ರಾಮಚಂದ್ರರಾವ್ ವಿವರಣೆ ಕೊಟ್ಟಿದ್ದರು. ನಿವೃತ್ತಿ ಆಗುವ ಮುನ್ನ ಪೆನ್ಶನ್ ಸೆಟಲ್ ಮಾಡ್ಬೇಕು, ತನಿಖೆ ಮುಂದುವರೆಸಿ ಎಂದು ಮನವಿ ಮಾಡಿದ್ದರು. ಈ ವಿಚಾರ ನನಗೆ ಗೊತ್ತಿತ್ತು, ಆದರೆ. ಅಮಾನತು ವಾಪಸ್ ಪಡೆದಿದ್ದು ಸರಿ, ತಪ್ಪು ಅಂತ ನಾನು ಹೇಳುವುದಕ್ಕೆ ಆಗುವುದಿಲ್ಲ. ಇದು ಡಿಪಿಆರ್ ಮತ್ತು ಮುಖ್ಯಮಂತ್ರಿಗಳಿಗೆ ಅಡಿಯಲ್ಲಿ ಬರುತ್ತದೆ, ಅವರು ತೀರ್ಮಾನ ಮಾಡಿದ್ದಾರೆ ಎಂದು ಹೇಳಿದರು.

ರಾಸಲೀಲೆ ಕೇಸಿನ ತನಿಖೆ ಮುಂದುವರೆಯುತ್ತದೆ. ಕೇಸ್ ಅಂತಿಮ ಆಗುವವವರೆಗೂ ತನಿಖೆ ನಡೆಯುತ್ತದೆ. ತನಿಖೆಯಲ್ಲಿ ಬಂದ ವರದಿ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತಾರೆ. ಅನೇಕ ಸಮಯದಲ್ಲಿ ನಿವೃತ್ತಿ ಆದ ಮೇಲೂ ಪೆನ್ಶನ್ ತಡೆ ಹಿಡಿದಿರುವುದನ್ನು ನೋಡಿದ್ದೇವೆ, ತನಿಖೆಯಾಗಿ ಅಂತಿಮ ವರದಿ ಬಂದ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ.

ರಾಜೇಗೌಡ ದೂರು ತನಿಖೆ: ಶೃಂಗೇರಿ ಫಲಿತಾಂಶ ವಿಚಾರವಾಗಿ ರಾಜೇಗೌಡರು ಚುನಾವಣೆ ಆಯೋಗಕ್ಕೆ ದೂರು ನೀಡಿ, ನಂತರ ಕೋರ್ಟ್‌ಗೆ ಹೋಗ್ತಾರೆ. ರಾಜೇಗೌಡ ಖಾಸಗಿ ದೂರು ಕೊಟ್ಟಿದ್ದರು. ನಾವು ಎಫ್‌ಐಆರ್ ಮಾಡಿದ್ದೇವೆ. ಅದು ತನಿಖೆ ನಡೆಯುತ್ತದೆ. ತನಿಖೆಯಲ್ಲಿ ಮತಪತ್ರ ತಿದ್ದಿರುವುದು ಸಾಬೀತಾದರೆ ಅದು ಬೇರೆ ರೀತಿ ಆಗುತ್ತದೆ ಎಂದರು.

ಐಪಿಎಲ್ ಪಂದ್ಯ ಬೆಂಗಳೂರಿನಿಂದ ಶಿಫ್ಟ್ ಆಗಿರುವ ವಿಚಾರವಾಗಿ ಮಾತನಾಡಿದ ಅವರು, ಭದ್ರತೆ ವಿಚಾರದಲ್ಲಿ ಸ್ಥಳಾಂತರ ಆಗಿಲ್ಲ.

ಐಪಿಎಲ್ ರೂಲ್ಸ್ ಪ್ರಕಾರ ಕಳೆದ ವರ್ಷ ಫೈನಲ್ ಗೆದ್ದವರ ತವರಿನಲ್ಲಿ ಫೈನಲ್ ಪಂದ್ಯ ಆಯೋಜನೆ ಮಾಡಬೇಕು ಅಂತ ಇದೆ. ಶಾಸಕರಿಗೆ ಉಚಿತ ಪಾಸ್ ಕೊಟ್ಟಿರೋದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂ. ಮುಇಂ(ವಿ)/ಬಾ/ಪ್ರ(ಕಾ)ವ/ಅ.ಅ.(ವಿ)/ಸ.ಕಾ.ಇಂ(ವಿ)–1/26–27/2552–63 ದಿನಾಂಕ: 06.05.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕ.ವಿ.ಪ್ರ.ನಿ.ನಿಯು ಕೆಳಕಂಡ ಕಾಮಗಾರಿಗಳಿಗೆ ಸಾಮಗ್ರಿಗಳು/ಉಪಕರಣಗಳ ಪೂರೈಕೆ, ನಿರ್ಮಾಣ, ಸಿವಿಲ್ ಕಾಮಗಾರಿಗಳು, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು ಸೇರಿದಂತೆ ಕೆಳಗಿನ ಬಿಡ್ ವಿಚಾರಣೆ ಸಂಖ್ಯೆಗಳ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

1) **KPTCL/CEE/TRNS/BGKT/110KV/STN-H72/26-27/Naragund/C7 ಟೆಂಡರ್ ಸಂಖ್ಯೆ: KPTCL/2026-27/ SS/WORK_INDENT3569** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನಲ್ಲಿರುವ 110ಕೆ.ವಿ **ನರಗುಂದ** ಉಪಕೇಂದ್ರದಲ್ಲಿ ಹೆಚ್ಚುವರಿ 1X10ಎಂ.ವಿ.ಎ, 110/11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

2) **KPTCL/CEE/TRNS/BGKT/110KV/STN-H73/26-27/Alnavar/C6 ಟೆಂಡರ್ ಸಂಖ್ಯೆ: KPTCL/2026-27/SS/WORK_ INDENT3568** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನಲ್ಲಿರುವ 110ಕೆ.ವಿ **ಅಳ್ನಾವರ** ಉಪಕೇಂದ್ರದಲ್ಲಿ ಹೆಚ್ಚುವರಿ 1X10ಎಂ.ವಿ.ಎ, 110/33–11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

3) **KPTCL/CEE/TRNS/BGKT/110KV/STN-H74/26-27/Shedbala/C7 ಟೆಂಡರ್ ಸಂಖ್ಯೆ: KPTCL/2026-27/SS/WORK_ INDENT3633** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನಲ್ಲಿರುವ 110ಕೆ.ವಿ **ಶೇಡಬಾಳ** ಉಪಕೇಂದ್ರದಲ್ಲಿ ಹೆಚ್ಚುವರಿ 1X10ಎಂ.ವಿ.ಎ, 110/11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

4) **KPTCL/CEE/TRNS/BGKT/110KV/STN-H75/26-27/Tumminakatti/C6 ಟೆಂಡರ್ ಸಂಖ್ಯೆ: KPTCL/2026-27/SS/WORK_INDENT 3634** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕಿನಲ್ಲಿರುವ 110ಕೆ.ವಿ **ತುಮ್ಮಿನಕಟ್ಟಿ** ಉಪಕೇಂದ್ರದಲ್ಲಿ ಹೆಚ್ಚುವರಿ 1X10ಎಂ.ವಿ.ಎ, 110/11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

5) **KPTCL/CEE/TRNS/BGKT/110KV/STN-H76/26-27/Basavanakatti/C6 ಟೆಂಡರ್ ಸಂಖ್ಯೆ: KPTCL/2026-27/SS/WORK_INDENT 3635** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನಲ್ಲಿರುವ 110ಕೆ.ವಿ **ಬಸವನಕಟ್ಟಿ** ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ 1X10ಎಂ.ವಿ.ಎ 110/11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

6) **KPTCL/CEE/TRNS/BGKT/110KV/STN-H77/26-27/Singataluru/C2 ಟೆಂಡರ್ ಸಂಖ್ಯೆ: KPTCL/2026-27/SS/WORK_ INDENT3636** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿರುವ 110ಕೆ.ವಿ **ಸಿಂಗಟಾಲೂರು** ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ 1X10ಎಂ.ವಿ.ಎ 110/33ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿಯ ಜೊತೆಗೆ 2 ಸಂಖ್ಯೆಯ 33ಕೆವಿ ಟಿ.ಬಿ ಕಾಮಗಾರಿ.

7) **KPTCL/CEE/TRNS/BGKT/110KV/STN-H79/26-27/Hebballi ಟೆಂಡರ್ ಸಂಖ್ಯೆ: KPTCL/2026-27/SS/WORK_ INDENT3676** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಧಾರವಾಡ ತಾಲ್ಲೂಕು ಮತ್ತು ಜಿಲ್ಲೆಯಲ್ಲಿರುವ 110ಕೆ.ವಿ **ಹೆಬ್ಬಳ್ಳಿ** ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ 1X10ಎಂ.ವಿ.ಎ 110/11ಕೆ.ವಿ ಪರಿವರ್ತಕವನ್ನು ಒದಗಿಸುವ ಕಾಮಗಾರಿ.

8) **KPTCL/CEE/TRNS/BGKT/110KV/STN-H78/26-27/Kawalwada/C2 ಟೆಂಡರ್ ಸಂಖ್ಯೆ: KPTCL/2026-27/SS/WORK_ INDENT3637** ರ ಅನ್ವಯ **ಸಂಪೂರ್ಣ ಕಾರ್ಯಗುತ್ತಿಗೆ ಆಧಾರದ ಮೇಲೆ** ಉತ್ತರ ಕನ್ನಡ ಜಿಲ್ಲೆಯ 110ಕೆವಿ **ಕವಲವಾಡ** ಉಪ ಕೇಂದ್ರದಲ್ಲಿ ಲಿಲೋ ವ್ಯವಸ್ಥೆ ಒದಗಿಸುವ ಜೊತೆಗೆ 110ಕೆವಿ NK–1 ಮತ್ತು NK–2 ಮಾರ್ಗಗಳಿಗೆ ಮೀಟರಿಂಗ್ ಮತ್ತು ರಕ್ಷಣೆ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿ.

9) **KPTCL/CEE/TRNS/BGKT/110kV/STNDR-01/26-27/Ghatnatti ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3612** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಅಥನಿ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಘಟ್ನಟ್ಟಿ** ಉಪಕೇಂದ್ರದಲ್ಲಿ 2x10MVA, 110/11kV ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಿ 2x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಕಾಮಗಾರಿ. **Reserved for Category-IIA**

10) **KPTCL/CEE/TRNS/BGKT/110kV/STNDR-02/26-27/Mamadapura ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3613** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಮಮದಾಪೂರ** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. **Reserved for SC Category.**

11) **KPTCL/CEE/TRNS/BGKT/110kV/STNDR-03/26-27/Salahalli11kV ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3614** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಸಾಲಹಳ್ಳಿ** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ.

12) **KPTCL/CEE/TRNS/BGKT/110kV/STNDR-04/26-27/Munavalli ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3615** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಸೌದತ್ತಿ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಮುನವಳ್ಳಿ** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ.

13) **KPTCL/CEE/TRNS/BGKT/110kV/STNDR-05/26-27/Ghataprabha ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3616** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಘಟಪ್ರಭಾ** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. **Reserved for ST category.**

14) **KPTCL/CEE/TRNS/BGKT/110kV/STNDR-06/26-27/Ankali ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3617** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಅಂಕಲಿ** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. **Reserved for Category -IIA**

15) **KPTCL/CEE/TRNS/BGKT/110kV/STNDR-07/26-27/Aratagal ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3618** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಸೌದತ್ತಿ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಅರಟಗಲ್** ಉಪಕೇಂದ್ರದಲ್ಲಿ 1x10MVA, 110/11kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/11kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ.

16) **KPTCL/CEE/TRNS/BGKT/110kV/STNDR-08/26-27/Salahalli33kV ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3619** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಸಾಲಹಳ್ಳಿ** ಉಪಕೇಂದ್ರದಲ್ಲಿ 1x10MVA, 110/33kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/33kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ.

17) **KPTCL/CEE/TRNS/BGKT/110kV/STNDR-09/26-27/Soundatti ಟೆಂಡರ್ ಸಂಖ್ಯೆ: KPTCL/2026-27/SS/WORK_INDENT3620/ CALL-2** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಬೆಳಗಾವಿ ಜಿಲ್ಲೆ, ಸೌದತ್ತಿ ತಾಲ್ಲೂಕಿನಲ್ಲಿರುವ, 110/11ಕೆ.ವಿ **ಸೌದತ್ತಿ** ಉಪಕೇಂದ್ರದಲ್ಲಿ 1x10MVA, 110/33kV ಪವರ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ 1x20MVA, 110/33kV ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. **Reserved for ST category.**

ಟೆಂಡರ್‌ಗಳನ್ನು ಇ-ಪೋರ್ಟಲ್ ವಿಧಾನದಲ್ಲಿ ಮಾತ್ರ ಸ್ವೀಕರಿಸಲಾಗುವುದು. ಇ-ಪೋರ್ಟಲ್ ವಿಧಾನದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ಇಲ್ಲಿಗೆ **08.05.2026**, ರಂದು ಅಥವಾ ಆನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ., 110 ಕೆವಿ ಉಪ-ಕೇಂದ್ರದ ಆವರಣ, ನವನಗರ, ಬಾಗಲಕೋಟೆ–587 103.

ಪದಗ್ರಹಣದ ತಯಾರಿ ಇದೆ, ಊಟಕ್ಕೆ ಬರಲ್ಲವೆಂದಿದ್ದ ರಥ್

ಸುವೇಂದು ಪಿಎ ಸೋದರ ದೇವ್ ಕಣ್ಣೀರು

ಕೋಲ್ಕತಾ: ಬುಧವಾರ ರಾತ್ರಿ ಪಶ್ಚಿಮ ಬಂಗಾಳದಲ್ಲಿ ಗುಂಡಿಕ್ಕಿ ಕೊಲ್ಲಲ್ಪಟ್ಟ ಬಿಜೆಪಿ ಸಿಎಂ ಅಭ್ಯರ್ಥಿ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್, ಹತ್ಯೆಗೆ ಕೆಲವೇ ಗಂಟೆಗಳ ಮೊದಲು ಮೇದಿನಿಪುರದಲ್ಲಿರುವ ತಮ್ಮ ಮನೆಗೆ ಹೋಗಿದ್ದರು ಮತ್ತು ನಂತರ ಪದಗ್ರಹಣ ಕಾರ್ಯಕ್ರಮದ ತಯಾರಿಗೆ ಕೋಲ್ಕತಾಗೆ ತೆರಳಿದ್ದರು ಎಂದು ಕುಟುಂಬದವರು ತಿಳಿಸಿದ್ದಾರೆ.

ಆಗ ಮಾರ್ಗ ಮಧ್ಯೆಯೇ ಅವರಿಗೆ ಪಾಯಿಂಟ್ ಬ್ಲಾಂಕ್‌ನಲ್ಲಿ ಗುಂಡಿಟ್ಟು ಕೊಲೆ ಮಾಡಲಾಗಿತ್ತು.

ಈ ಬಗ್ಗೆ ಮಾತನಾಡಿದ ರಥ್ ಅವರ ಸಹೋದರ ದೇವ್ ಕುಮಾರ್, 'ಅಡುಗೆ ಮಾಡಿ ಇಟ್ಟಿರುತ್ತೇನೆ, ಬೇಗ ವಾಪಸ್ ಬಂದು ಬಿಡು' ಎಂದು ಅಮ್ಮ ಅಣ್ಣನಿಗೆ ಹೇಳಿದಾಗ, 'ಇಲ್ಲ ನಾನು ಪ್ರಮಾಣ ವಚನ ಕಾರ್ಯಕ್ರಮದ ತಯಾರಿಯಲ್ಲಿ ಬ್ಯುಸಿಯಾಗಿರುತ್ತೇನೆ' ಎಂದು ಹೇಳಿದ್ದ ಎಂದು ತಿಳಿಸಿದರು.

ನನ್ನ ಅಣ್ಣನಿಗೆ ಯಾರ ಜತೆಗೂ ಶತ್ರುತ್ವ ಇರಲಿಲ್ಲ. ನಿನ್ನೆಯಷ್ಟೇ ಆತ ನಮ್ಮೆಲ್ಲರ ಜತೆ ಕೂತು ಮಾತನಾಡಿದ್ದ. ಮಧ್ಯಾಹ್ನ 2 ಗಂಟೆಯ ನಂತರ ಕೋಲ್ಕತಾ ಕಡೆಗೆ ಹೊರಟಿದ್ದ. ಆತನ ಹತ್ಯೆ ಹಿಂದೆ ಯಾರೇ ಇದ್ದರೂ ಅವರಿಗೆ ಅತ್ಯಂತ ಕಠಿಣ ಶಿಕ್ಷೆ ಆಗಬೇಕು ಎಂದು ದೇವ್ ಕುಮಾರ್ ಆಗ್ರಹಿಸಿದರು.

ಸಿಎಂ ಆಯ್ಕೆ ಮಾಡಿ: ಕೈ ಹೈಗೆ ಕೇರಳ ಶಾಸಕರಿಂದ ಆಗ್ರಹ

ಸಭೆಯಲ್ಲಿ 1 ಸಾಲಿನ ಪ್ರಸ್ತಾವ ಅಂಗೀಕಾರ

ತಿರುವನಂತಪುರ: 'ಮುಖ್ಯಮಂತ್ರಿ ಆಯ್ಕೆಯ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಿ' ಎಂದು ಕೋರಿ ಪಕ್ಷದ ಹೈಕಮಾಂಡ್‌ಗೆ ಬರೆದಿರುವ ಒಂದು ಸಾಲಿನ ನಿರ್ಣಯ ಪ್ರಸ್ತಾವವನ್ನು ಕೇರಳ ಕಾಂಗ್ರೆಸ್‌ನ 63 ಜನ ಶಾಸಕರು ಗುರುವಾರ ಒಮ್ಮತದಿಂದ ಅಂಗೀಕರಿಸಿದರು. ಆ ಮೂಲಕ ಸಿಎಂ ಅಭ್ಯರ್ಥಿ ಆಯ್ಕೆಯ ಅಧಿಕಾರವನ್ನು ದಿಲ್ಲಿ ವರಿಷ್ಠರಿಗೆ ಔಪಚಾರಿಕವಾಗಿ ನೀಡಿದರು.

ಶಾಸಕರಲ್ಲದ ವೇಣುಗೋಪಾಲ್ ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿರುವಾಗಲೇ ಈ ರೀತಿಯ ಬೆಳವಣಿಗೆಯೊಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ನಡೆದಿರುವುದು ಭಾರಿ ಕುತೂಹಲ ಹಾಗೂ ಅಚ್ಚರಿಗೆ ಕಾರಣವಾಗಿದೆ. ನಿರ್ಣಯ ಅಂಗೀಕಾರದ ಬಗ್ಗೆ ಮಾಹಿತಿ ನೀಡಿದ ಕಾಂಗೆಸ್ ಶಾಸಕ ಸನೀಶ್ ಕುಮಾರ್ ಜೋಸೆಫ್, 'ಕೇರಳ ಕಾಂಗ್ರೆಸ್ ಸಮಿತಿಯ ಮುಖ್ಯಸ್ಥ ಸನ್ನಿ ಜೋಸೆಫ್ ಅವರು ಔಪಚಾರಿಕ ನಿರ್ಣಯವನ್ನು ಮಂಡಿಸಿದರು. ನಾಯಕರಾದ ವಿ.ಡಿ.ಸತೀಸನ್ ಮತ್ತು ರಮೇಶ್ ಚೆನ್ನಿತ್ತಲ ಅವರ ಬೆಂಬಲದೊಂದಿಗೆ ಅದನ್ನು ಅಂಗೀಕರಿಸಲಾಯಿತು' ಎಂದು ತಿಳಿಸಿದರು. ಗಮನಾರ್ಹ ಸಂಗತಿ ಎಂದರೆ ವಿ.ಡಿ.ಸತೀಸನ್ ಹಾಗೂ ರಮೇಸ್ ಚೆನ್ನಿತ್ತಲ್ ಇಬ್ಬರೂ ರಾಹುಲ್ ಗಾಂಧಿ ಆಪ್ತ ವೇಣುಗೋಪಾಲ್ ಅವರ ಜತೆ ಸಿಎಂ ಹುದ್ದೆಯ ಪೈಪೋಟಿಯಲ್ಲಿದ್ದಾರೆ ಎನ್ನುವುದು.

ಡಿಎಂಕೆ-ಅಣ್ಣಾಡಿಎಂಕೆ ಮೈತ್ರಿ ಅಸಾಧ್ಯ: ರಾಜಕೀಯ ತಜ್ಞರು

1970ರಲ್ಲೂ ನಡೆದಿತ್ತು ವಿಫಲ ಮೈತ್ರಿ ಯತ್ನ

ಚೆನ್ನೈ: ಡಿಎಂಕೆ ಮತ್ತು ಎಐಎಡಿಎಂಕೆ ಒಟ್ಟಾಗಿ ಸರ್ಕಾರ ರಚಿಸುವ ಸಾಧ್ಯತೆಯಿದೆ ಎಂಬ ಮಾಧ್ಯಮ ವರದಿಗಳನ್ನು ರಾಜಕೀಯ ವಿಶ್ಲೇಷಕರು ಹಾಗೂ ತಜ್ಞರು ತಳ್ಳಿಹಾಕಿದ್ದು, ಅದೆಲ್ಲ ಕಷ್ಟಸಾಧ್ಯವಾದ ಮಾತು ಎಂದು ಹೇಳಿದ್ದಾರೆ. ಅತಿದೊಡ್ಡ ಪಕ್ಷವಾಗಿ ಟಿವಿಕೆ ಹೊರಹೊಮ್ಮಿದೆಯಾದರೂ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ಸರ್ಕಾರ ರಚನೆಗೆ ವಿಜಯ್ ಅವರನ್ನು ಆಹ್ವಾನಿಸದ ಹಿನ್ನೆಲೆ ಡಿಎಂಕೆ-ಎಐಎಡಿಎಂಕೆ ಮೈತ್ರಿಗೆ ಅವರು ಅವಕಾಶ ಮಾಡಿಕೊಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದವು. ಇದಕ್ಕೆ ಪೂರಕವೆಂಬಂತೆ 118 ಜನರ ಬಹುಮತವನ್ನು ತೋರಿಸಿ ಎಂದು ರಾಜ್ಯಪಾಲರು ವಿಜಯ್ ಅವರಿಗೆ ಆಗ್ರಹಿಸಿದ್ದು ನಾನಾ ರೀತಿಯ ಸಂಶಯಗಳಿಗೆ ಕಾರಣವಾಗಿತ್ತು.

ಎರಡೂ ಪಕ್ಷಗಳು ಮೈತ್ರಿ ಮಾಡಿಕೊಂಡರೆ ಸಿಎಂ ಆಯ್ಕೆ, ಮಂತ್ರಿಮಂಡಲ ಸಮಾನ ಹಂಚಿಕೆ ಸೇರಿದಂತೆ ಇನ್ನೂ ಹಲವಾರು ಕ್ಲಿಷ್ಟಕರ ಪ್ರಶ್ನೆಗಳು ಮೇಲೆದ್ದು ಬರುತ್ತವೆ. ಜತೆಗೆ ಡಿಎಂಕೆ-ಎಐಎಡಿಎಂಕೆಯಲ್ಲೇ ಅನೇಕ ಶಾಸಕರು ಮೈತ್ರಿಯನ್ನು ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ಈ ಎರಡೂ ಪಕ್ಷಗಳು ಸೇರಿ ಸರ್ಕಾರ ರಚಿಸುವುದು ಬಹುತೇಕ ಅಸಾಧ್ಯ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ. 1970ರಲ್ಲಿ ಎಂಜಿಆರ್-ಕರುಣಾನಿಧಿ ಅವರ ಮಧ್ಯೆ ಕೂಡ ವಿಫಲ ಮೈತ್ರಿ ಯತ್ನ ನಡೆದಿತ್ತು.

ನಿತೀಶ್ ಪುತ್ರ ನಿಶಾಂತ್ ಸೇರಿ 32 ಜನ ಸಚಿವರಾಗಿ ಪ್ರಮಾಣ

ಪಾಟ್ನಾ: ಬಿಹಾರದಲ್ಲಿ ಗುರುವಾರ ನಡೆದ ಮಹತ್ವದ ರಾಜಕೀಯ ವಿದ್ಯಮಾನದಲ್ಲಿ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಒಟ್ಟು 32 ನಾಯಕರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಬಿಹಾರದ ರಾಜ್ಯಪಾಲ ಸೈಯದ್ ಅತಾ ಹಸ್ನೈನ್ ಅವರು ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಮುಖ್ಯಮಂತ್ರಿ ಸಮ್ರಾಟ್ ಚೌಧರಿ ನೇತೃತ್ವದ ಎನ್‌ಡಿಎ ಸರ್ಕಾರದ ಮೊದಲ ಪ್ರಮುಖ ಸಂಪುಟ ವಿಸ್ತರಣೆ ಇದಾಗಿದೆ. ಈ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತೀನ್ ನವೀನ್ ಸೇರಿದಂತೆ ಗಣ್ಯರು ಸಾಕ್ಷಿಯಾದರು.

ವಿದೇಶ ಸಮಾಚಾರ

ಇರಾನ್ ದಾಳಿಗೆ ಇಲ್ಲಿಯ ತನಕ 15 ಅಮೆರಿಕ ನೆಲೆ ಧ್ವಂಸ: ಚಿತ್ರ ಬಿಡುಗಡೆ

ಇರಾನ್ ಮಾಧ್ಯಮದಲ್ಲಿ ಪ್ರಸಾರ

ಟೆಹರಾನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ತಿಳಿದುಕೊಂಡಿರುವುದಕ್ಕಿಂತ ಹೆಚ್ಚಾಗಿಯೇ ಮಾರಕ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ಇರಾನ್ ನಡೆಸಿದ್ದು, ಅಮೆರಿಕದ 15 ಸೇನಾ ನೆಲೆಗಳಲ್ಲಿನ 228ಕ್ಕೂ ಹೆಚ್ಚು ಮಿಲಿಟರಿ ಆಸ್ತಿಪಾಸ್ತಿಗಳನ್ನು ಧ್ವಂಸಗೊಳಿಸಿದೆ.



ಖತಾರ್‌ನಲ್ಲಿರುವ ಅಲ್ ಉದೈಡ್ ವಾಯು ನೆಲೆಯಲ್ಲಿನ ಉಪಗ್ರಹ ಸಂಪರ್ಕ ಜಾಲ ತಾಣದಲ್ಲಿ ಹಲವಾರು ವಿಧ್ವಂಸಕ ಚಿತ್ರಗಳನ್ನು ಪತ್ತೆ ಮಾಡಲಾಗಿದೆ. ಈ ಉಪಗ್ರಹ ಚಿತ್ರಗಳನ್ನು ಇರಾನಿನ ಸ್ಟೇಟ್ ಮೀಡಿಯಾ ಬಿತ್ತರಿಸಿದೆ. ಖತಾರ್ ಅಷ್ಟೇ ಅಲ್ಲದೆ, ಇರಾನಿನ ಮಾರಕಾಸ್ತ್ರಗಳು ಬೆಹರಿನ್ ಹಾಗೂ ಕುವೈತ್‌ನಲ್ಲಿನ ಅಮೆರಿಕನ್ ಸೇನಾ ನೆಲೆಗಳಲ್ಲಿ ಎಸಗಿರುವ ವ್ಯಾಪಕ ಹಾನಿ ಮಾಡಿವೆ. ಇರಾನಿನ ಈ ಪ್ರತಿಪಾದನೆಯನ್ನು ವಾಷಿಂಗ್ಟನ್ ಪೋಸ್ಟ್ ತನಿಖೆಯೂ ಸಹ ದೃಢೀಕರಿಸಿದೆ. ಯುದ್ಧ ಆರಂಭವಾದ ಫೆ.28 ರಿಂದೀಚೆಗೆ ಟೆಹರಾನ್ ನಡೆಸಿದ ಮಾರಕ ದಾಳಿಯಿಂದಾಗಿ ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಸೇನಾ ನೆಲೆಗಳಿಗೆ ಸೇರಿದ 228 ಸೇನಾ ಪರಿಕರಗಳನ್ನು ಧ್ವಂಸಗೊಳಿಸಲಾಗಿದೆ.

ಉಪಗ್ರಹ ಚಿತ್ರಗಳಲ್ಲಿ ಗುರುತಿಸಿರುವಂತೆ ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಸೇನಾ ನೆಲೆಗಳಲ್ಲಿನ ಸೇನಾ ಹ್ಯಾಂಗರ್‌ಗಳು, ಬ್ಯಾರಕ್‌ಗಳು, ಇಂಧನ ದಾಸ್ತಾನು, ವಿಮಾನಗಳು, ಪ್ರಮುಖ ರಡಾರ್‌ಗಳು, ಸಂಪರ್ಕಗಳು ಮತ್ತು ವಾಯು ಸಂರಕ್ಷಣಾ ವ್ಯವಸ್ಥೆಯನ್ನು ಹಾಳುಗೆಡವಲಾಗಿದೆ.

ಯಾವ ಉಗ್ರನನ್ನೂ ಬಿಡೋಲ್ಲ: ಪಿಎಂ ನೆತನ್ಯಾಹು ವಾರ್ನಿಂಗ್

ಟೆಲ್ ಅವಿವ್: ಇರಾನ್ ಜತೆ ಶೀಘ್ರದಲ್ಲೇ ಒಪ್ಪಂದವಾಗಲಿದೆ ಎಂದು ಅಮೆರಿಕದ ಅಧ್ಯಕ್ಷ ಟ್ರಂಪ್ ಹೇಳಿದ ಬೆನ್ನಲ್ಲೇ ಇಸ್ರೇಲ್ ದಾಳಿಯಿಂದ ಯಾವೊಬ್ಬ ಉಗ್ರನೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಗುಡುಗಿದ್ದಾರೆ. ಇತ್ತೀಚೆಗೆ ನಡೆದ ಸೇನಾ ಕಾರ್ಯಾಚರಣೆಗಳ ಕುರಿತು ಮಾತನಾಡಿದ ಅವರು, ಇಸ್ರೇಲ್ ಮೇಲೆ ಕೈಹಾಕುವ ಪ್ರತಿಯೊಬ್ಬರಿಗೂ ತಕ್ಕ ಪಾಠ ಕಲಿಸಲಾಗುವುದು. ನಮ್ಮ ರಕ್ಷಣಾ ಪಡೆಗಳ ಕಣ್ಣಿನಿಂದ ಯಾವೊಬ್ಬ ಉಗ್ರನೂ ಅಡಗಿಕೊಳ್ಳಲು ಅಥವಾ ರಕ್ಷಣೆ ಪಡೆಯಲು ಸಾಧ್ಯವಿಲ್ಲ. ನಾವು ಎಲ್ಲಿ ಬೇಕಾದರೂ, ಯಾರ ಮೇಲೆ ಬೇಕಾದರೂ ದಾಳಿ ನಡೆಸುವ ಸಾಮರ್ಥ್ಯ ಹೊಂದಿದ್ದೇವೆ. ದೇಶದ ಭದ್ರತೆಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಆಸ್ಟ್ರೇಲಿಯಾ: ಐಸಿಸ್‌ಗೆ ಸೇರಿದ 3 ಜಿಹಾದಿ ಮಹಿಳೆಯರು ಸೆರೆ

ಸಿಡ್ನಿ: ಜಿಹಾದಿ ಐಸಿಸ್‌ನೊಂದಿಗೆ ನಂಟು ಹೊಂದಿರುವ ಮೂವರು ಮಹಿಳೆಯರನ್ನು ಆಸ್ಟ್ರೇಲಿಯಾದಲ್ಲಿ ಗುರುವಾರ ಬಂಧಿಸಲಾಗಿದೆ. ಈ ವರ್ಷಾರಂಭದಲ್ಲಿ ಸಿರಿಯಾದ ಅಲ್ ರೋಜ್ ಶಿಬಿರದಲ್ಲಿ ಬಂಧನಕ್ಕೊಳಗಾಗಿದ್ದ ಈ ಮಹಿಳೆಯರನ್ನು ಗಡಿಪಾರು ಮಾಡಲಾಗಿದ್ದು, ಇವರುಗಳು ಆಸ್ಟ್ರೇಲಿಯಾದ ತಮ್ಮ ಮನೆಗಳಿಗೆ ವಾಪಸಾಗುತ್ತಿದ್ದಂತೆಯೇ ಬಂಧಿಸಲಾಯಿತು. ಆಸ್ಟ್ರೇಲಿಯಾ ನಾಗರಿಕರಾದ ಇವರ ಪೈಕಿ ಕೌಸರ್ ಅಬ್ಬಾಸ್ (53) ಮತ್ತು ಜೈನಾಬ್ ಅಹ್ಮದ್ (31)ರನ್ನು ಮೆಲ್ಬೋರ್ನ್‌ನಲ್ಲಿ ಹಾಗೂ ಜನ್ನೈ ಸಫಾರ್ (32) ಎಂಬಾಕೆ ಸಿಡ್ನಿಗೆ ಬಂದಿಳಿಯುತ್ತಿದ್ದಂತೆಯೇ ಬಂಧಿಸಲಾಯಿತು.

ವಿಜಯ್ ಸರ್ಕಾರಕ್ಕೆ 6 ತಿಂಗ್ಳು ತೊಂದರೆ ಕೊಡಲ್ಲ: ಸ್ಟಾಲಿನ್

ಸರ್ಕಾರ ರಚಿಸಲಿ ಎನ್ನುತ್ತಲೇ ಮಾರ್ಮಿಕ ಹೇಳಿಕೆ ಕೊಟ್ಟ ಡಿಎಂಕೆ ಮುಖ್ಯಸ್ಥ | 6 ತಿಂಗಳ ನಂತರ ಏನು? ಕುತೂಹಲ

ಚೆನ್ನೈ: ತಮಿಳುನಾಡಿನಲ್ಲಿ ಟಿವಿಕೆ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರು ಹೊಸ ಸರ್ಕಾರ ರಚಿಸುವಲ್ಲಿ ಯಶಸ್ವಿಯಾದರೆ ಮೊದಲ ಆರು ತಿಂಗಳಲ್ಲಿ ಅವರಿಗೆ ಡಿಎಂಕೆ ಯಾವುದೇ ರೀತಿಯಲ್ಲಿ ತೊಂದರೆ ನೀಡುವುದಿಲ್ಲ ಎಂದು ಅಧಿಕಾರ ಕಳೆದುಕೊಂಡ ಮುಖ್ಯಮಂತ್ರಿ ಟಿ.ಎನ್.ಸ್ಟಾಲಿನ್ ಹೇಳಿದ್ದಾರೆ.

ರಾಜ್ಯದಲ್ಲಿ ಅಸ್ಥಿರತೆ ಉಂಟು ಮಾಡಲು ಅಥವಾ ಮತ್ತೊಂದು ಚುನಾವಣೆಗೆ ದಾರಿ ಮಾಡಿಕೊಡುವುದರಲ್ಲಿ ಪಕ್ಷ ಆಸಕ್ತಿ ಹೊಂದಿಲ್ಲ ಎಂದವರು ಆಂಗ್ಲ ದೈನಿಕ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

ಹೊಸ ಸರ್ಕಾರ ಈಗ ಡಿಎಂಕೆ ಸರ್ಕಾರ ಆರಂಭಿಸಿದ ಕಲ್ಯಾಣ ಕಾರ್ಯಕ್ರಮವನ್ನು ಮುಂದುವರಿಸಬೇಕು ಹಾಗೂ ಚುನಾವಣಾ ಕಾಲದಲ್ಲಿ ಟಿವಿಕೆ ವಾಗ್ದಾನ ಮಾಡಿದ ಭರವಸೆಗಳೂ ಈಡೇರಬೇಕು ಎಂದವರು ಅಪೇಕ್ಷಿಸಿದರು. ಡಿಎಂಕೆ ಕಾಲದಲ್ಲಿದ್ದಂತೆ ಶಾಲಾ ಮಕ್ಕಳಿಗೆ ಉಚಿತ ಉಪಹಾರ ಯೋಜನೆಯೂ ಮುಂದುವರೆಯಬೇಕು ಎಂದರು.

ಹಾಗೆಯೇ ಪ್ರತಿ ಮನೆಯ ಮಹಿಳಾ ಮುಖ್ಯಸ್ಥರಿಗೆ ಮಾಸಿಕ ತಲಾ ಒಂದು ಸಾವಿರ ರೂ.ಗಳ ಆರ್ಥಿಕ ನೆರವು ಕೂಡಾ ಮುಂದುವರಿಯಬೇಕು. ವಿಜಯ್ ಅವರು ಮಹಿಳೆಯರಿಗೆ ಮಾಸಿಕ ತಲಾ 2,500 ರೂ. ನೀಡುವ ಭರವಸೆ ನೀಡಿದ್ದಾರೆ. ಆದರೆ ಅದು ಕಾರ್ಯರೂಪಕ್ಕೆ ಬರುವುದು ಅಸಾಧ್ಯ. ಹೀಗಾಗಿ ನಾವು ಮಾಡಿದಂತೆ ಕನಿಷ್ಠ ಒಂದು ಸಾವಿರ ರೂಪಾಯಿಯಾದರೂ ನೀಡಲಿ ಎಂದರು.

ಇದೇ ವೇಳೆ ನಿರ್ಗಮಿತ ಡಿಎಂಕೆ ಸರ್ಕಾರದ ಕಾರ್ಯದಕ್ಷತೆಯನ್ನೂ ಸಮರ್ಥಿಸಿಕೊಂಡರು.

ಈ ಚುನಾವಣೆಯಲ್ಲಿ ನಾವು ಈಡೇರಿಸಲು ಸಾಧ್ಯವಾಗುವ ಭರವಸೆಗಳನ್ನು ಮಾತ್ರ ನೀಡಿದ್ದೆವು. ಆದರೆ ಟಿವಿಕೆ ಪಾರ್ಟಿಯು ಪಡಿತರ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ವರ್ಷಕ್ಕೆ ತಲಾ ಆರು ಎಲ್‌ಪಿಜಿ ಸಿಲಿಂಡರ್ ಒದಗಿಸುವ ಭರವಸೆ ನೀಡಿದೆ. ಇಂತಹ ಭರವಸೆಗಳನ್ನು ವಿಜಯ್ ಅವರ ಟಿವಿಕೆ ಈಡೇರಿಸುತ್ತದೆ ಎಂದು ನನಗನಿಸುವುದಿಲ್ಲ. ಹಾಗೇನಾದರೂ ಮಾಡಿದರೆ ನನಗೆ ಸಂತೋಷವೇ ಎಂದು ವ್ಯಂಗ್ಯವಾಗಿ ಸ್ಟಾಲಿನ್ ಹೇಳಿದರು.

ತಂದೆ ಪಕ್ಷ ಬೆಂಬಲಿಸಲ್ಲ ಎಂದಿದ್ದ ನಟ ವಿಜಯ್

ಹೊಸ ಪಕ್ಷವೊಂದನ್ನು ಕಟ್ಟಿ ಅತೀ ಕಡಿಮೆ ಅವಧಿಯಲ್ಲೇ ಅಧಿಕಾರದ ಅಂಚಿಗೆ ಬಂದು ನಿಂತಿರುವ ವಿಜಯ್, ತನ್ನ ತಂದೆ ಆರಂಭಿಸಿದ್ದ ಪಕ್ಷವನ್ನು ಬೆಂಬಲಿಸಲು ನಿರಾಕರಿಸಿದ್ದರು ಎಂಬ ವಿಷಯ ಬೆಳಕಿಗೆ ಬಂದಿದೆ. ಮೂಲತಃ ಚಲನಚಿತ್ರ ನಿರ್ದೇಶಕರಾಗಿದ್ದ ವಿಜಯ್ ತಂದೆ ಎಸ್.ಎ.ಚಂದ್ರಶೇಖರ್ 2020ರಲ್ಲಿ ಪಕ್ಷವೊಂದನ್ನು ಕಟ್ಟಿದ್ದರು. 'ಆಲ್ ಇಂಡಿಯಾ ತಲಪತಿ ವಿಜಯ ಮಕ್ಕಳ್ ಇಯಕ್ಕಮ್' ಎಂಬ ಹೆಸರಿನಲ್ಲಿ ನೋಂದಣಿಯನ್ನೂ ಮಾಡಿಸಿದ್ದರು. ಆದರೆ ಇದೇ ವಿಷಯವಾಗಿ ಕುಟುಂಬದಲ್ಲಿ ತೀವ್ರ ವೈಮನಸ್ಯ ತಲೆದೋರಿದ ಕಾರಣ ಚಂದ್ರಶೇಖರ್ ತಮ್ಮ ಪಕ್ಷವನ್ನು ವಿಸರ್ಜಿಸಿದ್ದರು ಎಂದು ತಿಳಿದುಬಂದಿದೆ. ಈ ಕುರಿತು ಮಾತನಾಡಿರುವ ವಿಜಯ್ ತಾಯಿ ಶೋಭಾ, ತನ್ನ ಪತಿ ಚಂದ್ರಶೇಖರ್ ಆರಂಭಿಸಿದ್ದ ಪಕ್ಷದ ಬಗ್ಗೆ ಮಗ ವಿಜಯ್‌ಗೆ ಸಹಮತವಿರಲಿಲ್ಲ. ಆ ಪಕ್ಷದಲ್ಲಿ ಕೆಲಸ ಮಾಡಲು ನಿರಾಕರಿಸಿದ್ದರು. ಇದೇ ಕಾರಣಕ್ಕಾಗಿ ತಂದೆಯೊಂದಿಗೆ ಮಾತನ್ನೇ ಬಿಟ್ಟಿದ್ದರು ಎಂದು ಹೇಳಿದ್ದಾರೆ.

ಬಿಜೆಪಿ ಕಾರ್ಯಕರ್ತರ ಮೇಲೆ ಬಂಗಾಳದಲ್ಲಿ ಬಾಂಬ್ ದಾಳಿ!

ಸುವೇಂದು ಪಿಎ ಹತ್ಯೆ ಬೆನ್ನಲ್ಲೇ ಮತ್ತೊಂದು ವಿಧ್ವಂಸಕ ಕೃತ್ಯ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಚುನಾವಣೆಯ ಫಲಿತಾಂಶದ ನಂತರ ಆರಂಭವಾಗಿರುವ ರಾಜಕೀಯ ಹಿಂಸಾಚಾರ ತಾರಕಕ್ಕೇರಿದೆ. ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಅಧಿಕಾರಿ ಪಿಎ ಹತ್ಯೆಗೀಡಾದ ಬೆನ್ನಲ್ಲೇ ಕೆಲವೇ ತಾಸಿನಲ್ಲಿ ಉತ್ತರ 24 ಪರಗಣ ಜಿಲ್ಲೆಯ ಪನಿಹಾಟಿಯಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಬಾಂಬ್ ದಾಳಿ ನಡೆದಿದೆ. ಈ ಘಟನೆಯಲ್ಲಿ ಐವರು ಬಿಜೆಪಿ ಕಾರ್ಯಕರ್ತರು ತೀವ್ರವಾಗಿ ಗಾಯಗೊಂಡಿದ್ದಾರೆ.

ಬುಧವಾರ ತಡರಾತ್ರಿ ಪನಿಹಾಟಿಯ ದತ್ತಾ ರಸ್ತೆಯಲ್ಲಿ ಬಿಜೆಪಿ ಕಾರ್ಯಕರ್ತರು ಸ್ಥಳೀಯರೊಂದಿಗೆ ಮಾತನಾಡುತ್ತಿದ್ದಾಗ, ಬೈಕ್‌ನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು ಕಚ್ಚಾ ಬಾಂಬ್‌ಗಳನ್ನು ಎಸೆದು ಪರಾರಿಯಾಗಿದ್ದಾರೆ.

ಸ್ಫೋಟದ ತೀವ್ರತೆಗೆ ಐವರು ಕಾರ್ಯಕರ್ತರು ಗಂಭೀರವಾಗಿ ಗಾಯಗೊಂಡಿದ್ದು ತಕ್ಷಣವೇ ಅವರನ್ನು ಕೋಲ್ಕತ್ತಾದ ಆರ್‌ಜಿಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಬಾಂಬ್ ದಾಳಿಗೂ ಮುನ್ನವೇ ಸುವೇಂದು ಅಧಿಕಾರಿ ಅವರ ಪಿಎ ಚಂದ್ರನಾಥ್ ರಥ್ ಅವರನ್ನು ಮದ್ಯಮಗ್ರಾಮದಲ್ಲಿ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದರು. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ರಥ್ ಅವರ ಮೇಲೆ ಬೈಕ್‌ನಲ್ಲಿ ಬಂದ ಹಂತಕರು ಮೂರು ಸುತ್ತು ಗುಂಡು ಹಾರಿಸಿದ್ದರು.

ಸುವೇಂದು ಪಿಎ ರಥ್ ಪಾರ್ಥಿವ ಶರೀರ.

ಈ ಎರಡೂ ಘಟನೆಗಳು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿಯಾಗಿವೆ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. ಹಿಂಸಾಚಾರದ ಹಿನ್ನೆಲೆಯಲ್ಲಿ ಉತ್ತರ 24 ಪರಗಣ ಜಿಲ್ಲೆಯಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಘಟನಾ ಸ್ಥಳದ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದು, ಹಂತಕರ ಪತ್ತೆಗೆ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.

ಟಿಎಂಸಿ ಗೂಂಡಾಗಳ ಸೇಡು: ಬಿಜೆಪಿ ಕಿಡಿಕಿಡಿ

ಟಿಎಂಸಿ ಗೂಂಡಾಗಳು ಉದ್ದೇಶಪೂರ್ವಕವಾಗಿ ಈ ದಾಳಿಗಳನ್ನು ನಡೆಸುತ್ತಿದ್ದಾರೆ. ಚುನಾವಣೆಯಲ್ಲಿ ಸೋತ ಹತಾಶೆಯಿಂದ ಟಿಎಂಸಿ ಇಂತಹ ಹಿಂಸಾಚಾರಕ್ಕೆ ಇಳಿದಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ. ಆದರೆ ಈ ಆರೋಪಗಳನ್ನು ನಿರಾಕರಿಸಿರುವ ಟಿಎಂಸಿ, ಇದು ಬಿಜೆಪಿಯ ಆಂತರಿಕ ಕಲಹದ ಫಲ ಇರಬಹುದು, ನಮಗೂ ಇದಕ್ಕೂ ಸಂಬಂಧವಿಲ್ಲ ಎಂದು ತಿರುಗೇಟು ನೀಡಿದೆ.

ಶಾಲಾ ನಿರ್ವಹಣಾ ಸಮಿತಿಗಳಿಗೆ ಇನ್ನು ಪೋಷಕರೇ ಮುಖ್ಯಸ್ಥರು!

ನವದೆಹಲಿ: ಕೇಂದ್ರ ಸರ್ಕಾರ ಈಗ ಶಾಲಾ ನಿರ್ವಹಣಾ ಸಮಿತಿಗಳಲ್ಲಿ ಪೋಷಕರನ್ನು ಪ್ರಮುಖ ಭಾಗವನ್ನಾಗಿ ಮಾಡುವ ಹೊಸ ನೀತಿಯನ್ನು ಅನಾವರಣ ಮಾಡಿದೆ. ಅದರಂತೆ ಶಾಲಾ ಸಮಿತಿಗಳಲ್ಲಿ ಪೋಷಕರೇ ಮುಖ್ಯಸ್ಥರಾಗಿದ್ದು ಪ್ರಾಂಶುಪಾಲರು ಕಾರ್ಯದರ್ಶಿಯಾಗಿ ನಿರ್ವಹಿಸಬೇಕಾಗುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರದಾನ್ ತಿಳಿಸಿದ್ದಾರೆ. ಶಾಲಾ ನಿರ್ವಹಣಾ ಸಮಿತಿಗಳು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಮಾಜದ ಸೇತುವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಈ ಹೊಸ ನೀತಿ ಜಾರಿಗೆ ತರಲಾಗುತ್ತಿದೆ. ಶಿಕ್ಷಣ ಹಾಗೂ ಶಾಲಾ ನಿರ್ವಹಣೆಯನ್ನು ಸಮಾಜಕ್ಕೆ ಹಸ್ತಾಂತರಿಸಲು ಪ್ರಯತ್ನಿಸುತ್ತೇವೆ ಎಂದರು. ಮಾರ್ಗಸೂಚಿಯನುಸಾರ ಶೈಕ್ಷಣಿಕ ಅವಧಿ ಆರಂಭಿಸಿದ ಒಂದು ತಿಂಗಳೊಳಗೆ ಶಾಲೆಗಳಲ್ಲಿ ನಿರ್ವಹಣಾ ಸಮಿತಿ ರಚಿಸಬೇಕಾಗಿದೆ.

'ಸೆರಗ ಸರ್ಸೆ' ಹಾಡಿಗೆ ಕುಣಿದಿದ್ದ ನೋರಾ ಫತೇಹಿ ಬೇಷರತ್ ಕ್ಷಮೆ

ನವದೆಹಲಿ: ಕೇಡಿ ಚಿತ್ರದ ಸರ್ಸೆ ಸೆರಗ ಸರ್ಸೆ ಹಾಡಿನ ವಿವಾದಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ನೋರಾ ಫತೇಹಿ ಅವರು ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಹಾಜರಾಗಿ ಬೇಷರತ್ ಕ್ಷಮೆಯಾಚಿಸಿದ್ದಾರೆ. ಈ ಹಾಡಿನಲ್ಲಿ ಮಹಿಳೆಯರನ್ನು ಅಶ್ಲೀಲವಾಗಿ ಮತ್ತು ಆಕ್ಷೇಪಾರ್ಹವಾಗಿ ಬಿಂಬಿಸಲಾಗಿದೆ ಎಂಬ ಆರೋಪದ ಮೇಲೆ ಮಹಿಳಾ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ನೋಟಿಸ್ ಜಾರಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಆಯೋಗದ ಮುಂದೆ ವಿಚಾರಣೆಗೆ ಹಾಜರಾದ ನೋರಾ, ತಮ್ಮ ಕಡೆಯಿಂದ ಲಿಖಿತ ವಿವರಣೆಯನ್ನು ಸಲ್ಲಿಸಿದರು. ಒಬ್ಬ ಕಲಾವಿದೆಯಾಗಿ ಸಮಾಜದ ಬಗ್ಗೆ ನನಗೆ ಜವಾಬ್ದಾರಿಯಿದೆ. ಯಾರ ಭಾವನೆಗಳಿಗೂ ಧಕ್ಕೆ ತರುವ ಉದ್ದೇಶ ನನಗಿರಲಿಲ್ಲ. ಇದಕ್ಕೆ ಕ್ಷಮೆಯಾಚಿಸುತ್ತೇನೆ ಎಂದರು. ಅಲ್ಲದೇ ಪ್ರಾಯಶ್ಚಿತ್ತವಾಗಿ ಅನಾಥ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಧನಸಹಾಯ ನೀಡುವುದಾಗಿ ಹೇಳಿದರು.

ಮಹಿಳೆಯರು, ಮಕ್ಕಳು, ವೃದ್ಧರಿಗೆ ರಾಜಧಾನಿ ದೆಹಲಿ ಅಸುರಕ್ಷಿತ!

ನವದೆಹಲಿ: ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಸುರಕ್ಷತೆಯ ವಿಷಯದಲ್ಲಿ ದೇಶದ ರಾಜಧಾನಿ ದೆಹಲಿ ಅತ್ಯಂತ ಅಸುರಕ್ಷಿತ ನಗರವಾಗಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ಹೇಳಿದೆ. ಎನ್‌ಸಿಆರ್‌ಬಿ ಅಂಕಿಅಂಶಗಳ ಪ್ರಕಾರ, 2024ರಲ್ಲಿ ಮಹಿಳೆಯರ ವಿರುದ್ಧ 13396 ಅಪರಾಧ ಪ್ರಕರಣಗಳು ದಾಖಲಾಗಿವೆ.

2023ರಲ್ಲಿ ದೆಹಲಿಯಲ್ಲಿ 275402 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಕಳ್ಳತನ, ಕೊಲೆ ಮತ್ತು ಅಪಹರಣದಂಥ ಕೇಸ್‌ಗಳಲ್ಲಿ ರಾಜಧಾನಿ ಅಗ್ರಸ್ಥಾನದಲ್ಲಿದೆ. ಇನ್ನು ಹಿರಿಯ ನಾಗರಿಕರ ವಿರುದ್ಧದ 1267 ಅಪರಾಧ ಪ್ರಕರಣಗಳು, ಮಕ್ಕಳ ವಿರುದ್ಧದ 7,662 ಅಪರಾಧ ಪ್ರಕರಣಗಳು ದೆಹಲಿಯಲ್ಲಿ ದಾಖಲಾಗಿವೆ.

ದೇಶದಲ್ಲಿ ವಿದೇಶಿ ಅಪರಾಧಿಗಳ ಪೈಕಿ ಬಾಂಗ್ಲನ್ನರೇ ಹೆಚ್ಚು: ವರದಿ

ನವದೆಹಲಿ: ದೇಶಾದ್ಯಂತ ಬಂಧಿಸಲಾಗಿರುವ ವಿದೇಶಿ ಅಪರಾಧಿಗಳಲ್ಲಿ ಬಾಂಗ್ಲಾದೇಶದವರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೋ (ಎನ್‌ಸಿಆರ್‌ಬಿ) ವರದಿ ತಿಳಿಸಿದೆ. 2024ರಲ್ಲಿ 3091 ಪ್ರಕರಣಗಳು ದಾಖಲಾಗಿದ್ದು ಇವರೆಲ್ಲ ಬಾಂಗ್ಲಾದೇಶಿಗಳೇ ಆಗಿದ್ದಾರೆ.

ಇನ್ನು 509 ನೈಜೀರಿಯನ್‌ಗಳ ಮೇಲೆ ಅಪರಾಧ ಕೇಸ್ ದಾಖಲಾಗಿದ್ದು, ಎರಡನೇ ಸ್ಥಾನದಲ್ಲಿ ನೈಜಿರಿಯಾ ಇದೆ. ನೇಪಾಳ 476ರ ಮೂಲಕ ಮೂರನೇ ಸ್ಥಾನ, ನಂತರದ್ದು 245 ಸಂಖ್ಯೆಯ ಮ್ಯಾನ್ಮಾರ್ ಎಂದು ಅಂಕಿಅಂಶಗಳು ತಿಳಿಸಿವೆ.

ಬಂಗಾಳದಲ್ಲಿ ಬಿಜೆಪಿ ಪ್ರತಿಭಟನೆ

ಕೋಲ್ಕತಾ: ಸುವೇಂದು ಅಧಿಕಾರಿಯ ಆಪ್ತಸಹಾಯಕ ಚಂದ್ರಕಾಂತ ರಥ್ ಕೊಲೆ ವಿರುದ್ಧ ಪಶ್ಚಿಮ್ ಮೇಧಿನಿಪುರ ಜಿಲ್ಲೆಯ ಸಾಲ್ಬೋನಿಯಲ್ಲಿ ಬಿಜೆಪಿ ಬೆಂಬಲಿಗರು ಗುರುವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಸುಮಾರು 200 ಕ್ಕೂ ಹೆಚ್ಚು ಕಾರ್ಯಕರ್ತರು ಮತ್ತು ಬೆಂಬಲಿಗರು ಟೈರ್‌ಗೆ ಬೆಂಕಿಹಚ್ಚಿ ವಾಹನ ಸಂಚಾರಕ್ಕೆ ಅಡ್ಡಿ ಮಾಡಿದ್ದಲ್ಲದೆ, ಟಿಎಂಸಿ ವಿರುದ್ಧ ಘೋಷಣೆ ಕೂಗಿದರು.

ಕೊಲೆಯಾದ ದುರ್ದೈವಿ ಚಂದ್ರಕಾಂತ್ ಬುಧವಾರ ರಾತ್ರಿ ಮಧ್ಯಮ್ ಗ್ರಾಮದಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ ಬೈಕ್ ಮೂಲಕ ಅಡ್ಡಗಟ್ಟಿದ ದುಷ್ಕರ್ಮಿಗಳು ಗುಂಡು ಹಾರಿಸಿ ಪರಾರಿಯಾಗಿದ್ದರು.

ತಮಿಳುನಾಡು ನಂಬರ್ ಗೇಮ್: ರಾಜ್ಯಪಾಲರ ನಡೆ ಸರಿಯೇ?



ಚುನಾವಣೆ ನಂತರ ತಮಿಳುನಾಡಿನಲ್ಲಿ ಸರ್ಕಾರ ರಚನೆಗೆ ಸಂಬಂಧಿಸಿದಂತೆ ಇದೀಗ ದೇಶಾದ್ಯಂತ ಚರ್ಚೆ ಆರಂಭವಾಗಿದೆ. ಫಲಿತಾಂಶದ ಪ್ರಕಾರ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಚಿತ್ರ ನಟ ವಿಜಯ್ ನೇತೃತ್ವದ 'ತಮಿಳಿಗ ವೆಟ್ರಿ ಕಳ್ಗಂ (ಟಿವಿಕೆ)'ಗೆ ಸರ್ಕಾರ ರಚಿಸಲು ಆಹ್ವಾನಿಸುವ ಸಂಬಂಧ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ನಡೆದುಕೊಂಡ ರೀತಿಯನ್ನು ಟೀಕಿಸುವ ಹಾಗೂ ಬೆಂಬಲಿಸುವ ಪರ್ವ ಇದೀಗ ಆರಂಭವಾಗಿದೆ. ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಹೊರಬಿದ್ದು, ನಂಬರ್ ಗೇಮ್ ಆಧಾರ ದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಬೇಕಾದ ಸಂದರ್ಭ ಬಂದಾಗಲೆ ಲ್ಲಾ ಮಾತೆತ್ತಿದರೆ 'ಬೊಮ್ಮಾಯಿ ಪ್ರಕರಣದ ತೀರ್ಪು' ಎಂದು ಉಲ್ಲೇಖ ಮಾಡಲಾಗುತ್ತದೆ! ಹಾಗಂದರೇನು? ಇತ್ಯಾದಿ 'ನಂಬರ್ ಗೇಮ್' ಹಾಗೂ ರಾಜ್ಯಪಾಲರ ನಡೆ ಕುರಿತ ಒಂದು ಸಮಗ್ರ ಒಳನೋಟ ಇಲ್ಲಿದೆ:

ಎಸ್.ಆರ್.ಬೊಮ್ಮಾಯಿ ಕೇಸಲ್ಲಿ ಸುಪ್ರೀಂಕೋರ್ಟ್ ತೀರ್ಪು ಏನು?

ಕರ್ನಾಟಕದಲ್ಲಿ 1989ರಲ್ಲಿ ಅಂದಿನ ಜನತಾ ದಳ ಸರ್ಕಾರದ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಸರ್ಕಾರ 'ಬಹುಮತ ಕಳೆದುಕೊಂಡಿದೆ' ಎಂಬ ಕಾರಣ ನೀಡಿ ಅಂದಿನ ರಾಜ್ಯಪಾಲರು ಸರ್ಕಾರವನ್ನು ವಜಾ ಮಾಡಿದರು. ತಾವು ಸದನದಲ್ಲಿ ಬಹುಮತ ಸಾಬೀತುಪಡಿಸುವುದಾಗಿ ಬೊಮ್ಮಾಯಿಯವರು ಕೇಳಿಕೊಂಡರೂ ಸಹ ಕೇಳದೆ ರಾಷ್ಟ್ರಪತಿ ಆಡಳಿತ ಹೇರಲಾಯಿತು. ಈ ಪ್ರಕರಣ (ಎಸ್‌ಆರ್ ಬೊಮ್ಮಾಯಿ ವರ್ಸಸ್ ಕೇಂದ್ರ ಸರ್ಕಾರ) ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. 1994ರಲ್ಲಿ ಸುಪ್ರೀಂ ಈ ಕೆಳಕಂಡ ತೀರ್ಪು ನೀಡಿತು:

1. ಯಾವುದೇ ಸರ್ಕಾರ ತನ್ನ ಬಹುಮತವನ್ನು ಸದನದಲ್ಲಿ ಸಾಬೀತುಪಡಿಸಬೇಕೇ ವಿನಃ ರಾಜ್ಯಪಾಲರ ಸಮ್ಮುಖದಲ್ಲಿ ಅಲ್ಲ
2. ದುರಾಸೆ ಅಥವಾ ಅಪ್ರಸ್ತುತ ವಿಷಯಗಳ ಆಧಾರದ ಮೇಲೆ ರಾಷ್ಟ್ರಪತಿ ಆಡಳಿತ ಹೇರಿದ್ದರೆ ಅದನ್ನು ನ್ಯಾಯಾಲಯಗಳು ಪರಾಮರ್ಶೆಗೆ ಒಳಪಡಿಸಬಹುದು.
3. ರಾಜಕೀಯ ಅಥವಾ ಅಧಿಕಾರ ದುರ್ಬಳಕೆ ಮಾಡಿ ಸರ್ಕಾರಗಳನ್ನು ಸಂವಿಧಾನದ ವಿಧಿ 356 ನೆಪದಲ್ಲಿ ಕೆಡವಲು ಯತ್ನಿಸುವ ಕೇಂದ್ರ ಸರ್ಕಾರದ ಬಲಪ್ರಯೋಗದಿಂದ ರಾಜ್ಯ ಸರ್ಕಾರಗಳನ್ನು ರಕ್ಷಿಸಿ, ಒಕ್ಕೂಟ ವ್ಯವಸ್ಥೆ ಬಲಪಡಿಸಲು ಈ ತೀರ್ಪನ್ನು ಅನ್ವಯಿಸಬಹುದು.
4. ರಾಷ್ಟ್ರಪತಿಗಳ ಘೋಷಣೆಯನ್ನು ಸಂಸತ್ತು ಅನುಮೋದಿಸಿದ ಬಳಿಕವಷ್ಟೇ ಒಂದು ವಿಧಾನಸಭೆಯನ್ನು ವಿಸರ್ಜಿಸಬಹುದು. ಇಲ್ಲವಾದಲ್ಲಿ ಅದು ಕೇವಲ ಅಮಾನತ್ತಾಗಿ ಉಳಿಯಲಿದೆ.

ರಾಜ್ಯಪಾಲರ ಈ ನಡೆ ಸಂವಿಧಾನ ಬದ್ಧವೇ?

ಬೊಮ್ಮಾಯಿ ಪ್ರಕರಣದ ತೀರ್ಪು ಮುಂದಿಟ್ಟುಕೊಂಡು ತಜ್ಞರು ಹೇಳುವುದೇನೆಂದರೆ, 'ಸರ್ಕಾರ ರಚಿಸಲು ಬನ್ನಿ' ಎಂದು ರಾಜ್ಯಪಾಲರು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ನಾಯಕನನ್ನು ಮೊದಲು ಆಹ್ವಾನಿಸಬೇಕು. ಆತ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ 2 ವಾರದ ಒಳಗೆ ಆತ ತನ್ನ ಸರ್ಕಾರದ ಬಹುಮತವನ್ನು ಸದನದಲ್ಲಿ ಸಾಬೀತುಪಡಿಸಬೇಕು ಎಂದು ತಾಕೀತು ಮಾಡಬೇಕು. ಈ ಕೆಲಸದಲ್ಲಿ ಸಿಎಂ ವಿಫಲರಾದರೆ ಆಗ ರಾಜ್ಯಪಾಲರು 2ನೇ ಅತಿ ದೊಡ್ಡ ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸಿ, ಬಹುಮತ ಸಾಬೀತಿಗೆ ಪುನಃ ಅದೇ ಷರತ್ತು ವಿಧಿಸಬೇಕು. ಆದರೆ ಪ್ರಸ್ತುತ ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ತದ್ವಿರುದ್ಧವಾಗಿ ನಡೆದುಕೊಂಡು ತಮ್ಮನ್ನು ಭೇಟಿಯಾದ ಟಿವಿಕೆ ನಾಯಕ ವಿಜಯ್‌ಗೆ, 'ಮೊದಲು ಎಲ್ಲ 118 ಅಗತ್ಯ ಶಾಸಕರ ಬಹುಮತ ಸಾಬೀತಿನ ಪಟ್ಟಿ ಸಹಿತ ಬನ್ನಿ, ನಂತರ ನೀವು ಸಿಎಂ ಆಗಲು ಪ್ರಮಾಣ ವಚನ ಬೋಧಿಸುವೆ' ಎಂದು ಸೂಚಿಸಿದ್ದಾರೆ! ಗೌರ್ನರ್‌ರ ನಡೆ ಇದೀಗ ವ್ಯಾಪಕ ಟೀಕೆಗೆ ಹಾಗೂ ಚರ್ಚೆಗೆ ಕಾರಣವಾಗಿದೆ.

ಗೌರ್ನರ್ ನಡೆಗೆ ಒಂದು ಕಡೆ ಬೆಂಬಲ, ಇನ್ನೊಂದು ಕಡೆ ತೀವ್ರ ಅಸಮಾಧಾನ

ತಮಿಳ್ನಾಡು ರಾಜ್ಯಪಾಲ ರಾಜೇಂದ್ರ ಅವರ ಈ ನಡೆಯನ್ನು ಬೆಂಬಲಿಸಲು ಅಥವಾ ತಿರಸ್ಕರಿಸಲು ಅದರದೇ ಆದ ಕಾರಣಗಳಿವೆ. ಅವು ಏನು?

ಬೆಂಬಲಿಗರ ವಾದ

ಒಟ್ಟು 234 ಸ್ಥಾನಗಳ ಪೈಕಿ ಟಿವಿಕೆ 107 ಸ್ಥಾನ ಹೊಂದಿದ್ದು, ಅಗತ್ಯ ಬಹುಮತ 118ಕ್ಕೆ 11 ಶಾಸಕರ ಕೊರತೆ ಇದೆ.

ಸಂವಿಧಾನದ ವಿಧಿ 164 ಮತ್ತು 163 ಅನುಸಾರ ಸ್ಥಿರ ಸರ್ಕಾರ ಕೊಡಬೇಕೆಂಬುದು ರಾಜ್ಯಪಾಲರ ಸಂಕಲ್ಪವಾಗಿದೆ. ಕಾಂಗ್ರೆಸ್ 5 ಶಾಸಕರ ಬೆಂಬಲ ನೀಡಿದ್ದರೂ ಬಹುಮತಕ್ಕೆ ಇನ್ನೂ 6 ಶಾಸಕರ ಅಗತ್ಯವಿದೆ.

ಅಸ್ಥಿರ ಸರ್ಕಾರ ರಚನೆಯಾಗ ಬಾರದೆಂಬ ಸದುದ್ದೇಶದಿಂದ ರಾಜ್ಯಪಾಲರು ಮೊದಲೇ ಬಹುಮತ ಖಚಿತ ಮಾಡಿಕೊಂಡು 118 ಶಾಸಕರೊಂದಿಗೆ ಬನ್ನಿ ಎಂದಿದ್ದಾರೆ.

ಖಂಡಿಸುವವರ ವಾದ

ಟಿವಿಕೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದರಿಂದ ರಾಜ್ಯಪಾಲರು ವಿಜಯ್‌ಗೆ ಸರ್ಕಾರ ರಚಿಸಲು ಅವಕಾಶ ನೀಡಲೇಬೇಕು ಎಂಬುದು ತಜ್ಞರು ಹಾಗೂ ಕೆಲವು ವಿಪಕ್ಷಗಳ ಮುಖಂಡರ ವಾದವಾಗಿದೆ.

ವಿಸಿಕೆ ಪಕ್ಷ ಮತ್ತಿತರರ ವಾದದ ಪ್ರಕಾರ ರಾಜ್ಯಪಾಲರು ಆರಂಭದಲ್ಲೇ ಬಹುಮತ ಸಾಬೀತುಪಡಿಸಲು ಆಗ್ರಹಿಸುವಂತಿಲ್ಲ. ಬಹುಮತವನ್ನು ಸದನದಲ್ಲಿ ಮಾತ್ರ ಸಾಬೀತುಪಡಿಸಬೇಕು.

ರಾಜ್ಯಪಾಲರು ರಾಜಕೀಯ ದುರುದ್ದೇಶದಿಂದ (ಬಿಜೆಪಿ) ಒತ್ತಡಕ್ಕೆ ಒಳಗಾಗಿ ವಿಳಂಬ ಮಾಡುತ್ತಿದ್ದಾರೆ. ಬೇಕಂತಲೇ ಹೊಸ ಸರ್ಕಾರ ರಚನೆಗೆ ಅಡ್ಡಿ ಹಾಗೂ ದುರ್ಬಲಗೊಳಿಸುವ ಕುತಂತ್ರದ ಕಾರ್ಯತಂತ್ರ ಅನುಸರಿಸುತ್ತಿದ್ದಾರೆ.

ಮಳೆ ಬಂದರೂ ಉತ್ತರದಲ್ಲಿ ಬಿಸಿ ಗಾಳಿ ಸಾಧ್ಯತೆ

ಎಚ್ಚರಿಕೆ ನೀಡಿದ ರಾಜ್ಯ ಹವಾಮಾನ ಇಲಾಖೆ | 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗುವ ಭೀತಿ

ಸಂ.ಕ. ಸಮಾಚಾರ ಬೆಂಗಳೂರು

ರಾಜ್ಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಸುಡುತ್ತಿದ್ದ ಬಿಸಿಲಿನ ತಾಪದಿಂದ ಕಂಗೆಟ್ಟಿದ್ದ ಜನತೆಗೆ ಪೂರ್ವ ಮುಂಗಾರು ಮಳೆಯು ತಂಪೆರೆಯುವ ಮೂಲಕ ಕೊಂಚ ನೆಮ್ಮದಿಯನ್ನು ನೀಡಿದೆ. ಆದರೆ, ಉತ್ತರ ಒಳನಾಡಿನ ಭಾಗದಲ್ಲಿ ಬಿಸಿಲಿನ ತಾಪ ಇನ್ನೂ ಕಡಿಮೆಯಾಗಿಲ್ಲ.

ದಕ್ಷಿಣ ಒಳನಾಡು ಮತ್ತು ಕರಾವಳಿ ಭಾಗಗಳಲ್ಲಿ ಗುಡುಗು ಸಹಿತ ಭಾರಿ ಮಳೆಯ ಮುನ್ಸೂಚನೆ ಇದ್ದರೆ, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಬಿಸಿಲ ಝಳ ಇನ್ನೂ ಕಡಿಮೆಯಾಗಿಲ್ಲ. ರಾಜಧಾನಿ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಪ್ರಮುಖ ಜಿಲ್ಲೆಗಳಾದ ಮೈಸೂರು, ಮಂಡ್ಯ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದ ನಗರದ ತಾಪಮಾನದಲ್ಲಿ ಗಣನೀಯ ಇಳಿಕೆಯಾಗಿದೆ. ಹಾಗೆಯೇ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ತಾಪಮಾನ 2 ಡಿಗ್ರಿಯಷ್ಟು ಇಳಿಕೆಯಾಗಿದೆ. ಕರಾವಳಿ ಭಾಗದಲ್ಲಿ ಮಳೆಯಾಗುವುದರಿಂದ ರಾತ್ರಿ ವೇಳೆ

ತಾಪಮಾನ ಇಳಿಮುಖವಾಗುತ್ತಿದೆ. ಇದರ ಜೊತೆಗೆ ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತದ ಪರಿಣಾಮದಿಂದಲೂ ಕರಾವಳಿ ಭಾಗದಲ್ಲಿ ಕೊಂಚ ತಂಪಾದ ವಾತಾವರಣ ನಿರ್ಮಾಣವಾಗಿದೆ. ಆದರೆ, ಬೆಳಗಿನ ವೇಳೆ ಗರಿಷ್ಠ ತಾಪಮಾನ 33 ಡಿಗ್ರಿ, ಕನಿಷ್ಠ 23ರಿಂದ 25 ಡಿಗ್ರಿ ದಾಖಲಾಗುತ್ತಿದೆ.

ಉತ್ತರ ಕರ್ನಾಟಕದಲ್ಲಿ ಮುಂದುವರೆದ ಬಿಸಿಲ ಬೇಗೆ ರಾಜ್ಯದ ದಕ್ಷಿಣ ಭಾಗ ಮಳೆಯಿಂದ ತಂಪಾಗಿದ್ದರೆ, ಉತ್ತರ ಮತ್ತು ಮಧ್ಯ ಕರ್ನಾಟಕದ ಹಲವು ಭಾಗಗಳು ಇನ್ನೂ ಬಿಸಿಲಿನ ತಾಪದಲ್ಲಿಯೇ ಬೇಯುತ್ತಿವೆ. ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗುವ ಸಾಧ್ಯತೆಯಿದೆ. ಕಳೆದ ವಾರ ಕಲಬುರಗಿಯಲ್ಲಿ 44 ಡಿಗ್ರಿಗೂ ಹೆಚ್ಚು ತಾಪಮಾನ ದಾಖಲಾಗಿ ಆತಂಕ ಸೃಷ್ಟಿಸಿತ್ತು. ರಾಜ್ಯದ 22ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಮೇ 12ರವರೆಗೆ ಮಳೆಯಾಗಲಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ. ಇದರಿಂದ ಕೃಷಿ ಚಟುವಟಿಕೆಗಳತ್ತ ಕೃಷಿಕರು ಗಮನ ನೀಡಲು ಸಾಧ್ಯವಾಗಲಿದೆ. ಆದರೆ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಆಲಿಕಲ್ಲಿನ ಸಮೇತ ಮಳೆಯಾಗುವ ಲಕ್ಷಣಗಳು ಕಂಡುಬಂದಿದ್ದು, ಇದರಿಂದ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗುವ ಸಾಧ್ಯತೆಗಳಿವೆ ಎಂದಿದೆ.

ದಾವಣಗೆರೆ, ಉಡುಪಿ, ಹಾವೇರಿಯಲ್ಲಿ ಮಳೆ

ಬಿಸಿಲಿನಿಂದ ಕಂಗೆಟ್ಟಿದ್ದ ಜನತೆಗೆ ಗುರುವಾರ ಬೆಳಗ್ಗೆ ರಾಜ್ಯದ ಕೆಲವೆಡೆ ಮಳೆರಾಯ ತಂಪೆರೆದಿದ್ದಾನೆ. ಉಡುಪಿಯ ಕೆಲವು ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದು, ಕಳೆದ ಕೆಲವು ದಿನಗಳಿಂದ ಬಿಸಿಲ ತಾಪದಿಂದ ಬಳಲುತ್ತಿರುವವರಿಗೆ ಕೊಂಚ ನೆಮ್ಮದಿ ಮೂಡಿಸಿತು. ಹವಾಮಾನ ಇಲಾಖೆ ಭಾರೀ ಮಳೆಯ ಮುನ್ಸೂಚನೆ ನೀಡಿತ್ತು. ಬೆಳಗ್ಗಿನಿಂದ ಮೋಡ ಕವಿದ ವಾತಾವರಣವಿತ್ತು. ಉಡುಪಿ ನಗರ, ಸಂತೆಕಟ್ಟೆ, ಅಲೆವೂರು, ದೆಂದೂರುಕಟ್ಟೆ, ಮಣಿಪಾಲ, ಕಟಪಾಡಿ ಮೊದಲಾದೆಡೆಗಳಲ್ಲಿ ಉತ್ತಮ ಮಳೆಯಾಗಿದ್ದು ಅಲ್ಪಸ್ವಲ್ಪ ಗುಡುಗು ಕೂಡಾ ಇತ್ತು. ಮೇ 12ರವರೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದ್ದು, ಕೆಲವೆಡೆ ಭಾರೀ ಮಳೆಯೂ ಸುರಿಯಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ. ದಾವಣಗೆರೆ, ಹಾವೇರಿಯಲ್ಲೂ ಜಿಟಿಜಿಟಿ ಮಳೆಯಾಗಿದ್ದು ಜನರಿಗೆ ತಣ್ಣನೆಯ ಅನುಭವವಾಗಿದ್ದರೂ ಮತ್ತಷ್ಟು ಬಿಸಿಲಿನ ಧಗೆ ಏರುವ ಭೀತಿ ಉಂಟಾಗಿದೆ.

ಕೊಪ್ಪಳದಲ್ಲಿ ಲವ್ ಜಿಹಾದ್ ಆರೋಪ: ಬಿಜೆಪಿ ಆಕ್ರೋಶ

ಸಂ.ಕ.ಸಮಾಚಾರ ಕೊಪ್ಪಳ

ನಗರದಲ್ಲಿ ಹಿಂದೂ ಬಾಲಕಿ ಜತೆಗಿದ್ದ ಮುಸ್ಲಿಂ ಯುವಕನನ್ನು ಪ್ರಶ್ನಿಸಿದ್ದಕ್ಕೆ ಹಿಂದೂ ಯುವಕರ ಮೇಲೆಯೇ ಹಲ್ಲೆ ಪ್ರಕರಣ ದಾಖಲಿಸಲಾಗಿದೆ ಎಂದು ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರೋಪದ ಹಿನ್ನೆಲೆ ಆರು ಹಿಂದೂ ಯುವಕರನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದು ಇದು ಅನೇಕರನ್ನು ಕುಪಿತರನ್ನಾಗಿ ಮಾಡಿದೆ. ಕಣ್ಣಿಗೆ ಬಟ್ಟೆ ಕಟ್ಟಿ ಬೈಕ್‌ನಲ್ಲಿ ಕೂರಿಸಿಕೊಂಡು, ನಗರದ ಹೊಸಪೇಟೆ ರಸ್ತೆಯ ಬಲ್ಡೋಟಾ ಕಾರ್ಖಾನೆಯ ಮುಖ್ಯ ದ್ವಾರದ ಬಳಿ ಕರೆದೊಯ್ದು ಹಲ್ಲೆ ಮಾಡಿದ್ದಾರೆ. ನಂತರ ಸರ್ಕಾರಿ ಜಿಲ್ಲಾಸ್ಪತ್ರೆಯ ಹತ್ತಿರ ಬಿಟ್ಟು ಹೋಗಿದ್ದಾರೆ ಎಂದು ಸಮೀರ್ ಮೂಲಿಮನಿ ಆರೋಪಿಸಿದ್ದಾನೆ. ಆದರೆ ಸಮೀರ್, ಮೂವರು ಹಿಂದೂ ಯುವತಿಯರೊಂದಿಗೆ ಪ್ರೀತಿ ಪ್ರೇಮದ ಹೆಸರಲ್ಲಿ ಹಣ, ಬಂಗಾರ ಪಡೆದಿದ್ದಾನೆ ಎಂಬ ಆರೋಪದ ಹಿನ್ನೆಲೆ ಈ ಹಿಂದೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾಗ ರಾಜಿ ಮಾಡಿ ಕಳುಹಿಸಲಾಗಿತ್ತು ಎನ್ನಲಾಗಿದೆ. ಲವ್ ಜಿಹಾದ್ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಠಾಣೆಗೆ ಗುರುವಾರ ವಿ.ಪ. ಸದಸ್ಯೆ ಹೇಮಲತಾ ನಾಯಕ್ ಭೇಟಿ ನೀಡಿದಾಗ ಎಸ್ಪಿ ಡಾ.ರಾಮ್ ಎಲ್. ಅರಸಿದ್ಧಿಯೊಂದಿಗೆ ವಾಗ್ವಾದ ನಡೆಯಿತು.

ಭ್ರಷ್ಟಾಚಾರ: ಪುರಸಭೆ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಸಂ.ಕ.ಸಮಾಚಾರ ಹುನಗುಂದ (ಬಾಗಲಕೋಟೆ)

ಭ್ರಷ್ಟಾಚಾರದ ದೂರಿನ ಹಿನ್ನೆಲೆಯಲ್ಲಿ ಹುನಗುಂದ ಪುರಸಭೆ ಕಚೇರಿಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ಇಂದು ದಾಳಿ ಮಾಡಿ ಕಡತಗಳ ಪರಿಶೀಲನೆ ನಡೆಸಿದರು. ಬಾಗಲಕೋಟೆ ಲೋಕಾಯುಕ್ತ ಎಸ್‌ಪಿ ಎಂ.ಬಿ. ನಂದಗಾವಿ ನೇತೃತ್ವದಲ್ಲಿ ಸಿಬ್ಬಂದಿಗಳ ತಂಡ ಹಠಾತ್ ಆಗಮಿಸಿ ದಿನವಿಡೀ ಎಲ್ಲ ಕಡತಗಳನ್ನು ಪರಿಶೀಲಿಸುತ್ತಿದ್ದು ಅದು ನಾಳೆಯೂ ಮುಂದುವರೆಯಲಿದೆ ಎಂದು ಮೂಲಗಳು ಖಚಿತಪಡಿಸಿವೆ. ಪುರಸಭೆ ಕಚೇರಿಯಲ್ಲಿ ಇ–ಸ್ವತ್ತು, ಎನ್‌ಓಸಿ ಮತ್ತು ಕಟ್ಟಡ ಕಟ್ಟಲು ಅನುಮತಿ ನೀಡುವಲ್ಲಿ ಮುಖ್ಯಾಧಿಕಾರಿ ಮತ್ತು ಸಿಬ್ಬಂದಿ ಲಂಚ ಕೇಳಿ ಅವ್ಯವಹಾರ ಮಾಡುವುದು ಮತ್ತು ಕೆಲಸ ಮಾಡಿಕೊಡುವಲ್ಲಿ ವಿಳಂಬ ಮಾಡಿ ತೊಂದರೆ ಮಾಡುತ್ತಿದ್ದಾರೆಂದು ಬೆಂಗಳೂರು ಲೋಕಾಯುಕ್ತ ಕಚೇರಿಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಪರಿಶೀಲನೆ ನಡೆದಿದೆ ಎಂದು ಲೋಕಾಯುಕ್ತ ಎಸ್ಪಿ ನಂದಗಾವಿ ಸುದ್ದಿಗಾರರಿಗೆ ತಿಳಿಸಿದರು.

ಉ.ಕ.ದ ಹಿರಿಯ ರಾಜಕಾರಣಿ ರಮಾನಂದ ನಾಯಕ ನಿಧನ

ಸಂ.ಕ.ಸಮಾಚಾರ ಕಾರವಾರ

ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಹಾಗೂ ಜನಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಹಿರಿಯ ರಾಜಕಾರಣಿ, ಜಿಲ್ಲಾ ಪಂಚಾಯತ್‌ನ ಪ್ರಥಮ ಅಧ್ಯಕ್ಷ ರಮಾನಂದ ನಾಯಕ ಹಿಚ್ಕಡ (78) ಅವರು ಗುರುವಾರ ಬೆಂಗಳೂರಿನಲ್ಲಿ ನಿಧನರಾದರು.

ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಗುರುವಾರ ಸಂಜೆ ಅಂಕೋಲಾ ತಾಲ್ಲೂಕಿನ ಹಿಚ್ಕಡದಲ್ಲಿರುವ ಅವರ ನಿವಾಸಕ್ಕೆ ತಂದು ಶುಕ್ರವಾರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಅವರು ಜನತಾ ಪರಿವಾರದ ಮೂಲಕ ರಾಜಕೀಯ ಪ್ರವೇಶಿಸಿದರು. ಜಿಲ್ಲೆಯ ದಶಕಗಳ ಬೇಡಿಕೆಯಾದ ಹುಬ್ಬಳ್ಳಿ–ಅಂಕೋಲಾ ರೈಲ್ವೆ ಮಾರ್ಗ ನಿರ್ಮಾಣಕ್ಕಾಗಿ ಇವರು ನಡೆಸಿದ ಹೋರಾಟ ಅವಿಸ್ಮರಣೀಯ.

ಹಕ್ಕಿಜ್ವರ: 60ಕ್ಕೂ ಹೆಚ್ಚು ನವಿಲುಗಳ ಸಾವು!

ನಿನ್ನೆ ಮತ್ತೆ 10ಕ್ಕೂ ಹೆಚ್ಚು ಸಾವು | ತುಮಕೂರು, ಕುಣಿಗಲ್‌ನಲ್ಲಿ ಸೋಂಕಿನ ಭೀತಿ

ಸಂ.ಕ.ಸಮಾಚಾರ, ತುಮಕೂರು

ಜಿಲ್ಲೆಯಲ್ಲಿ ಹಕ್ಕಿಜ್ವರ ಸೋಂಕಿನಿಂದ ನವಿಲುಗಳ ಸರಣಿ ಸಾವು ಮುಂದುವರೆದಿದೆ. ಕಳೆದ ಏ. 16ರಂದು ಕೋಳಿಹಳ್ಳಿ ಸುತ್ತಮುತ್ತ ಸುಮಾರು 45 ನವಿಲುಗಳು ನಿಗೂಢವಾಗಿ ಸಾವನ್ನಪ್ಪಿದ್ದವು. ಇದೀಗ ಸೋಂಕು ಮತ್ತಷ್ಟು ಹರಡಿದ್ದು, ಸಾವಿನ ಸಂಖ್ಯೆ 60ರ ಗಡಿ ತಲುಪುತ್ತಿದೆ. ಕೋಳಿಹಳ್ಳಿ

> ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ವೈಜ್ಞಾನಿಕ ರೀತಿಯಲ್ಲಿ ಮೃತ ನವಿಲುಗಳ ವಿಲೇವಾರಿ ಕ್ರಮ ಕೈಗೊಂಡಿದ್ದೇವೆ. ಸದ್ಯಕ್ಕೆ ಕೋಳಿ ಅಥವಾ ಇತರೆ ಸಾಕುಪ್ರಾಣಿಗಳಲ್ಲಿ ಸೋಂಕು ಕಂಡುಬಂದಿಲ್ಲ. ಜಿಲ್ಲಾಡಳಿತ ಎಲ್ಲ ರೀತಿಯ ಕ್ರಮ ಕೈಗೊಂಡಿದ್ದು, ತುರ್ತು ಸಹಾಯವಾಣಿ ಆರಂಭಿಸಿದೆ.
>
> ▪ ಡಾ.ಶಿವಕುಮಾರ್, ಪಶುಪಾಲನಾ ಇಲಾಖೆ ಉಪನಿರ್ದೇಶಕ

ಬೆನ್ನಲ್ಲೇ ಈಗ ದೇವರಾಯನದುರ್ಗದ ದುರ್ಗದಹಳ್ಳಿ ಬಳಿ 2 ನವಿಲು, ಹಿರೇಹಳ್ಳಿಯ ಕೆವಿಕೆ ಬಳಿ 6, ಕೆಸರಮಡು ಬಳಿ 1 ನವಿಲು ಮೃತಪಟ್ಟಿರುವುದು ಪತ್ತೆಯಾಗಿದೆ. ಇದರ ಜೊತೆಗೆ ಕುಣಿಗಲ್ ಸ್ಟಡ್ ಫಾರಂ ಬಳಿಯೂ

1 ನವಿಲು ಮೃತಪಟ್ಟಿರುವುದು ವರದಿಯಾಗಿದೆ. ಮೃತ ನವಿಲುಗಳ ಅಂಗಾಂಶಗಳನ್ನು ಪರೀಕ್ಷೆಗಾಗಿ ಭೋಪಾಲ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷಾ ವರದಿಯಲ್ಲಿ ಹಕ್ಕಿಜ್ವರ ಎಂದು ದೃಢಪಟ್ಟಿದೆ. ಇನ್ನು ಸೋಂಕು ತಡೆಗೆ ಜಿಲ್ಲಾಡಳಿತ ಕ್ರಮ ಕೈಗೊಂಡಿದ್ದು ಸೋಂಕು ಕಂಡುಬಂದ 10 ಕಿ.ಮೀ. ವ್ಯಾಪ್ತಿ ತೀವ್ರ ನಿಗಾ ಪ್ರದೇಶವೆಂದು ಘೋಷಿಸಿದೆ.

ವೈಜ್ಞಾನಿಕವಾಗಿ ಸತ್ತ ಹಕ್ಕಿಗಳ ವಿಲೇವಾರಿಗೆ ವಿಶೇಷ ತಂಡ ರಚಿಸಲಾಗಿದೆ.

ಮನುಷ್ಯರಿಗೂ ಹರಡುವ ಭೀತಿ : ಗೂಳರಿವೆ ಗ್ರಾಮದಲ್ಲಿ ಸತ್ತ ನವಿಲುಗಳ ಮಾಂಸವನ್ನು ಬೀದಿ ನಾಯಿಗಳು ಎಳೆದೊಯ್ದಿದ್ದು, ಆ ನಾಯಿಗಳ ಮೂಲಕ ಸೋಂಕು ಮನುಷ್ಯರಿಗೆ ಅಥವಾ ಕೋಳಿಗಳಿಗೆ ಹರಡಬಹುದು ಎಂಬ ಆತಂಕ ಮನೆ ಮಾಡಿದೆ. ಶೆಟ್ಟಿಹಳ್ಳಿ ಮತ್ತು ಬಡ್ಡಿಹಳ್ಳಿಯಲ್ಲಿ ನವಿಲಿನ ಸಂಖ್ಯೆ ಹೆಚ್ಚಿದ್ದು ಆ ಭಾಗದಲ್ಲಿ ಆತಂಕ ಮನೆ ಮಾಡಿದೆ.

'ಗೃಹಲಕ್ಷ್ಮೀ'ಯರು ಬದುಕಿದ್ದರೂ ದಾಖಲೇಲಿ ಮರಣ!

ತಾಂತ್ರಿಕ ದೋಷ ಹಿನ್ನೆಲೆ ಮೂವರು ಫಲಾನುಭವಿಗಳಿಗೆ ತಲುಪದ ಹಣ

ಸಂ.ಕ.ಸಮಾಚಾರ ಕುಂದಗೋಳ

ಮೂವರು ಫಲಾನುಭವಿಗಳು ಬದುಕಿದ್ದರೂ ಗೃಹಲಕ್ಷ್ಮೀ ಯೋಜನೆ ಹಣ ಅವರಿಗೆ ಸ್ಥಗಿತಗೊಂಡಿದೆ.

ಇವರು ದಾಖಲೆಯಲ್ಲಿ 'ಮರಣ ಹೊಂದಿದ್ದಾರೆ' ಎಂಬ ತಾಂತ್ರಿಕ ದೋಷದ ಹಿನ್ನೆಲೆಯಲ್ಲಿ ಹಣ ಅವರಿಗೆ ತಲುಪಿಲ್ಲ. ಇದು ಪಟ್ಟಣದ ತಾಲೂಕು ಪಂಚಾಯಿತಿ ಸಭಾಭವನದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಉಮಾ ಬಳ್ಳೊಳ್ಳಿಯವರು ಸಭೆಗೆ ನೀಡಿದ ಮಾಹಿತಿ ಇದು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಮಾತನಾಡಿ, ತಾಂತ್ರಿಕ ಸಮಸ್ಯೆ ಕಾರಣದಿಂದ ಅರ್ಹ ಫಲಾನುಭವಿಗಳಿಗೆ ಯೋಜನೆಗಳು ಸ್ಥಗಿತಗೊಳ್ಳಬಾರದೆಂದು ಎಂದು ಎಚ್ಚರಿಸಿದರು. ಗೃಹಲಕ್ಷ್ಮೀ ಯೋಜನೆಯಲ್ಲಿ ಈವರೆಗೆ 29 ತಿಂಗಳುಗಳ ಕಾಲ ಫಲಾನುಭವಿಗಳಿಗೆ ಹಣ ಸಂದಾಯವಾಗಿದೆ. ಯೋಜನೆ ಆರಂಭದಿಂದ ಮೇ 6ರ ವರೆಗೆ ಒಟ್ಟು 992 ಫಲಾನುಭವಿಗಳು ಮರಣ ಹೊಂದಿದ್ದು, ಪರಿಶೀಲಿಸಿ ಯೋಜನೆಯ ಲಾಭವನ್ನು ಆ ಕುಟುಂಬಕ್ಕೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿ ಹೇಳಿದರು.

ಶಕ್ತಿ ಯೋಜನೆ ಇಲಾಖಾ ಅಧಿಕಾರಿಗಳು ಮಾತನಾಡುವಾಗ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಲು ಆಗಲಿಲ್ಲ. ತಾವು ಹೊಸಬರು ಎಂದು ಹೇಳಲೂ ಅವರು ಮರೆಯಲಿಲ್ಲ. ಅನ್ನ ಭಾಗ್ಯ ಹಾಗೂ ಯುವನಿಧಿ ಬಗ್ಗೆ ತಮ್ಮ ಪ್ರಗತಿಯನ್ನು ಸಭೆಗೆ ವಿವರಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ರೇಖಾ ಗಡ್ಡದವರ, ಗ್ಯಾರಂಟಿ ಸದಸ್ಯರಾದ ಯಲ್ಲಪ್ಪಗೌಡ ಪಾಟೀಲ, ಅಡಿವೆಪ್ಪ ಹೆಬಸೂರ, ಗೌಡಪ್ಪ ಪಾಣಿಗಟ್ಟಿ, ಸೋಮಲಿಂಗಪ್ಪ ಹೊಸಮನಿ, ಗಿರೀಶ ಮುದಿಗೌಡ್ರ, ಶಂಕ್ರಪ್ಪ ಹಡಪದ, ಯಲ್ಲಪ್ಪ ಶಿಂಗಣ್ಣವರ, ಸಚಿನ್ ದಾನಪ್ಪ ಪೂಜಾರ, ವೆಂಕಪ್ಪ ಸಂಶಿ, ಬಸವಣ್ಣೆವ ಸೂಳಿಕೇರಿ, ಗೀತಾ ಕೋಟಿಗೌಡ್ರ, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಲಂಚ ಆರೋಪ: ಪಾಲಿಕೆ ಕಚೇರಿ ಮೇಲೆ ಲೋಕಾ ದಾಳಿ

ಸಂ.ಕ.ಸಮಾಚಾರ, ದಾವಣಗೆರೆ

ಮಹಾನಗರಪಾಲಿಕೆ ವಲಯ–1ರ ಕಚೇರಿಯಲ್ಲಿ ನಡೆಯುತ್ತಿದೆ ಎನ್ನಲಾದ ಅಕ್ರಮಗಳು ಕುರಿತು ಸಾರ್ವಜನಿಕರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಗುರುವಾರ ಮುಂಜಾನೆಯಿಂದಲೇ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ ತಪಾಸಣೆ ಮಾಡಿದ್ದಾರೆ.



ಲೋಕಾಯುಕ್ತ ಎಸ್ಪಿ ಎಂ.ಎಸ್.ಕೌಲಾಪುರೆ ಅವರ ನೇತೃತ್ವದಲ್ಲಿ ಡಿವೈಎಸ್ಪಿ ಕಲಾವತಿ, ಇನ್ಸ್‌ಪೆಕ್ಟರ್‌ಗಳಾದ ಗುರುಬಸವರಾಜ್, ಪ್ರಭು, ಸರಳ, ಹಾವೇರಿಯ ಕಬ್ಬೂರಿ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಕಚೇರಿಯ ಪ್ರಮುಖ ದಾಖಲೆಗಳನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು ಸಿಬ್ಬಂದಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಕೆಲಸ ಮಾಡಿಕೊಡಲು ಅಧಿಕಾರಿಗಳು ಫೋನ್‌ಪೇ (ಡಿಜಿಟಲ್ ಲಂಚ) ಮೂಲಕ ಹಣ ಪಡೆಯುತ್ತಿದ್ದಾರೆ. ಪಾಲಿಕೆ ಕಚೇರಿಯಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪ ಹೆಚ್ಚಾಗಿದ್ದು, ಜನಸಾಮಾನ್ಯರಿಗೆ ತೊಂದರೆಯಾಗುತ್ತಿದೆ.

ಬಿ–ಖಾತಾ ನೀಡುವ ಪ್ರಕ್ರಿಯೆಯಲ್ಲಿ ಅನಗತ್ಯ ವಿಳಂಬ ಮತ್ತು ಹಣಕ್ಕಾಗಿ ಪೀಡಿಸುತ್ತಿರುವ ಬಗ್ಗೆ ಸಾರ್ವಜನಿಕ ರಿಂದ ಲೋಕಾಯುಕ್ತರಿಗೆ ದೂರುಗಳು ಸಲ್ಲಿಕೆಯಾಗಿದ್ದವು.

ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಇಂದು ದಾಳಿ ನಡೆಸಿ ಕಚೇರಿಯ ಕಂಪ್ಯೂಟರ್‌ಗಳು, ಅರ್ಜಿಗಳ ಫೈಲ್‌ಗಳು ಮತ್ತು ಹಣಕಾಸಿನ ವಹಿವಾಟಿನ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿದ್ದಾರೆ. ಈ ದಾಳಿಯಿಂದ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಲ್ಲಿ ಆತಂಕ ಮೂಡಿಸಿದೆ.

ಸಾರ್ವಜನಿಕರ ದೂರುಗಳ ಅನ್ವಯ ಈ ದಾಳಿ ನಡೆಸಲಾಗಿದ್ದು, ಅಕ್ರಮ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಸುದ್ದಿ ಸಮಾಚಾರ

ಚುನಾವಣೆಗೆ ಇನ್ನು ಸ್ಪರ್ಧಿಸಲ್ಲ: ನಿವೃತ್ತಿ ಘೋಷಿಸಿದ ವಿಶ್ವನಾಥ್

ಸಂ.ಕ. ಸಮಾಚಾರ ಮೈಸೂರು

ಹಿರಿಯ ರಾಜಕಾರಣಿ, ರಾಜಕೀಯ ವಲಯದಲ್ಲಿ ಹಳ್ಳಿಹಕ್ಕಿ ಎಂದೇ ಗುರುತಿಸಿಕೊಂಡಿರುವ ಬಿಜೆಪಿ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಈ ಮೂಲಕ ಅವರು ಸಕ್ರಿಯ ರಾಜಕಾರಣದಲ್ಲಿ ಇರುತ್ತಾರೆ. ಇನ್ನು ಮುಂದೆ ತಾವಾಗಲಿ



ಅಥವಾ ತಮ್ಮ ಕುಟುಂಬದವರು ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮುಂಬರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ಚುನಾವಣೆಗೆ ಸ್ಪರ್ಧಿಸಿದಾಗ ಜನರೇ ಹಣ ನೀಡಿ ಆಶೀರ್ವದಿಸಿದ್ದರು. ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ನಿರ್ಮಾಣ ಆಗಿದೆ. ಸದ್ಯದ ಚುನಾವಣೆ ಎದುರಿಸಲು 50 ಕೋಟಿ ರೂ. ಬೇಕು. ಅಷ್ಟು ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನಗಿಲ್ಲ. ನನ್ನ ಮಕ್ಕಳು ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅವರ ಶಕ್ತ್ಯಾನುಸಾರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ನಾನು ಸಹ ರಾಜಕೀಯದಲ್ಲಿ ಮುಂದುವರಿಯುತ್ತೇನೆ. ಆದರೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮನೆ ಕಟ್ಟಲು ತೋಡಿದ್ದ ನೀರಿನ ಗುಂಡಿಗೆ ಬಿದ್ದು ಬಾಲಕರ ಸಾವು

ಸಂಕ.ಸಮಾಚಾರ ಧಾರವಾಡ

ಮನೆ ಕಟ್ಟಲು ತೋಡಿದ್ದ ನೀರಿನ ಗುಂಡಿಗೆ ಬಾಲಕರಿಬ್ಬರು ಬಿದ್ದು ಮೃತಪಟ್ಟ ಹೃದಯವಿದ್ರಾವಕ ಘಟನೆ ತಾಲೂಕಿನ ಮನಸೂರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕುಮಾರ ನಿಂಗಪ್ಪ ಮುದಕಣ್ಣವರ(7) ಮತ್ತು ಧಾರವಾಡ ಸತ್ತೂರಿನ ಪ್ರಥಮ್ ಸುರೇಶ ಉಳ್ಳಾಗಡ್ಡಿ(7) ಮೃತಪಟ್ಟವರು. ಶಾಲೆಗಳಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ಪ್ರಥಮ್ ತನ್ನ ಮಾವನ ಮನೆಗೆ ತೆರಳಿದ್ದನು. ಕುಮಾರ ಮತ್ತು ಪ್ರಥಮ್ ಅಲ್ಲಿಯೇ ಸ್ನೇಹಿತರಾಗಿದ್ದು, ಮನೆಯಿಂದ ಸಮೀಪದಲ್ಲಿಯೇ ಇರುವ ಖುಲ್ಲಾ ಜಾಗದಲ್ಲಿ ಆಟವಾಡಲು ಹೋಗಿದ್ದರಂತೆ. ಅದರ ಸಮೀಪದಲ್ಲಿ ಮನೆ ಕಟ್ಟಡ ನಿರ್ಮಾಣಕ್ಕಾಗಿ ನೀರಿನ ಟ್ಯಾಂಕ್ ಇದ್ದು, ಅದರಲ್ಲಿ ಈ ಇಬ್ಬರೂ ಬಾಲಕರು ಆಟವಾಡಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ರಾತ್ರಿಯಾದರೂ ಬಾಲಕರಿಬ್ಬರೂ ಮರಳಿ ಮನೆಗೆ ಬಾರದ ಹಿನ್ನೆಲೆಯಲ್ಲಿ ಆತಂಕಗೊಂಡ ಕುಟುಂಬಸ್ಥರು ಹುಡುಕಾಡಲು ಪ್ರಾರಂಭಿಸಿದ್ದಾರೆ. ಆಗ ಇಬ್ಬರೂ ಬಾಲಕರ ಮೃತದೇಹ ನೀರಿನ ಟ್ಯಾಂಕಿನಲ್ಲಿ ಬಿದ್ದಿರುವುದು ಗೊತ್ತಾಗಿದೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನಕ್ಕೆ ಬೊಲೆರೋ ಡಿಕ್ಕಿ: ಭಜರಂಗದಳ ಕಾರ್ಯಕರ್ತರ ಬಲಿ

ಕುಣಿಗಲ್: ಕೊತ್ತಗೆರೆ ಬಳಿ ದ್ವಿಚಕ್ರ ವಾಹನಕ್ಕೆ ಬೊಲೆರೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಭಜರಂಗ ದಳದ ಕಾರ್ಯಕರ್ತರು ಮೃತಪಟ್ಟ ಘಟನೆ ಗುರುವಾರ ನಡೆದಿದೆ. ಆಕಾಶ್ (29) ಮತ್ತು ಮಂಜುನಾಥ್ (34) ಮೃತರು. ಪಟ್ಟಣದ ಬಿಜಿಎಸ್ ನಗರದ ಅಮ್ಮಯ್ಯಮ್ಮನವರ ಮಗನಾದ ಆಕಾಶ್ ಮತ್ತು ಅಗ್ರಹಾರದಲ್ಲಿ ವಾಸವಾಗಿರುವ ಪ್ರಕಾಶ್ ಅವರ ಮಗ ಮಂಜುನಾಥ ಇಬ್ಬರೂ ದ್ವಿಚಕ್ರ ವಾಹನದಲ್ಲಿ ತುಮಕೂರಿಗೆ ತೆರಳುತ್ತಿದ್ದ ವೇಳೆ ತುಮಕೂರಿನಿಂದ ಬರುತ್ತಿದ್ದ ಬೊಲೆರೋ ಜೀಪ್ ಡಿಕ್ಕಿ ಹೊಡೆದಿದೆ. ಆಕಾಶ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಮಂಜುನಾಥ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪ ಚುನಾವಣೆಯಲ್ಲಿ ಹಣ ಬಳಸಿ ಕೈ ಗೆಲುವು: ರೇಣುಕಾಚಾರ್ಯ

ಸಂ.ಕ.ಸಮಾಚಾರ, ದಾವಣಗೆರೆ

ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಆಡಳಿತ ಯಂತ್ರದ ದುರುಪಯೋಗ ಮತ್ತು ಹಣದ

ಪ್ರಭಾವದಿಂದ ಕಾಂಗ್ರೆಸ್ ಗೆದ್ದಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಆರೋಪಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸಂಘಟನೆಯು ದಾವಣಗೆರೆಯಲ್ಲಿ ಅತ್ಯಂತ ಶಕ್ತಿಶಾಲಿಯಾಗಿದೆ ಮತ್ತು ಬೂತ್ ಮಟ್ಟದ ಕಾರ್ಯಕರ್ತರ ಪರಿಶ್ರಮದಿಂದಾಗಿ ಪಕ್ಷಕ್ಕೆ ಹೆಚ್ಚಿನ ಮತಗಳು ಲಭಿಸಿವೆ. ಮುಂಬರುವ 2028ರ ವೇಳೆಗೆ ದಾವಣಗೆರೆ ಜಿಲ್ಲೆಯು ಸಂಪೂರ್ಣವಾಗಿ ಕಾಂಗ್ರೆಸ್ ಮುಕ್ತವಾಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಸೇವಾ ನ್ಯೂನತೆ ಎಸಗಿದ ಚಿಟ್ ಫಂಡ್ ಸಂಸ್ಥೆಗೆ 50 ಲಕ್ಷ ದಂಡ

ಸಂ.ಕ.ಸಮಾಚಾರ ದಾವಣಗೆರೆ

ಚೀಟಿ ಅವಧಿ ಮುಕ್ತಾಯವಾದರೂ ಹಣ ಮರುಪಾವತಿಸದೆ ಸೇವಾ ನ್ಯೂನತೆ ಎಸಗಿದ ಜಿಲ್ಲೆಯ ಚನ್ನಗಿರಿಯ ನಿತ್ಯೋತ್ಸವ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಭಾರೀ ದಂಡ ವಿಧಿಸಿದೆ.ಚನ್ನಗಿರಿಯ ಜಬೀನ್ ಖಾನಂ ಅವರು ಸದರಿ ಸಂಸ್ಥೆಯಲ್ಲಿ 50 ಲಕ್ಷ ರೂ. ಮೊತ್ತದ ಚೀಟಿಗೆ ಮಾಸಿಕ 2 ಲಕ್ಷ ರೂ.ಗಳಂತೆ 25 ಕಂತುಗಳನ್ನು ಪಾವತಿಸಿದ್ದರು. ಚೀಟಿ ಮುಕ್ತಾಯದ ನಂತರ ಹಣ ನೀಡದ ಸಂಸ್ಥೆಯ ವಿರುದ್ಧ ಗ್ರಾಹಕ ಆಯೋಗದ ಮೊರೆ ಹೋಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಎಚ್.ಎನ್.ಮೀನಾ ಹಾಗೂ ಸದಸ್ಯ ಸಿ.ಎಸ್. ತ್ಯಾಗರಾಜನ್, ದೂರುದಾರರಿಗೆ 50 ಲಕ್ಷ ರೂ. ಅಸಲು ಹಣವನ್ನು ಶೇ. 9ರಷ್ಟು ವಾರ್ಷಿಕ ಬಡ್ಡಿಯೊಂದಿಗೆ ಮರುಪಾವತಿಸುವಂತೆ ಆದೇಶಿಸಿದ್ದಾರೆ. ಇದರ ಜೊತೆಗೆ ಮಾನಸಿಕ ನೋವು ಮತ್ತು ದೂರು ವೆಚ್ಚಕ್ಕಾಗಿ 35 ಸಾವಿರ ರೂ. ಪರಿಹಾರವನ್ನು ಒಂದು ತಿಂಗಳೊಳಗೆ ಪಾವತಿಸುವಂತೆ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಆಯೋಗದ ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿ ತಿಳಿಸಿದ್ದಾರೆ.

'ದಳ'ಸಿಗದೆ 'ಪತಿ' ಅತಂತ್ರ!

ಮೊದಲ ಪುಟದಿಂದ...

ಇನ್ನೂ 6 ಸ್ಥಾನಗಳಿಗೆ ವಿಜಯ್ ಪರದಾಡುತ್ತಿದ್ದಾರೆ. ಸಿಪಿಐ ಮತ್ತು ಸಿಪಿಎಂಗಳ ನಾಲ್ಕು ಸದಸ್ಯರ ಬೆಂಬಲ ಸಿಗುವ ಸಾಧ್ಯತೆ ಇದೆ. ಜೊತೆಗೆ ವಿಸಿಕೆಯ ಇಬ್ಬರು ಸದಸ್ಯರ ಬೆಂಬಲವೂ ದೊರೆತಲ್ಲಿ ಬಹುಮತ ಗಿಟ್ಟಿಸಲಿದೆ. ಆದರೆ ವಿಸಿಕೆ ಇನ್ನೂ ಖಚಿತವಾಗಿ ಬೆಂಬಲ ನೀಡುವುದಾಗಿ ಹೇಳುತ್ತಿಲ್ಲ.

ಎಐಎಡಿಎಂಕೆ ಹೊರತುಪಡಿಸಿ, ಬಹುತೇಕ ಪಕ್ಷಗಳು ರಾಜ್ಯಪಾಲರ ನಡೆಯನ್ನು ಖಂಡಿಸಿವೆ. ಡಿಎಂಕೆ, ಸಿಪಿಐ ಇನ್ನಿತರ ಪಕ್ಷಗಳು ನಿಯಮಾನುಸಾರ ಟಿ.ವಿ.ಕೆ.ಗೆ ಸರ್ಕಾರ ರಚನೆಗೆ ಅವಕಾಶ ಕೊಡಬೇಕೆಂದು ಆಗ್ರಹಿಸಿವೆ. ಕನಿಷ್ಠ ಇನ್ನಾರು ತಿಂಗಳು ಟಿವಿಕೆ ಸರ್ಕಾರವನ್ನು ಅಸ್ಥಿರಗೊಳಿಸುವ ಯಾವುದೇ ಪ್ರಯತ್ನ ಮಾಡುವುದಿಲ್ಲ ಎಂದು ಹೊರಹೋಗುತ್ತಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ. ಸಿಪಿಐ (ಎಂ) ಪಕ್ಷವು ಶುಕ್ರವಾರ ನಡೆಯುವ ತನ್ನ ರಾಜ್ಯ ಸಮಿತಿ ಸಭೆಯಲ್ಲಿ ಟಿವಿಕೆಗೆ ಬೆಂಬಲ ನೀಡುವ ಕುರಿತು ತೀರ್ಮಾನಿಸುವುದಾಗಿ ಹೇಳಿದೆ.

ಈ ಮಧ್ಯೆ, ಶಾಸಕರಿಗೆ ಆಮಿಷವೊಡ್ಡುವುದಕ್ಕೆ ತಡೆ ಹಾಕುವ ಸಲುವಾಗಿ ಈಗಾಗಲೇ ಎಐಎಡಿಎಂಕೆಯಿಂದ ರೆಸಾರ್ಟ್ ರಾಜಕೀಯವೂ ಆರಂಭವಾಗಿದೆ. ಕನಿಷ್ಠ 28 ಶಾಸಕರ ಎಐಎಡಿಎಂಕೆ ಒಂದು ಬಣ ಪುದುಚೆರಿಯ ರೆಸಾರ್ಟ್‌ವೊಂದರಲ್ಲಿ ಸೇರಿದೆ.

ದಶಕಗಳಿಂದಲೂ ಡಿಎಂಕೆ ಮೈತ್ರಿ ಪಕ್ಷವಾಗಿದ್ದ ಕಾಂಗ್ರೆಸ್ ಅಧಿಕಾರದ ಆಸೆಗಾಗಿ ಡಿಎಂಕೆ 'ಬೆನ್ನಿಗೆ ಚೂರಿ' ಹಾಕಿದೆ; ಮೈತ್ರಿಗೆ ಹಠಾತ್ತನೆ ತಿಲಾಂಜಲಿ ನೀಡುವ ಮೂಲಕ 'ವಿಶ್ವಾಸ ದ್ರೋಹ' ಮಾಡಿ ಟಿ.ವಿ.ಕೆ. ಪಕ್ಷಕ್ಕೆ ಬೆಂಬಲವಾಗಿ ನಿಂತಿದೆ ಎಂದು ಖಂಡಿಸಿ ಗುರುವಾರ ಎಂ.ಕೆ. ಸ್ಟಾಲಿನ್ ಅಧ್ಯಕ್ಷತೆಯಲ್ಲಿ ನಡೆದ ಡಿಎಂಕೆ ಪಕ್ಷದ ಸಭೆಯಲ್ಲಿ ಅಧಿಕೃತವಾಗಿ ನಿರ್ಣಯ ಕೈಗೊಳ್ಳಲಾಗಿದೆ.

ನರೇಗಾ ಅನುದಾನ :ಕೋರ್ಟ್ ಮೊರೆ

ಮೊದಲ ಪುಟದಿಂದ...

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಡಿಯಲ್ಲಿ ನರೇಗಾ ಯೋಜನೆಗಳನ್ನು ನಡೆಯುತ್ತಿತ್ತು. ಕೇಂದ್ರ ಸರ್ಕಾರ ವಿಬಿಜಿ ರಾಮ್‌ಜಿ ಎಂದು ಹೆಸರು ಇಟ್ಟಿತು. ಆದರೆ ನರೇಗಾದಿಂದ ರಾಜ್ಯದ ಬಡವರಿಗೆ, ಕೂಲಿಕಾರರಿಗೆ ಕೃಷಿಕಾರ್ಮಿಕರಿಗೆ ಬಹಳ ಅನುಕೂಲವಾಗುತ್ತಿತ್ತು. ಇದನ್ನು ಏಕಾಏಕಿ ಬದಲಿಸಿದ್ದು ಯಾವ ನ್ಯಾಯ? ಮೊದಲಿನ ಹಾಗೆಯೇ ನರೇಗಾ ಮುಂದುವರಿಸಬೇಕು ಎಂದು ರಾಷ್ಟ್ರಾದ್ಯಂತ ಹೋರಾಟ ನಡೆಸಿದರೂ ಏನೂ ಪ್ರಯೋಜನವಾಗಲಿಲ್ಲ. ಹೋಗಲಿ ಈ ಯೋಜನೆಯಿಂದ ಅನುಕೂಲವಾದರೆ ಆಗಲಿ ಎಂದು ಎಲ್ಲರೂ ಸುಮ್ಮನಿದ್ದರು. ಈಗ ಮೇ ತಿಂಗಳು ಬಂದರೂ ವಿಬಿಜಿ ರಾಮ್‌ಜಿ ಕಾನೂನಿನ ಅಧಿಸೂಚನೆ ಹೊರಡಿಸಿಲ್ಲ. ಈ ಬಗ್ಗೆ ವಿಚಾರಿಸಿದರೆ ನರೇಗಾ ಮುಂದುವರಿಸಬಹುದು ಎಂದು ಆದೇಶ ಹೊರಡಿಸಿದ್ದಾರೆ. ಆದರೆ ಇದಕ್ಕೆ ಯಾವುದೇ ಅನುದಾನ ಕೊಡುತ್ತಿಲ್ಲ.

ಧಾರ್ಮಿಕ ಆಚರಣೆ ಪ್ರಶ್ನೆ ಮಾಡಿದ್ರೆ ಧರ್ಮವೇ ಛಿದ್ರ

ಮೊದಲ ಪುಟದಿಂದ...

ಇದೇ ವೇಳೆ ನ್ಯಾ ಎಂ.ಎಂ. ಸುಂದರೇಶ್, ನ್ಯಾಯಾಲಯಗಳು ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ವಿವಾದಗಳನ್ನು ಪರಿಶೀಲಿಸಿದರೆ ಧರ್ಮಗಳು ಒಡೆಯುತ್ತವೆ ಎಂದರು. ಎಲ್ಲರೂ ಎಲ್ಲವನ್ನೂ ಪ್ರಶ್ನಿಸುತ್ತಾರೆ. ನೀವು ಮಾಡುತ್ತಿರುವುದು ತಪ್ಪು ಎಂದು ಇನ್ನೊಬ್ಬರಿಗೆ ನೀವೇನಾದರೂ ಹೇಳಿದರೆ ಆತ, ಇದು ತುಂಬಾ ಅಸಹ್ಯಕರ ಎನ್ನುತ್ತಾರೆ. ಸಂವಿಧಾನದುಲ್ಲಿ ಶಾಸಕಾಂಗಕ್ಕೆ ಪ್ರಜ್ಞಾಪೂರ್ವಕ ಹಕ್ಕು ನೀಡಿರುವುದರಿಂದ ನ್ಯಾಯಾಲಯವು ಹೇಗೆ ಮಧ್ಯಸ್ಥಿಕೆ ವಹಿಸಲು ಸಾಧ್ಯ ಎಂದರು.

ನಾವು ಒಂದು ನಾಗರಿಕತೆ, ಇಷ್ಟೊಂದು ವೈವಿಧ್ಯತೆಯನ್ನು ಹೊಂದಿದ್ದರೂ ನಾವಿನ್ನೂ ಏಕೆ ನಾಗರಿಕರಾಗಿ ಉಳಿದ್ದೇವೆ? ನಮ್ಮ ಸಮಾಜದಲ್ಲಿ ಪುರುಷ, ಮಹಿಳೆ ಮತ್ತು ಮಗುವಿನ ನಡುವಿನ ಸಂಬಂಧ ಮತ್ತು ಧರ್ಮ ಅಡಕವಾಗಿರುವುದು ಕಾರಣ ಎಂದೂ ವಿವರಿಸಿದರು. ಒಂದು ಧಾರ್ಮಿಕ ಆಚರಣೆ ಅಥವಾ ಧರ್ಮದ ವಿಷಯವನ್ನು ಪ್ರಶ್ನಿಸಿದಾಗ, ಅದನ್ನು ಎಲ್ಲಿ ಪ್ರಶ್ನಿಸಲಾಗುತ್ತದೆ? ಏಕೆ ಪ್ರಶ್ನಿಸಲಾಗುತ್ತದೆ? ಸುಧಾರಣೆಗಾಗಿ ಪ್ರಶ್ನಿಸುವುದಿದ್ದರೆ ಅದು ಪಂಗಡದ ಒಳಗಿನಿಂದ ಬರಬೇಕೇ ಇಲ್ಲವೇ ನ್ಯಾಯಾಲಯವು ಈ ಎಲ್ಲಾ ಅಂಶಗಳ ಮೇಲೆ ತೀರ್ಪು ನೀಡಬೇಕೆಂದು ಸಾರ್ವಜನಿಕರು ಬಯಸಿದರೆ ನ್ಯಾಯಾಲಯ ಆಗ ಸಂದಿಗ್ಧತೆಗೆ ಸಿಲುಕಿಸುತ್ತದೆ ಎಂದರು.

ಸಿಂದೂರ್‌ನಲ್ಲಿ 13 ಪಾಕ್ ವಿಮಾನ...

ಮೊದಲ ಪುಟದಿಂದ...

ಡೀಪಿ ಬದಲಿಸಿದ ಮೋದಿ: ಆಪರೇಷನ್ ಸಿಂದೂರ್‌ಗೆ ಒಂದು ವರ್ಷವಾದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಇನ್‌ಸ್ಟಾಗ್ರಾಮ್, ಎಕ್ಸ್, ಫೇಸ್‌ಬುಕ್ ಸೇರಿದಂತೆ ಎಲ್ಲಾ ಸಾಮಾಜಿಕ ಜಾಲತಾಣಗಳ ಪ್ರೊಫೈಲ್ ಚಿತ್ರವನ್ನು ಬದಲಿಸಿ ಗೌರವ ಸಲ್ಲಿಸಿದ್ದಾರೆ.

ನಾಳೆ ಯಡಿಯೂರಪ್ಪ ಅಭಿಮಾನೋತ್ಸವ

ಮೊದಲ ಪುಟದಿಂದ...

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂದು ಮಧ್ಯಾಹ್ನ 3:30ಕ್ಕೆ ಚಿತ್ರದುರ್ಗಕ್ಕೆ ಆಗಮಿಸಿ ಸಂಜೆ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಿಂದ ಸಾವಿರಾರು ಬಸ್, ಮತ್ತಿತರ ವಾಹನಗಳ ಮೂಲಕ ಅಭಿಮಾನಿಗಳು, ಬಿಜೆಪಿ ಮುಖಂಡರು ಆಗಮಿಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಮಠಾಧೀಶರು ಉಪಸ್ಥಿತರಿದ್ದು ಆಶೀರ್ವಚನ ನೀಡಲಿದ್ದಾರೆ. ಅಭಿಮಾನೋತ್ಸವಕ್ಕೆ ಆಗಮಿಸುವ ಎಲ್ಲರಿಗೂ ಊಟ ಮತ್ತು ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ನೂರಾರು ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ ಎಂದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಾರಿಗೆ ತಂದ ಸಂಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ಹಾಲಿಗೆ ಸಬ್ಸಿಡಿ ಹಾಗೂ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಿದ ಯೋಜನೆಗಳು ಐತಿಹಾಸಿಕವಾಗಿವೆ. ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಅವರ ಶ್ರಮ ಅಪಾರ. ಹೀಗಾಗಿ ರಾಜ್ಯಾದ್ಯಂತ ಅವರ ಅಭಿಮಾನಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಬಂಗಾಳದ ಮಮತಾ ಸರ್ಕಾರ ವಜಾ

ಮೊದಲ ಪುಟದಿಂದ...

ಅಲ್ಲದೇ ಮೊನ್ನೆಯಷ್ಟೇ ನಾನು ರಾಜೀನಾಮೆ ನೀಡುವುದಿಲ್ಲ, ಬೇಕಿದ್ದರೆ ವಜಾಮಾಡಲಿ ಎಂದು ಮಮತಾ ಮೊಂಡುವಾದ ಮುಂದುವರಿಸಿದ್ದರು. ಇದೀಗ ವಿಧಾನಸಭೆ ಅವಧಿಯು ಮೇ7ಕ್ಕೆ ಅಂದರೆ ಗುರುವಾರ ಅಂತ್ಯಗೊಂಡ ಹಿನ್ನೆಲೆಯಲ್ಲಿ ಸಾಂವಿಧಾನಿಕ ಬಿಕ್ಕಟ್ಟನ್ನು ತಪ್ಪಿಸಲು ರಾಜ್ಯಪಾಲರು ಈ ನಿರ್ಧಾರ ಕೈಗೊಂಡಿದ್ದಾರೆ. ಸಂವಿಧಾನದ ಆರ್ಟಿಕಲ್ 174ರ ಅಡಿಯಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ವಿಧಾನಸಭೆಯನ್ನು ವಿಸರ್ಜಿಸಲಾಗಿದೆ ಎಂದು ಲೋಕಭವನದಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ. ವಿಧಾನಸಭೆ ವಿಸರ್ಜನೆಯಾದ ಬೆನ್ನಲ್ಲೇ ಹೊಸ ಸರ್ಕಾರ ರಚನೆಯ ಪ್ರಕ್ರಿಯೆ ಚುರುಕುಗೊಂಡಿದ್ದು, ಸುವೇಂಧು ಅಧಿಕಾರಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ರಚಿಸುವ ಸಾಧ್ಯತೆ ಇದೆ. ಪಶ್ಚಿಮ ಬಂಗಾಳದ ಇತಿಹಾಸದಲ್ಲೇ ಇದೊಂದು ಅಪೂರ್ವ ಸಾಂವಿಧಾನಿಕ ಬಿಕ್ಕಟ್ಟು ಎಂದು ರಾಜಕೀಯ ವಿಶ್ಲೇಷಕರು ಬಣ್ಣಿಸಿದ್ದಾರೆ. ಚುನಾವಣೋತ್ತರ ಹಿಂಸಾಚರಕ್ಕೆ ನಲುಗಿದ ಬಂಗಾಳದಲ್ಲಿ ಬಿಗುವಿನ ವಾತಾವರಣವಿದ್ದು, ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ರಾಜ್ಯ ಶಿಕ್ಷಣ ನೀತಿ ಶಿಫಾರಸಿಗೆ ಸಂಪುಟ ಉಪ ಸಮಿತಿ ರಚನೆ

ಬೆಂಗಳೂರು: ರಾಜ್ಯದಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಸಚಿವ ಸಂಪುಟ ಉಪ ಸಮಿತಿ ರಚನೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿ, ರಾಜ್ಯ ಶಿಕ್ಷಣ ನೀತಿ ಜಾರಿಗೆ ಸಂಬಂಧಿಸಿದಂತೆ ಪ್ರೊ. ಥೋರಟ್ ನೇತೃತ್ವದ ಆಯೋಗ 8 ಸಂಪುಟಗಳ ಶಿಫಾರಸನ್ನು ಮಾಡಲಾಗಿದ್ದು, ಈ ಕುರಿತಂತೆ ಸಚಿವ ಸಂಪುಟದಲ್ಲಿ ವಿಸ್ತೃತವಾಗಿ ಚರ್ಚೆ ಮಾಡಲಾಗಿದೆ.

ಆಯೋಗದ ಶಿಫಾರಸುಗಳನ್ನು ಅನುಷ್ಠಾನ ಮಾಡುವ ಕುರಿತಂತೆ ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಿ ಅದರ ಮೂಲಕ ಶಿಫಾರಸು ಮಾಡುವ ಕುರಿತಂತೆ ತೀರ್ಮಾನಿಸಲಾಯಿತು. ಸಚಿವ ಸಂಪುಟ ಉಪ ಸಮಿತಿ ರಚನೆ ಅಧಿಕಾರವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ಬಿಡಲಾಗಿದೆ.ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಹಾಗೂ ಯಾದಗಿರಿ ಭಾಗದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ 200 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ಮೂರು ಕೈಗಾರಿಕಾ ವಸಾಹತುಗಳನ್ನು ಸ್ಥಾಪನೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ :ಕಾಇಂ:ಲೋಇ:ಹಾವಿ:ಕಿ.ಇಂ–3:2026–27:

ದಿನಾಂಕಃ 05.05.2026.

ಟೆಂಡರ್ ಮುಂದೂಡಿಕೆ ಪ್ರಕಟಣೆ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 47: ದಿನಾಂಕಃ 16.03.2026 ರಲ್ಲಿ ನಿಗದಿಪಡಿಸಿದ್ದ ಕ್ರಮ ಸಂಖ್ಯೆ–06 ರ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕವನ್ನು ದಿನಾಂಕ 20.05.2026 16.00 ಗಂಟೆವರೆಗೆ ಮುಂದೂಡಲಾಗಿದೆ. ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ಹಾಗೂ ನಿಗಧಿತ ಇಎಂಡಿ ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/103/ಕೆಎಸ್‌ಎಂಸಿಎ/2026–27

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ) ವಿಭಾಗೀಯ ವ್ಯವಸ್ಥಾಪಕರ ಕಛೇರಿ, ಚಿಂಕೆವನ,
ದೂರವಾಣಿ ಸಂ: 08262–295901 ಕೆ.ಎಂ. ರಸ್ತೆ, ಚಿಕ್ಕಮಗಳೂರು–577102
ಇ–ಮೇಲ್: dmkfdcckm901@gmail.com

"ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ"

1) KFDC/DM/CKM/A6/E&T/2026-27/68 dt: 02.05.2026 2025-26 ನೇ ಸಾಲಿನಲ್ಲಿ ಈ ವಿಭಾಗದ ವಿವಿಧ ನೆಡುತೋಪುಗಳಲ್ಲಿ ಲಭ್ಯವಿರುವ ಮೆದುಮರಗಳನ್ನು ಕಡಿತಲೆ ಮಾಡಿ ಕಾರ್ಖಾನೆಗೆ ಸಾಗಾಣಿಕೆ ಕಾಮಗಾರಿ ನಿರ್ವಹಿಸಲು ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ದರಗಳನ್ನು ಸೂಚಿಸಲು ದಿನಾಂಕ:16.05.2026 ರ 17:30 ಗಂಟೆ ರವರೆಗೆ ಒಳಗಾಗಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
2) KFDC/DM/CKM/A3/Adv & Planting-2026/2026-27/75 dt:04.05.2026 ರಲ್ಲಿ 2026 ನೇ ಸಾಲಿನ ಮಳೆಗಾಲದಲ್ಲಿ ಆಯ್ಕೆ ಮಾಡಿರುವ ಪ್ರದೇಶಗಳಲ್ಲಿ ಹೊಸದಾಗಿ ಕೊರಂಬಿಯಾ ಹಾಗೂ ಅಕೇಶಿಯಾ ಸ್ಟಿಂಗ್‌ವೆಲ್ ಸಸಿಗಳನ್ನು ಪ್ಲಾಂಟಿಂಗ್ ಮಾಡಿ ದಿ:31.03.2027 ರವರೆಗೆ ನಿರ್ವಹಣೆ/ಪೋಷಣೆ ಮಾಡುವ ಕಾಮಗಾರಿಯನ್ನು ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ನಿರ್ವಹಿಸಲು ದಿನಾಂಕ: 12.05.2026 ರ 17:30 ಗಂಟೆ ರವರೆಗೆ ಒಳಗಾಗಿ ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
3) KFDC/DM/CKM/A3/2025pltn/2026-27/72 dt: 04.05.2026 ರಲ್ಲಿ 2026-27 ನೇ ಸಾಲಿನಲ್ಲಿ 2025 ನೇ ಸಾಲಿನ ಕೊರಂಬಿಯಾ & ಅಕೇಶಿಯಾ ಹೈಬ್ರಿಡ್ ನೆಡುತೋಪುಗಳಲ್ಲಿ 2ನೇ ವರ್ಷದ ನಿರ್ವಹಣೆ ಕಾಮಗಾರಿಗಳನ್ನು ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ದಿ:31.03.2027 ರವರೆಗೆ ನಿರ್ವಹಿಸಲು ದಿನಾಂಕ: 12.05.2026 ರ 17:30 ಗಂಟೆ ರವರೆಗೆ ಒಳಗಾಗಿ ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಆಸಕ್ತ ಗುತ್ತಿಗೆದಾರರು ಟೆಂಡರ್‌ನ ವಿವರಗಳಿಗೆ www.kppp.karnataka.gov.in ನಲ್ಲಿ ಮಾಹಿತಿ ಪಡೆದು ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್ / ಬಹಿರಂಗ ಹರಾಜಿನ ವಿವರಗಳಿಗಾಗಿ ಕೆಲಸದ ವೇಳೆಯಲ್ಲಿ ಮೇಲಿನ ವಿಳಾಸವನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–ವಿಭಾಗೀಯ ವ್ಯವಸ್ಥಾಪಕರು
ಕ.ಅ.ಅ.ನಿ.ನಿ., ಚಿಕ್ಕಮಗಳೂರು.

ಕರ್ನಾಟಕ ಗ್ರಾಮೀಣ ಬ್ಯಾಂಕ್
KARNATAKA GRAMEENA BANK
ಸರ್ಕಾರಿ ಸ್ವಾಮ್ಯದ ಶೆಡ್ಯೂಲ್ಡ್ ಬ್ಯಾಂಕ್ Scheduled Bank owned by Government
Head Office : Ballari ಪ್ರಧಾನ ಕಛೇರಿ, ಬಳ್ಳಾರಿ

ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (PMJJBY) ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯ (PMSBY) ಫಲಾನುಭವಿಗಳಿಗೆ ಸೂಚನೆ

ಸಾರ್ವಜನಿಕವಾಗಿ ಈ ಮೂಲಕ ತಿಳಿಸುವುದೇನೆಂದರೆ,

ಭಾರತ ಸರ್ಕಾರದ ನಿರ್ದೇಶನಗಳನ್ವಯ (ಡಿಪಿಡಿಪಿ ಕಾಯ್ದೆ, 2023 ಅಡಿಯಲ್ಲಿ) ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (PMJJBY) ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY) ಗಳಿಗೆ ಸಂಬಂಧಿಸಿ ಬ್ಯಾಂಕಿನಲ್ಲಿ ಜರುಗವ ನೋಂದಣಿ, ನವೀಕರಣ ಮತ್ತು ಹಕ್ಕು (ಕ್ಲೈಮ್) ಸಂಬಂಧಿತ ಪ್ರಕ್ರಿಯೆಗಳನ್ನು ಜನಸುರಕ್ಷಾ ಪೋರ್ಟಲ್‌ನೊಂದಿಗೆ ಜೋಡಿಸಲಾಗಿದೆ. ಈ ಕಾರಣಕ್ಕೆ, ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವುದು, ಬಳಸುವುದು ಮತ್ತು ಜನಸುರಕ್ಷಾ ಪೋರ್ಟಲ್‌ನಲ್ಲಿ ಸುರಕ್ಷಿತವಾಗಿ ಸಂಗ್ರಹಿಸುವುದು ಅಗತ್ಯವಾಗಿದೆ. ಆದರೆ ಈ ಮಾಹಿತಿಯನ್ನು ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (PMJJBY) ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY) ಗಳಿಗೆ ಸಂಬಂಧಿಸಿದ ಅಧಿಕೃತ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುತ್ತದೆ ಮತ್ತು ಯಾವುದೇ ಅನಧಿಕೃತ ವ್ಯಕ್ತಿ ಅಥವಾ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ. ಇದೀಗ ಮಾಹಿತಿಯನ್ನು ಜನಸುರಕ್ಷಾ ಪೋರ್ಟಲ್ ನಲ್ಲಿ ಸೇರಿಸಬೇಕಾಗಿದ್ದು ಈ ಸಂಬಂಧ ಯಾರಲ್ಲಾದರೂ ಆಕ್ಷೇಪಣೆ ಇದ್ದರೆ ಅಥವಾ ಸ್ಪಷ್ಟೀಕರಣ ಬೇಕಿದ್ದರೆ ದಿನಾಂಕ 15.05.2026 ರ ಒಳಗಾಗಿ ನಿಮ್ಮ ಸಮೀಪದ ನಮ್ಮ ಶಾಖೆಯನ್ನು ಸಂಪರ್ಕಿಸಬಹುದು. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ಜನಸುರಕ್ಷಾ ಪೋರ್ಟಲ್‌ನಲ್ಲಿ ಮಾಹಿತಿ ಹಂಚಿಕೊಳ್ಳಲು ನಿಮ್ಮ ಒಪ್ಪಿಗೆ ಇದೆ ಎಂದು ಭಾವಿಸಲಾಗುತ್ತದೆ.

– ಕರ್ನಾಟಕ ಗ್ರಾಮೀಣ ಬ್ಯಾಂಕ್

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/2700 ಮಾನವ ಸೇವೆ/ಟೆಂಡರ್ ಪ್ರಕಟಣೆ ಸಂಖ್ಯೆ : 02/2026–27 ದಿನಾಂಕ : 30.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನ ಮೂಲಕ ಮಾತ್ರ)

ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 2700 ಭದ್ರಾ, ಗೊಂದಿ ಮತ್ತು ಜಂಬದಹಳ್ಳ ಲೆಕ್ಕ ಶೀರ್ಷಿಕೆಯಡಿಯಲ್ಲಿ 08 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 06.05.2026 ರಿಂದ 15.05.2026 ರವರೆಗೆ ಸಂಜೆ 17.29 ಗಂಟೆಗೆ. 2) ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 16.05.2026 ರಂದು 17.30 ಗಂಟೆಗೆ. Financial Bid will be opened for Sl No.01 to 06 and Technical Bid will be opened for Sl No. 7 and 8 after obtaining approval of technical bid from competent authority financial bid will be opened. 3) ಕಾಲಾವಧಿ : 12 ತಿಂಗಳು. 4) ಪ್ರೀ ಬಿಡ್ ಮೀಟಿಂಗ್ : Dt: 11.05.2026 @ 11.00 Hrs at O/o Executive Engineer, No.4 BRLBC Division, Bhadravathi (For Sl No.07 & 08) 5) ಟೆಂಡರ್‌ಗಿಟ್ಟ ಮೊತ್ತ : ರೂ.17.04 ಲಕ್ಷಗಳಿಂದ ರೂ.141.02 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 42,600/– ರಿಂದ ರೂ. 2,12,000/– ವರೆಗೆ
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ಸಂ.14–05/ ಝೇಂಕಾರ್/2026–27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–4/ಟೆಂಡರ/2026–27/755 ದಿನಾಂಕ: 06/05/2026

ಅಲ್ಪಾವಧಿ ಇ–ಮರುಟೆಂಡರ್ ಪ್ರಕಟಣೆ (Call–3)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059–ಎಸ್.ಸಿ.ಪಿ.–ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು (CMIDP) ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 80.00 ಲಕ್ಷ ಇರುವ ಕಾಮಗಾರಿಗೆ ಮರುಟೆಂಡರ್ ಆವ್ಹಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 12–05–2026 (ಸಾಯಂಕಾಲ 5.30 ಗಂಟೆಯುವರೆಗೆ), 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 14–05–2026 (ಸಾಯಂಕಾಲ 5.00 ಗಂಟೆಯವರೆಗೆ), 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 16–05–2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-207/KSMCA/2026-27

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಪುನರವಸತಿ ವಿಭಾಗ ನಂ.4, ಕೃಮೇಯೋ, ಬೀಳಗಿ, ಕ್ಯಾಂಪ: ನವನಗರ ಬಾಗಲಕೋಟೆ ಇವರ ಕಾರ್ಯಾಲಯ.

ಸಂ: ಕೃಮೇಯೋ/ಕಾನಿಅ/ಪುವಿ–4/ಯೋವಿ–2/ಟೆಂಡರ್–1/2026–27/110 ದಿನಾಂಕ: 07–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (4ನೇ ಕರೆ)
(ಕೆಪಿಪಿಪಿ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಹೊರಗುತ್ತಿಗೆ ಆಧಾರದ ಮೇಲೆ ಮಾನವಸೇವೆ ಒದಗಿಸುವ ಕಾಮಗಾರಿಗಳಿಗೆ ಅರ್ಹಗುತ್ತಿಗೆದಾರರಿಂದ **ಇಂಡೆಂಟ್ ಸಂ: 0021 ರೂ: 140.23 ಲಕ್ಷಗಳಿಗೆ ಹಾಗೂ ಇಂಡೆಂಟ್ ಸಂ: 0017 ರೂ: 103.02 ಲಕ್ಷಗಳಿಗೆ** ದ್ವಿಲಕೋಟೆ ಪದ್ಧತಿಯಲ್ಲಿ ಇಡಗಂಟು (Lump sum) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಬಹುದಾದ ಕೊನೆಯ **ದಿನಾಂಕ: 21–05–2026 ಸಂಜೆ 5.30 ಗಂಟೆವರೆಗೆ.** ಟೆಂಡರ್ ಮಾಹಿತಿ, ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ **https://kppp.karnataka.gov.in**ನಲ್ಲಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.
ವಿಶೇಷ ಸೂಚನೆ: (1) ಗುತ್ತಿಗೆದಾರರು ಸೇವಾಶುಲ್ಕ ಮಾತ್ರ ಇಡಗಂಟು (Lump sum) ಒಂದು ವರ್ಷಕ್ಕೆ ರೂಪಾಯಿಗಳಲ್ಲಿ(INR) ನಮೂದಿಸುವುದು.
(2) ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು / ಪ್ರತಿನಿಧಿಗಳು ನಿಗದಿಪಡಿಸಿದ ದಿನಾಂಕದಂದು ಪೂರ್ವಭಾವಿ ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸತಕ್ಕದ್ದು.
(3) ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾಲಕಾಲಕ್ಕೆ ಮಾಡಬಹುದಾದ ಮಾರ್ಪಾಡು ಹಾಗೂ ತಿದ್ದುಪಡಿಗಳನ್ನು ಗಮನಿಸತಕ್ಕದ್ದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪುನರವಸತಿ ವಿಭಾಗ ನಂ–4, ಕೃಮೇಯೋ,
ಬೀಳಗಿ, ಕ್ಯಾಂಪ:– ನವನಗರ–ಬಾಗಲಕೋಟೆ.

ವಾ.ಸಾ.ಸಂ.ಇ/ಬಾಗಲಕೋಟ/20/ದೇಶಪಾಂಡೆಪಬ್ಲಿಸಿಟಿ/2026–27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-UO4010KA2002SGC030438)

ಅಂತಿಮ ಮರುಕರೆ ಪ್ರಕಟಣೆ

ಶ್ರೀ. ಎ. ಮಂಜು, ಕಿರಿಯ ಪವರ್‌ಮ್ಯಾನ್, ಆದ ನೀವು ಟಾಸ್ಕರ್ ಟೌನ್ ಕಾರ್ಯ ಮತ್ತು ಪಾಲನಾ ಘಟಕ, 2 ನೇ ಪೂರ್ವ ಉಪವಿಭಾಗದಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ರಜೆಯ ಅರ್ಜಿಯನ್ನು ನೀಡದೇ, **ಮೇಲಾಧಿಕಾರಿಗಳ ಅನುಮತಿ/ಗಮನಕ್ಕೆ ಬಾರದೆ ದಿನಾಂಕ: 30.03.2021 ರಿಂದ ಇಲ್ಲಿಯವರೆಗೆ ಅನಧಿಕೃತ ಗೈರು ಹಾಜರಾಗಿ ದುರ್ನಡತೆ ಎಸಗಿರುತ್ತೀರಿ.** ಇದರಿಂದ ಕಂಪನಿಯ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ. ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಕ–22/2025–26/7900/02.01.2026 ರಲ್ಲಿ ಈ ಕಛೇರಿಯಿಂದ ಕೆಲಸಕ್ಕೆ ಅಂತಿಮ ಮರು ಕರೆ ಪತ್ರವನ್ನು ನಿಮ್ಮ ವಿಳಾಸಕ್ಕೆ ತುರ್ತು/ನೋಂದಾಯಿತ ಅಂಚೆಯ ಮೂಲಕ ಕಳುಹಿಸಲಾಗಿದ್ದು, ತಾವು ಪತ್ರವನ್ನು ಸ್ವೀಕರಿಸಿಯೂ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಕಾನಿಇಂ(ವಿ)/ಶಿನವಿ/ಲೆ/ಸ.ಲೆ/ಹಿಸ–1/ಕ–22/2025–26/181–85/07.04.2026 ರಲ್ಲಿ ಈ ಕಛೇರಿಯಿಂದ ಆರೋಪ ಪಟ್ಟಿಯನ್ನು ನಿಮ್ಮ ವಿಳಾಸಕ್ಕೆ ತುರ್ತು/ನೋಂದಾಯಿತ ಅಂಚೆಯ ಮೂಲಕ ಕಳುಹಿಸಲಾಗಿದ್ದು, ಹಾಗೂ ಮುದ್ದಾಂ ಕಳುಹಿಸಲಾಗಿದ್ದು ತಾವು ಸ್ವೀಕರಿಸಿಯೂ ಇದುವರೆಗೂ ತಾವು ಈ ಕಚೇರಿಯಲ್ಲಿ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಈ ಪತ್ರಿಕಾ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ **15 ದಿನಗಳ ಒಳಗಾಗಿ** ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಪ್ರಕಟಣೆಯನ್ನು ಅಂತಿಮ ಕರೆಯೋಲೆ ಪತ್ರವೆಂದು ಪರಿಗಣಿಸಿ ಕವಿಪ್ರನಿನಿ ನೌಕರರ (ವ.ಶಿ.ನಿ ಮತ್ತು ಮೇ) ನಿಬಂಧನೆಗಳು 1987 ರ ನಿಯಮಾವಳಿಯ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ಪರಿಹಾರ ನೀಡದೆ ನಿಮ್ಮನ್ನು ಬೆವಿಕಂ ಸೇವೆಯಿಂದ ವಜಾಗೊಳಿಸಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾ ಮತ್ತು ಪಾ ಶಿವಾಜಿನಗರ ವಿಭಾಗ,
ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂ:ಕಾಇಂ/ಲೋಇವಿ/ಮಧು/ಕಿಇಂ/ಟೆಂಡರ್/2026–27 ದಿ: 27.04.2026

ಟೆಂಡರ್ ಪ್ರಕಟಣೆ ಸಂಖ್ಯೆ:05/2026–27
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ(ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ: 555.47 ಲಕ್ಷಗಳವರೆಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 29–05–2026 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 30–05–2026ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 01–06–2026 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 15–05–2026 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/57/KSMCA/2026-27

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಬೆಂಗಳೂರು ಡೇರಿ ಪ್ರಾಂಗಣ: ಡಾ॥ ಎಂ.ಹೆಚ್.ಮರೀಗೌಡ ರಸ್ತೆ, ಡಿ.ಆರ್. ಕಾಲೇಜ್ ಅಂಚೆ, ಬೆಂಗಳೂರು–560029.

ಕಾಮಗಾರಿ ಕೆಲಸಗಳ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಭಾಗ–1 ಟೆಂಡರ್‌ಗೆ ಆಹ್ವಾನ (ಐ ಎಫ್ ಟಿ)

ಐ.ಎಫ್.ಟಿಸಂಖ್ಯೆ:ಬಮೂಲ್/ಪ್ರವ್ಯ(ಅಭಿ)/ಇ–ಟೆಂಡರ್/ಸಿವಿಲ್–3/01/2026–27 ದಿನಾಂಕ: 06.05.2026

ಇ–ಟೆಂಡರ್ ಪ್ರಕಟಣೆ

ಬೆಂಗಳೂರು ಸಹಕಾರ ಹಾಲು ಒಕ್ಕೂಟದಲ್ಲಿನ ಕಾಮಗಾರಿ ಕೆಲಸಗಳನ್ನು ಮಾಡಿಸುವ ಸಲುವಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆ/ಕೇಂದ್ರಿಯ ಲೋಕೋಪಯೋಗಿ ಇಲಾಖೆ/ಎಂ.ಇ.ಎಸ್ ಇಲಾಖೆಗಳಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇ–ಟೆಂಡರ್ ಪೋರ್ಟಾಲ್ ಆಹ್ವಾನಿಸಲಾಗಿದೆ. ವಿವರ ಮತ್ತು ವೇಳಾ ಪಟ್ಟಿ ಈ ಕೆಳಕಂಡಂತೆ ಇರುತ್ತದೆ. ಇ.ಎಂ.ಡಿ. ಬಾಬ್ತಿನ ಮೊತ್ತವು ಟೆಂಡರ್‌ನ ಸಿಂಧುತ್ವದ ಅವಧಿಯ ನಂತರದ 45 ದಿನಗಳ ವರೆಗೆ ಸಿಂಧುವಾಗಿರಬೇಕು ಹಾಗೂ ಇಎಂಡಿ ಮೊತ್ತವನ್ನು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಯಾವುದೇ ಒಂದು ಮಾದರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ.

ಪ್ಯಾಕೇಜ್ ಸಂಖ್ಯೆ	ಕೆಲಸದ ವಿವರ	ಕೆಲಸದ ಅಂದಾಜು ಮೌಲ್ಯ ರೂ ಗಳಲ್ಲಿ	ಇಎಂಡಿ ಮೊತ್ತ ರೂ ಗಳಲ್ಲಿ	ಪೂರ್ಣಗೊಳಿಸುವ ಕಾಲಾವಧಿ	ಗುತ್ತಿಗೆದಾರರ ದರ್ಜೆ
KW-4	Board Room Civil, Electrical, Teleconference systems with Seating arrangement Works	1,09,27,644 + 18% ಜಿ.ಎಸ್.ಟಿ	1,09,276	150 ದಿನಗಳು	ದರ್ಜೆ–3 ಮತ್ತು ಮೇಲ್ಪಟ್ಟು
KW-4	Interior Works For BAMUL Admin Block	1,26,05,197+ 18% ಜಿ.ಎಸ್.ಟಿ	1,26,051	150 ದಿನಗಳು	ದರ್ಜೆ–3 ಮತ್ತು ಮೇಲ್ಪಟ್ಟು
1	ತಾಂತ್ರಿಕ ಟೆಂಡರ್ ದಸ್ತಾವೇಜನ್ನು ಸ್ವೀಕರಿಸಲು (Access to E- Tender Portal only) ಲಭ್ಯತೆ		06.05.2026 ರಿಂದ 20.05.2026 ರಂದು ಮಧ್ಯಾಹ್ನ 3.00 ಗಂಟೆ ಯವರೆಗೆ		
2	ಟೆಂಡರ್‌ನ ಸ್ಪಷ್ಟೀಕರಣ ಕೋರಲು ಕೊನೆಯ ದಿನಾಂಕ		14.05.2026 ರಂದು ಮಧ್ಯಾಹ್ನ 2.30ಗಂಟೆಯವರೆಗೆ		
3	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ		20.05.2026 ರಂದು ಮಧ್ಯಾಹ್ನ 3.00ಗಂಟೆಯ ವರೆಗೆ		
4	ತಾಂತ್ರಿಕ ಟೆಂಡರ್ (ಭಾಗ–1) ತೆರೆಯುವ ದಿನಾಂಕ/ಸಮಯ		21.05.2026 ರಂದು ಮಧ್ಯಾಹ್ನ 03.30 ಗಂಟೆಗೆ		
5	ವಾಣಿಜ್ಯ ಟೆಂಡರ್ (ಭಾಗ–2) ತೆರೆಯುವ ದಿನಾಂಕ/ಸಮಯ		ಉತ್ತೀರ್ಣರಾದ ಟೆಂಡರ್‌ದಾರರಿಗೆ ತಿಳಿಸಲಾಗುವುದು.		
6	ತಾಂತ್ರಿಕ/ ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ		ಮಂಡಳಿ ಸಭಾಂಗಣ, ಬೆಂಗಳೂರು ಸಹಕಾರ ಹಾಲು ಒಕ್ಕೂಟ, ಡಾ"ಎಂ. ಹೆಚ್. ಮರೀಗೌಡರಸ್ತೆ, ಬೆಂಗಳೂರು–560029.		

ಟೆಂಡರ್ ಸಂಬಂಧ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಬೆಂಗಳೂರು ಸಹಕಾರ ಹಾಲು ಒಕ್ಕೂಟನಿ.,

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ) ಕಚೇರಿ, ಹುಬ್ಬಳ್ಳಿ.

ನಂ. ಎಚ್‌ಡಿಎಮ್‌ಸಿ/63/04/2026–27 ದಿನಾಂಕ: 07–05–2026

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2023 ರ ಪ್ರಕಾರ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2025–26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.48658/10.82ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.47246/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.48222/2.50ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49733/5.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.51690/4.36ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.49586/ 7.45ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54694/6.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54691/9.45ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54855/ 30.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.49574/6.20ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49592/8.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49730/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52363/6.32ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52316/3.06ಲಕ್ಷ/4ನೇಕರೆ/ ಸಾಮಾನ್ಯ, ಇಂಡೆಂಟ್ ನಂ.52268/32.41ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.52315/4.57ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.51688/15.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.54689/4.88ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54865/9.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54867/ 25.75ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54871/ 3.70ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.43605/2.94ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48985/ 9.88ಲಕ್ಷ/3ನೇಕರೆ/ ಸಾಮಾನ್ಯ, ಇಂಡೆಂಟ್ ನಂ.55493/15.00ಲಕ್ಷ/2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55494/20.00ಲಕ್ಷ/ 2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.55305/28.25ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55304/18.75ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55303/27.50ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.56078/4.23ಲಕ್ಷ/ 2ನೇಕರೆ/ಪ್ರವರ್ಗII(ಎ), ಇಂಡೆಂಟ್ ನಂ.49593/9.70ಲಕ್ಷ/2ನೇಕರೆ/ ಪ್ರವರ್ಗII(ಎ), ಇಂಡೆಂಟ್ ನಂ.54740/20.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.56265/31.82ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.49731/3.00ಲಕ್ಷ/ 2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55766/7.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.55762/4.20ಲಕ್ಷ/ಸಾಮಾನ್ಯ, ಇಂಡೆಂಟ್ ನಂ. 56727/15.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.56729/10.00ಲಕ್ಷ/ಪ್ರವರ್ಗII(ಎ), ಇಂಡೆಂಟ್‌ನಂ.57913/18.17ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57912/5.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57910/7.10ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57925/6.31ಲಕ್ಷ/ ಪ್ರವರ್ಗII(ಎ), ಇಂಡೆಂಟ್ ನಂ.57911/3.00ಲಕ್ಷ/ ಪ.ಜಾ(ಎಸ್.ಸಿ) ಇಂಡೆಂಟ್ ನಂ.57914/12.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57918/8.00ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.57928/12.67ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57909/7.35ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57919/2.50ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57921/14.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57923/7.65ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57924/15.00ಲಕ್ಷ/ಪ.ಪಂ(ಎಸ್.ಟಿ), ಇಂಡೆಂಟ್ ನಂ.57926/4.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57927/10.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57915/6.14ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57917/4.48ಲಕ್ಷ/ ಪ.ಪಂ(ಎಸ್.ಟಿ), ಇಂಡೆಂಟ್ ನಂ.57790/6.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57789/9.41ಲಕ್ಷ/ಸಾಮಾನ್ಯ, ಇಂಡೆಂಟ್‌ನಂ.57791/39.88ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57788/29.50ಲಕ್ಷ/ಸಾಮಾನ್ಯ, ಸನ್ 2026–27 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57943/49.00ಲಕ್ಷ/ಪ್ರವರ್ಗI, ಇಂಡೆಂಟ್ ನಂ.57944/20.00ಲಕ್ಷ/ ಸಾಮಾನ್ಯ, ಸನ್ 2024–25 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.36183/14.70ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.33790/6.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.37759/13.50ಲಕ್ಷ/6ನೇಕರೆ/ಸಾಮಾನ್ಯ ಇಂಡೆಂಟ್ ನಂ.37468/ 18.89ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.34041/2.00ಲಕ್ಷ/6ನೇಕರೆ/ಸಾಮಾನ್ಯ ಸನ್ 2024–25ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.56080/4.00ಲಕ್ಷ/2ನೇಕರೆ/ಪ್ರವರ್ಗI, ಸನ್ 2025–26ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.54678/10.00ಲಕ್ಷ/3ನೇಕರೆ/ಸಾಮಾನ್ಯ ಇಂಡೆಂಟ್ ನಂ.56069/5.00ಲಕ್ಷ/2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.56081/10.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಸನ್ 2024–25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.36184/5.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.43159/8.00ಲಕ್ಷ/5ನೇಕರೆ/ಸಾಮಾನ್ಯ ಇಂಡೆಂಟ್ ನಂ.40713/15.00ಲಕ್ಷ/5ನೇಕರೆ/ಸಾಮಾನ್ಯ, ಸನ್ 2024–25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51684/4.50ಲಕ್ಷ/ 3ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51685/ 25.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ನಾಮನಿರ್ದೇಶಿತ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.40719/10.00ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48225/5.25ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.57276/15.00ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57438/5.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57792/21.75ಲಕ್ಷ/ಸಾಮಾನ್ಯ, ಸನ್ 2025–26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **(Village development Fund)** ಇಂಡೆಂಟ್ ನಂ.52680/49.82ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.56730/37.70ಲಕ್ಷ/ಸಾಮಾನ್ಯ, ಸನ್ 2024–25ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್‌ನಂ.49734/10.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2023–24ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.20268/15.64ಲಕ್ಷ/ 8ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.54823/15.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.57583/2.63ಲಕ್ಷ/ಸಾಮಾನ್ಯ, ಸನ್ 2026–27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಇಂಡೆಂಟ್ ನಂ.57895/5.00ಲಕ್ಷ/ಪ್ರವರ್ಗII (ಎ), ಇಂಡೆಂಟ್ ನಂ.57963/5.00ಲಕ್ಷ/ಪ.ಪಂ(ಎಸ್.ಟಿ), ಸನ್ 2025–26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.31079/49.25ಲಕ್ಷ/4ನೇಕರೆ/ಸಾಮಾನ್ಯ, ಸನ್ 2025–26ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57962/8.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57960/8.00ಲಕ್ಷ /ಸಾಮಾನ್ಯ, ಸನ್ 2024–25ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57751/8.00ಲಕ್ಷ/ಸಾಮಾನ್ಯ ಸನ್ 2025–26ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.54853/17.00ಲಕ್ಷ/ಪ.ಜಾ(ಎಸ್.ಸಿ) ಸನ್ 2024–25ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57920/3.03ಲಕ್ಷ/ಪ್ರವರ್ಗII(ಎ) ಇ–ಪ್ರೋಕ್ಯೂರಮೆಂಟ್ ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **https://kppp.karnataka.gov.in** ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ:13–05–2026 ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
1) ಟೆಂಡರ್ ಸಲ್ಲಸಲು ಕೊನೆಯ **ದಿನಾಂಕ: 29/05/2026 ಸಂಜೆ: 4.00 ಗಂಟೆ ವರೆಗೆ** ಹಾಗೂ

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಹು.ಧಾ.ಮ. ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/142/2026–27/ದೇಶಪಾಂಡೆಪಬ್ಲಿಸಿಟಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.
ಇ–ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2026–27/176
ದಿನಾಂಕ:06.05.2026

ಅಲ್ಪಾವಧಿ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis tenders from the eligible contractors for the work indents of **Two Cover** – (1) I .No. **KBJNL/2025-26/LI/WORK_INDENT2788– 48080.97** Lakhs, ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.
1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **08.05.2026** ರಿಂದ **27.05.2026** ಸಾಯಂಕಾಲ 5.00 ಘಂಟೆಯವರೆಗೆ.
2. **ಪೂರ್ವಭಾವಿ ಸಭೆ :15.05.2026 ಮುಂಜಾನೆ 11.00 ಘಂಟೆಗೆ. ಮಾನ್ಯ ಮುಖ್ಯ ಅಭಿಯಂತರರ ಕಛೇರಿ, ಕೃಭಾಜನಿನಿ, ಆಣೆಕಟ್ಟು ವಲಯ ಆಲಮಟ್ಟಿ**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.05.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **: 03.06.2026 ಮುಂಜಾನೆ 11.00 ಘಂಟೆಗೆ.**
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– (ಟಿ.ವ್ಹಿ. ದೊಡ್ಡಮನಿ) ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.

ವಾಸಾಸಂಇ/ವಿಜಯಪುರ/83/ಕೆಎಸ್‌ಎಂಸಿಎ/2026–27

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಘಟಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ,
ಅನೆಕ್ಸ್ 03 ಬಿಲ್ಡಿಂಗ್, ನರಸಿಂಹರಾಜ ಚೌಕ್ತ, ಬೆಂಗಳೂರು–560 002,

ಸಂಖ್ಯೆ: ಉಸಂ/ಪಿಆರ್/145/2025–26 ದಿನಾಂಕ: 07–05–2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಸಮಸ್ತ ನಾಗಕರೀಕರ ಗಮನಕ್ಕೆ ತರಬಯಸುತ್ತಿರುವುದೇನೆಂದರೆ, ಅರಣ್ಯ ಸಂರಕ್ಷಣಾಧಿಕಾರಿಗಳು, ಮುಖ್ಯಸ್ಥರು, ಸೌಲಭ್ಯಗಳು ಮತ್ತು ಸೇವೆಗಳ ವಿಭಾಗ, ಐ.ಸಿ.ಎಫ್.ಆರ್.ಇ – ಇನ್ಸಿಟ್ಯೂಟ್ ಅಫ್ ವುಡ್ ಸೈನ್ಸ್ & ಟೆಕ್ನಾಲಜಿ, ಬೆಂಗಳೂರು ಯೇಜನೆಯ, Establishment of ECO-Sewage Treatment Plant ನಿರ್ಮಾಣ ಮಾಡುವ ಕಾಮಗಾರಿಗೆ, ಮರಗಳ ತೆರವಿಗಾಗಿ ಮನವಿ ಸಲ್ಲಿಸಿರುವ ವಿವರಗಳು ಈ ಕೆಳಕಂಡಂತಿರುತ್ತವೆ.

ಯೋಜನೆಯ ಹೆಸರು	Establishment of Proposed Eco-Sewage Treatment Plant		
ಏಜೆನ್ಸಿಯ ಹೆಸರು	ಐ.ಸಿ.ಎಫ್.ಆರ್.ಇ – ಇನ್ಸಿಟ್ಯೂಟ್ ಅಫ್ ವುಡ್ ಸೈನ್ಸ್ & ಟೆಕ್ನಾಲಜಿ, ಬೆಂಗಳೂರು		
ಮರ ತೆರವುಗೊಳಿಸುವ ಉದ್ದೇಶ	ಇನ್ಸಿಟ್ಯೂಟ್ ಅಫ್ ವುಡ್ ಸೈನ್ಸ್ & ಟೆಕ್ನಾಲಜಿ ಯೇಜನೆಯ, Establishment of proposed ECO-STP ನಿರ್ಮಾಣ ಕಾಮಗಾರಿಗೆ ಆವರ ಆವರಣದಲ್ಲಿರುವ ಮರಗಳ ತೆರವು.		
ಯೋಜನಾ ಪ್ರದೇಶದ ನಿರ್ದೇಶಾಂಕಗಳು	Latitude (N)	Longitude (E)	Location
	$13^{0}00'43"$	$77^{0}34'18"$	ಇನ್ಸಿಟ್ಯೂಟ್ ಅಫ್ ವುಡ್ ಸೈನ್ಸ್ & ಟೆಕ್ನಾಲಜಿ ಆವರಣ, 18ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು
ಯೋಜನಾ ಪ್ರದೇಶದಲ್ಲಿರುವ ಪ್ರಸ್ತುತ ಮರಗಳು	50 ಮರಗಳು (Annexure 1)	ಮರಗಳ ಜಾತಿ, ಅಳತೆಪಟ್ಟಿ ಹಾಗೂ ಮರಗಳಿರುವ ಜಾಗಗಳ ವಿವರಗಳನ್ನು ಜಿಬಿಎ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಒದಗಿಸಲಾಗಿದೆ. (www.bbmp.gov.in)	
ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ (ಸಾರ್ವಜನಿಕರು ನೇರವಾಗಿ/ಇ–ಮೇಲ್/ ಅಂಚೆ ಮುಖಾಂತರ ಈ ಕೆಳ ಸಹಿದಾರರ ಕಚೇರಿಗೆ ಸಲ್ಲಿಸಬಹುದು)	ವಿಳಾಸ: (1) ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಬಿಎ, ನರಸಿಂಹರಾಜ ಚೌಕ, ಬೆಂಗಳೂರು – 02. E-mail ID: dcfbbmp12@gmail.com (2) ನಿರ್ದೇಶಕರು, ಐ.ಡಬ್ಲ್ಯು.ಎಸ್.ಟಿ / ಬೆಂಗಳೂರು.E-mail id: dir_iwst@icfre.org # # ಆಕ್ಷೇಪಣೆಗಳನ್ನು ನಿರ್ದೇಶಕರು, ಐ.ಡಬ್ಲ್ಯು.ಎಸ್.ಟಿ /ಗೆ ಸಲ್ಲಿಸಿದ್ದಲ್ಲಿ, ಅದರ ಪ್ರತಿಯನ್ನು DCF ಜಿಬಿಎರವರಿಗೂ ಸಲ್ಲಿಸತಕ್ಕದ್ದು		
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. **ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು**		

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್ 8(3) (vii) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ವೃಕ್ಷ ಅಧಿಕಾರಿ
ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಬಿಎ, ಬೆಂಗಳೂರು

ಚಿತ್ರ ಸೌರಭ

ಕಿಂಗ್ Vs ರಾಕಿಂಗ್

ವರ್ಷಾಂತ್ಯಕ್ಕೆ ಟಾಕ್ಸಿಕ್ ಕಿಕ್...?

ಕ್ರಿಸ್‌ಮಸ್‌ಗೆ ಯಶ್ ದರ್ಶನ..?

ತಾಂತ್ರಿಕ ಕೆಲಸಗಳು ಅಂದುಕೊಂಡಂತೆ ಪೂರ್ಣಗೊಂಡರೆ ಟಾಕ್ಸಿಕ್ ಸಿನಿಮಾವನ್ನು ಇದೇ ವರ್ಷಾಂತ್ಯಕ್ಕೆ ಬಿಡುಗಡೆ ಮಾಡುವ ಕುರಿತು ಚಿತ್ರತಂಡ ಆಲೋಚಿಸುತ್ತಿದೆ ಎಂಬ ಮಾತಿದೆ. ಯಶ್ ನಟನೆಯ ಕೆಜಿಎಫ್ ಕ್ರಿಸ್‌ಮಸ್ ವೇಳೆ ಬಿಡುಗಡೆಗೊಂಡು ಭರ್ಜರಿ ಯಶಸ್ಸು ದಾಖಲಿಸಿತ್ತು. ಹಾಗೆಯೇ ಅವರ ರಾಮಾಚಾರಿ ಸೇರಿದಂತೆ ಅನೇಕ ಸಿನಿಮಾಗಳು ವರ್ಷಾಂತ್ಯದಲ್ಲಿ ಬಿಡುಗಡೆಗೊಂಡು ದೊಡ್ಡ ಮಟ್ಟದಲ್ಲಿ ಸಕ್ಸಸ್ ಕಂಡಿವೆ.

ಅಂದು 'ಜೀರೋ', ಇಂದು..?

ಕೆಜಿಎಫ್ ತೆರೆಕಂಡ ದಿನವೇ ಶಾರುಖ್ ಖಾನ್ ನಟನೆಯ 'ಜೀರೋ' ಸಹ ತೆರೆಕಂಡಿತ್ತು. ಯಶ್ ಗೆಲುವಿನ ಅಲೆಯ ಮುಂದೆ ಶಾರುಖ್ ಅಕ್ಷರಶಃ ತರಗೆಲೆಯಂತಾಗಿದ್ದರು. ಇದೀಗ ಶಾರುಖ್ ನಟನೆಯ ಕಿಂಗ್ ಸಿನಿಮಾ ಡಿಸೆಂಬರ್ 24ರಂದು ರಿಲೀಸ್ ಮಾಡುವುದಾಗಿ ಅನೌನ್ಸ್ ಆಗಿದೆ. ಅದೇ ದಿನದಂದು 'ಟಾಕ್ಸಿಕ್' ಸಹ ತೆರೆಕಾಣಲಿದೆಯಂತೆ. ಹಾಗಾದರೆ ಇಬ್ಬರ ಪೈಪೋಟಿಯ ನಡುವೆ ಯಾವ ಸಿನಿಮಾ ಜಯಭೇರಿ ಬಾರಿಸಲಿದೆ ಕಾದು ನೋಡಬೇಕು.

ಪ್ರಸಕ್ತ ವರ್ಷದ ನಾಲ್ಕು ತಿಂಗಳಿನಲ್ಲಿ ಕನ್ನಡ ಸೇರಿದಂತೆ ಪರಭಾಷಾ ಸಿನಿಮಾಗಳು ಸುಮಾರು ಇನ್ನೂರಕ್ಕೂ ಅಧಿಕ ಬಿಡುಗಡೆಯಾಗಿವೆ. ಆದರೆ ಅವೆಲ್ಲದರ ಪೈಕಿ ಬೆರಳೆಣಿಕೆ ಸಿನಿಮಾಗಳು ಮಾತ್ರ ಬಾಕ್ಸಾಫೀಸ್‌ನಲ್ಲಿ ಯಶಸ್ಸನ್ನು ದಾಖಲಿಸಿವೆ. ಇನ್ನು ಕೆಲವೇ ಕೆಲವು ಸಿನಿಮಾಗಳು ನಿರ್ಮಾಪಕರ ಥೈಲಿ ಭರ್ತಿ ಮಾಡಿವೆ. ಅದರಲ್ಲಿ ಕೆಲವು ಹಾಕಿದ ಬಂಡವಾಳ, ಬಡ್ಡಿ ಇತ್ಯಾದಿಗಳಿಗೆ ಸರಿಸಮನಾಗಿವೆ. ಹಾಗೆ ನೋಡಿದರೆ ಈವರೆಗೂ ಹೆಚ್ಚಾಗಿ ಸ್ಟಾರ್ ಸಿನಿಮಾಗಳು ತೆರೆಕಂಡಿಲ್ಲ. ಅರ್ಧವಾರ್ಷಿಕ ಬಳಿಕ ಸ್ಟಾರ್ ಸಿನಿಮಾಗಳು ಚಿತ್ರರಂಗವನ್ನು ರಂಗೇರಿಸುವ ಭರವಸೆಯಿದೆ. ಹಾಗೆ ನೋಡಿದರೆ ವರ್ಷದ ಆರಂಭದಲ್ಲೇ ಕೆಲವು ಸ್ಟಾರ್‌ಗಳು ಚಿತ್ರಮಂದಿರಕ್ಕೆ ಕಾಲಿಡಬೇಕಿತ್ತು. ಆದರೆ ಯಾಕೋ ಸದ್ಯದ ಮಟ್ಟಿಗೆ ದರ್ಶನ ಕೊಡುವ ಯಾವುದೇ ಸುಳಿವಿಲ್ಲ..!

ಗಣೇಶ್ ರಾಣೆಬೆನ್ನೂರು

ಎಲ್ಲಾ ಅಂದುಕೊಂಡಂತೆ ಆಗಿದ್ದರೆ ಈ ಹೊತ್ತಿಗೆ ಯಶ್ ಅಭಿನಯದ 'ಟಾಕ್ಸಿಕ್' ಬಿಡುಗಡೆಯಾಗಿ ಅದಾಗಲೇ ಐವತ್ತು ದಿನಗಳನ್ನೂ ಪೂರೈಸಬೇಕಿತ್ತು... ಕಾರಣಾಂತರಗಳಿಂದ ಜೂನ್ 4ರಂದು ಬಿಡುಗಡೆ ಮಾಡುವುದಾಗಿ ಚಿತ್ರತಂಡ ಹೇಳಿಕೊಂಡಿತ್ತು. ಆದರೆ, ಮತ್ತಷ್ಟು ತಾಂತ್ರಿಕ ಕಾರಣಗಳನ್ನೊಡ್ಡಿ ಮತ್ತೆ ರಿಲೀಸ್ ಡೇಟ್ ಮುಂದೂಡಿದೆ 'ಟಾಕ್ಸಿಕ್' ಟೀಂ. ಸಹಜವಾಗಿಯೇ ದೊಡ್ಡ ಸ್ಟಾರ್‌ಗಳ ಸಿನಿಮಾ ಎಂದಾಗ ಬಿಡುಗಡೆ ದಿನಾಂಕವನ್ನು ಅಭಿಮಾನಿಗಳು ಎದುರು ನೋಡುತ್ತಿರುತ್ತಾರೆ. ಆದರೆ ಈ ಬಾರಿ ರಿಲೀಸ್ ಡೇಟ್ ಹೇಳದೇ, 'ಮುಂದಿನ ದಿನಗಳಲ್ಲಿ ಅಪ್‌ಡೇಟ್ ಮಾಡುತ್ತೇವೆ' ಎಂದು ಕೈ ತೊಳೆದುಕೊಂಡಿದೆ. 'ಹಾಗಾದರೆ ಅಭಿಮಾನಿಗಳ ಕಾಯುವಿಕೆಗೆ ಕಿಮ್ಮತ್ತಿಲ್ವ?' ಎನ್ನುವವರಿಗೆ ಒನ್ಸ್ ಅಗೇಯ್ನ್ 'ಟೆಕ್ನಿಕಲ್ ರೀಸನ್...' ಎನ್ನಲಾಗುತ್ತದೆ..!

ನೂರಾರು ಅಡೆತಡೆ... ಯಾವಾಗ ಬಿಡುಗಡೆ..?

ಯಶ್ ನಟಿಸಿರುವ ಟಾಕ್ಸಿಕ್ ಸಿನಿಮಾ ಅದಾಗಲೇ ಶೂಟಿಂಗ್ ಮುಗಿಸಿಕೊಂಡಿದೆ. ಮಾರ್ಚ್‌ನಲ್ಲೇ ಬಿಡುಗಡೆಯ ಯೋಜನೆ ಇದ್ದುದ್ದರಿಂದ ಪ್ರಮುಖ ಪಾತ್ರಧಾರಿಗಳ ಪೋಸ್ಟರ್, ಟೀಸರ್ ಹಾಗೂ ಹಾಡುಗಳನ್ನು ಹರಿಬಿಡಲಾಗಿತ್ತು. ಆದರೆ, ರಿಲೀಸ್ ಡೇಟ್ ಸಮೀಪಿಸುತ್ತಿದ್ದಂತೆಯೇ ಏಕಾಏಕಿ ಜೂನ್‌ಗೆ ಮುಂದೂಡಲಾಯಿತು. 'ಇಷ್ಟೇ ಕಾಯ್ದ ಮೇಲೆ ಇನ್ನೆರಡು ತಿಂಗಳು ತಾನೇ...' ಎಂದುಕೊಂಡಿದ್ದ ಅಭಿಮಾನಿಗಳಿಗೆ ಮತ್ತೆ ರಿಲೀಸ್ ಡೇಟ್ ಮುಂದೂಡಿದ್ದರಿಂದ ನಿರಾಸೆಯಾಯಿತು.

ಹಾಗಾದರೆ 'ಟಾಕ್ಸಿಕ್' ರಿಲೀಸ್ ಯಾವಾಗ..? ತಡವಾಗಲು ಕಾರಣವೇನು..? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಕೇಳಿಬರುತ್ತದೆ. ಮೂಲಗಳ ಪ್ರಕಾರ ಸಿನಿಮಾವನ್ನು ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ತರಲು ಮತ್ತಷ್ಟು ಸಮಯ ಹಿಡಿಯುತ್ತದೆ ಎಂದು ಹೇಳಲಾಗುತ್ತಿದೆ. ಹಾಗೆಯೇ ಈ ಸಿನಿಮಾದ ಕೆಲವು ಭಾಗವನ್ನು ಮರು ಚಿತ್ರೀಕರಣ ನಡೆಸಲಾಗುತ್ತಿದೆ. ಗ್ರಾಫಿಕ್ಸ್ ಕೆಲಸ ಅಂದುಕೊಂಡಂತೆ ಬರದೇ ಇದ್ದುದ್ದರಿಂದ ಮತ್ತೊಮ್ಮೆ ಇಡೀ ಗ್ರಾಫಿಕ್ಸ್ ಕೆಲಸವನ್ನು ಬೇರೊಂದು ಕಡೆ ಮಾಡಿಸಲಾಗುತ್ತಿದೆ ಎಂಬುದು ಮತ್ತೊಂದು ಮೂಲಗಳಿಂದ ಬಂದ ಮಾಹಿತಿ.

ಇವೆಲ್ಲವೂ ತಾಂತ್ರಿಕ ಕಾರಣಗಳೇ ಹೊರತು... ಬಜೆಟ್ ತೊಂದರೆಯಿಂದಾಗಿ ಸಿನಿಮಾ ತಡವಾಗುತ್ತಿಲ್ಲ ಎಂಬುದು ಸಿನಿ ಪಂಡಿತರ ಅನಿಸಿಕೆ. ಯಾಕೆಂದರೆ ಈ ಸಿನಿಮಾಕ್ಕೆ ಖುದ್ದು ಯಶ್ ಸಹ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ಕೆವಿಎನ್ ಸಂಸ್ಥೆಯೂ ಹಣಕಾಸಿನ ವಿಚಾರದಲ್ಲಿ ಯಾವುದೇ ಕೊರತೆ ಮಾಡಿಲ್ಲ ಎಂಬುದು ಹತ್ತಿರದಿಂದ ಬಲ್ಲವರ ಮಾತು. ◆

ರಜನಿಕಾಂತ್ ಜೈಲರ್ 2 ಬಿಡುಗಡೆ ಮುಂದಕ್ಕೆ!

ರಜನಿಕಾಂತ್ ನಟನೆಯ ಜೈಲರ್ ಸಿನಿಮಾ ಭರ್ಜರಿ ಯಶಸ್ಸು ಕಂಡಿತ್ತು. ಅದರ ಬೆನ್ನಲ್ಲೇ ಅದೇ ತಂಡದಿಂದ 'ಜೈಲರ್ 2' ಅನೌನ್ಸ್ ಆಗಿತ್ತು. ಸಿನಿಮಾದ ಚಿತ್ರೀಕರಣವೇನೋ ಸರಾಗವಾಗಿ ಮುಗಿಯಿತು. ಆದರೆ ಅಂದುಕೊಂಡ ಸಮಯದಲ್ಲಿ ಸಿನಿಮಾವನ್ನು ತೆರೆ ಕಾಣಿಸಲು ಸಾಧ್ಯವಾಗುತ್ತಿಲ್ಲವಂತೆ. ಚಿತ್ರತಂಡ ಮೊದಲಿಗೆ ಅನೌನ್ಸ್ ಮಾಡಿದಂತೆ ಜೂನ್‌ನಲ್ಲಿ ರಿಲೀಸ್ ಮಾಡಬೇಕಿತ್ತು. ಕಾರಣಾಂತರಗಳಿಂದ ಆ ಡೇಟ್‌ಗೆ 'ಜೈಲರ್–2' ತೆರೆ ಕಾಣಿಸಲು ಸಾಧ್ಯವಾಗದ ಕಾರಣ, ಚಿತ್ರತಂಡ ಇದೀಗ ಅಕ್ಟೋಬರ್‌ನಲ್ಲಿ 'ಜೈಲರ್ 2' ಬಿಡುಗಡೆ ಮಾಡುವ ಆಲೋಚನೆಯಲ್ಲಿದೆ ಎನ್ನಲಾಗುತ್ತಿದೆ.

ಸಿಟಿ ಲೈಟ್ಸ್ ಬೆಳಕಿನಡಿ ವಿಜಿ ಡಾಟರ್!

ಬಾವ... ಬಾವ... ಹಾಡು ಬಂತು

ದುನಿಯಾ ವಿಜಯ್ ಪುತ್ರಿಯೊಬ್ಬರು ಲ್ಯಾಂಡ್ ಲಾರ್ಡ್ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಈಗ ಅವರ ಎರಡನೇ ಪುತ್ರಿ ಮೋನಿಷಾ ಪ್ರವೇಶಿಕೆಗೆ ರಂಗ ಸಜ್ಜಾಗಿದೆ. ಸಿಟಿ ಲೈಟ್ಸ್ ಸಿನಿಮಾದ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿರುವ ಮೋನಿಷಾ, ಸಾಕಷ್ಟು ಎಕ್ಸೈಟ್‌ಮೆಂಟ್ ಅನುಭವಿಸುತ್ತಿರುವುದಾಗಿ ಹೇಳಿಕೊಂಡರು.

'ತಂದೆ ಪ್ರಸಿದ್ಧ ನಟ. ಜೊತೆಗೆ ಈ ಸಿನಿಮಾದ ನಿರ್ದೇಶಕರು ಕೂಡ. ಹೀಗಾಗಿ ಮೊದಲ ಸಿನಿಮಾದ ಪ್ರಯಾಣ ಸುಲಭವಾಗಿರಲಿಲ್ಲ. ಪಾತ್ರಕ್ಕೆ ಏನೆಲ್ಲ ಅಗತ್ಯವಿತ್ತೋ... ಅದಷ್ಟೂ ನೀಡದ ಹೊರತು ಅವರು ಬಿಡುತ್ತಿರಲಿಲ್ಲ. ತುಂಬ ಶ್ರದ್ಧೆಯಿಂದ ಅಭಿನಯಿಸಿದ್ದೇನೆ' ಎನ್ನುತ್ತಾರೆ ಮೋನಿಷಾ.

ಹಳ್ಳಿಯಿಂದ ಪಟ್ಟಣಕ್ಕೆ ಬರುವವರ ಪಾಡು ಏನಾಗುತ್ತದೆ ಎಂಬುದನ್ನು ತೋರಿಸಲು ಮುಂದಾಗಿದ್ದಾರೆ ವಿಜಯ್. ಸದ್ಯ ಸಿಟಿ ಲೈಟ್ಸ್ ಚಿತ್ರದ ಹಾಡೊಂದನ್ನು ಬಿಡುಗಡೆ ಮಾಡಲಾಯ್ತು. ವಿಜಯ್ ನಿರ್ದೇಶಿಸಿದ್ದ ಸಲಗ, ಭೀಮ ಎರಡರಲ್ಲೂ ಅವುಗಳ ಹಾಡು ಹಿಟ್ ಆಗಿತ್ತು. ಸಿಟಿಲೈಟ್ಸ್‌ನಲ್ಲೂ ಆ ಪ್ರಯೋಗ ಮುಂದುವರಿಸಿದ್ದಾರೆ ವಿಜಯ್. ಅಂಕಿತ್ ಕುಮಾರ್ ಎಂಬ ರ್‍ಯಾಪರ್ ಹಾಡಿರುವ ಬಾವ ಬಾವ ಹಾಡು ನವ ಪೀಳಿಗೆಯ ಕೇಳುಗರಿಗೆ ಕಿಕ್ ಕೊಡುವ ನಿರೀಕ್ಷೆ ಚಿತ್ರತಂಡದ್ದು. ಚರಣ್ ರಾಜ್ ಚಿತ್ರದ ಸಂಗೀತ ನಿರ್ದೇಶಕ. ಸಿಟಿ ಲೈಟ್ಸ್ ಸಿನಿಮಾಗೆ ವಿನಯ್ ರಾಜ್‌ಕುಮಾರ್ ಹೀರೋ. 'ಚರಣ್ ವಿಶಿಷ್ಟವಾಗಿ ಸಂಗೀತ ಸಂಯೋಜಿಸುತ್ತಾರೆ. ಈ ಸಿನಿಮಾದಲ್ಲೂ ಅವರ ಮಾಂತ್ರಿಕತೆ ಮುಂದುವರಿದಿದೆ' ಎಂದರು ವಿನಯ್. ◆

ಸಿಂಧೂರ ಸಂಗಮ

ಒಂದು ಕಾಲವಿತ್ತು. ರಿಮೇಕ್ ಪ್ರಿಯ ನಿರ್ದೇಶಕರ ಅಚ್ಚುಮೆಚ್ಚಿನ ಸಂಗೀತ ನಿರ್ದೇಶಕರಾಗಿ ರಾಜೇಶ್ ರಾಮನಾಥ್ ಗುರುತಿಸಿಕೊಂಡಿದ್ದರು. ಪರಭಾಷಾ ಸಿನಿಮಾವನ್ನು ಆ ಸಿನಿಮಾದ ಮೂಲ ಟ್ಯೂನ್‌ನೊಂದಿಗೇ ಕನ್ನಡಕ್ಕೆ ಭಟ್ಟಿ ಇಳಿಸುತ್ತಿದ್ದ ನಿರ್ದೇಶಕರು, ರಾಜೇಶ್ ರಾಮನಾಥ್ ಬಿಟ್ಟು ಬೇರೆ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ಅಷ್ಟು ಅಚ್ಚುಕಟ್ಟಾಗಿ ಸಿನಿಮಾ ತಂಡದವರ ಆಶಯವನ್ನು ಪೂರ್ಣಗೊಳಿಸಿಕೊಡುತ್ತಿದ್ದರು ರಾಜೇಶ್ ರಾಮನಾಥ್. ರಿಮೇಕುಗಳು ಮರೆಯಾದ ಮೇಲೆ ರಾಮನಾಥರು ಬಹುತೇಕ ಮರೆಯಾಗಿದ್ದರು.

ಈಗ ಮತ್ತೆ ಮರಳಿದ್ದಾರೆ ರಾಜೇಶ್ ರಾಮನಾಥ್. ಹೊಸ ಹೊಸ ಟ್ಯೂನ್‌ಗಳ ಮೂಲಕ ಈಗಿನ ಜನರೇಷನ್ ಕೇಳುಗರನ್ನು ಸೆಳೆಯುತ್ತೇನೆ ಎಂಬ ಆತ್ಮವಿಶ್ವಾಸ ಅವರದ್ದು. ಶ್ರೀಮತಿ ಸಿಂಧೂರ ಎಂಬ ಸಿನಿಮಾಗೆ ರಾಜೇಶ್ ಸಂಗೀತ ನೀಡಿದ್ದಾರೆ.

ಈ ಹಿಂದೆ ಸಾಕಷ್ಟು ಚಿತ್ರಗಳನ್ನು ನಿರ್ದೇಶನ ಮಾಡಿರುವ ಅನಂತರಾಜು 'ಶ್ರೀಮತಿ ಸಿಂಧೂರ' ಮೂಲಕ ಕುಂಕುಮ ಲೇಪಿತರಾಗಿ ಮತ್ತೆ ಅಖಾಡಕ್ಕಿಳಿದಿದ್ದಾರೆ. ನಟನೆಯಲ್ಲಿ ಅವರಿಗೆ ವಿಜಯ ರಾಘವೇಂದ್ರ ಜೋಡಿ. 'ಈಗೆಲ್ಲ ಯಾರೇ ಕಥೆ ಹೇಳಲು ಮನೆಗೆ ಬಂದರೂ ಹಾರರ್–ಥ್ರಿಲ್ಲರ್ ಎಂದೇ ಬೆದರಿಸುತ್ತಾರೆ. ಆದರೆ ಈ ಚಿತ್ರದ ನಿರ್ಮಾಪಕರಿಗೆ ಕೌಟುಂಬಿಕ ಸಿನಿಮಾ ಮಾಡಬೇಕೆನ್ನುವ ಸದಾಶಯ. ಹೀಗಾಗಿ ಅಂಥದ್ದೇ ಹಿತವಾದ ಕಥೆಯನ್ನು ರೆಡಿ ಮಾಡಿಕೊಂಡು ಅಪ್ರೋಚ್ ಮಾಡಿದರು. ಒಪ್ಪಿಕೊಂಡೆ' ಎಂದರು ವಿಜಯ್ ರಾಘವೇಂದ್ರ. ಈ ಚಿತ್ರ ಗೆದ್ದರೆ ವಿಜಯ ರಾಘವೇಂದ್ರ ಫ್ಯಾಮಿಲಿ ಸ್ಟಾರ್ ಆಗಿ ಕಂಗೊಳಿಸಬಹುದು.

ಡಿ.ಎನ್.ನಾಗೀರೆಡ್ಡಿ ಈ ಚಿತ್ರದ ನಿರ್ಮಾಪಕ. 'ಈ ಸಿನಿಮಾ ಗೆದ್ದು ದುಡ್ಡು ಮಾಡಿದರೆ ಅದನ್ನು ಕಾರ್ಮಿಕರೆಲ್ಲರಿಗೂ ಹಂಚುತ್ತೇನೆ' ಎಂದು ಘೋಷಿಸಿದರು ರೆಡ್ಡಿ. ಅದು ನಿಜವೇ ಆದಲ್ಲಿ, ಈ ಚಿತ್ರಕ್ಕೆ ಕೆಲಸ ಮಾಡಿದವರೆಲ್ಲ ಮೊದಲ ಶೋನಿಂದಲೇ 'ಕಲೆಕ್ಷನ್ ಎಷ್ಟಾಯ್ತು?' ಎಂದು ನಿರ್ಮಾಪಕರ ಬೆನ್ನು ಬೀಳಬಹುದು, ಸಾಧ್ಯತೆಗಳಿವೆ.

ಪ್ರಿಯಾ ಹೆಗಡೆ ಈ ಚಿತ್ರದ ನಾಯಕಿ ಎಂದ ನಿರ್ದೇಶಕ ಅನಂತರಾಜು, ಮೂಡಿಗೆರೆ, ಸಕಲೇಶಪುರ, ಚಿಕ್ಕಮಗಳೂರಿನಲ್ಲಿ '...ಸಿಂಧೂರ' ಚಿತ್ರೀಕರಣ ನಡೆದಿದೆ ಎಂಬ ಮಾಹಿತಿ ನೀಡಿದರು. ◆

ಲವ್ ಸೀಸನ್ಸ್ ಗಾನಾಬಜಾನಾ

ಮಳೆಯಾಗೋ ಮೊದಲೇ ಹಾಡು ಬಿಡುಗಡೆ

ಯುವ ನಿರ್ದೇಶಕ ಕೃತ್ವಿಕ್ ಆ್ಯಕ್ಷನ್ ಕಟ್ ಹೇಳಿರುವ ಲವ್ ಸೀಸನ್ಸ್ ಸಿನಿಮಾದ ಮೊದಲ ಲಿರಿಕಲ್ ವಿಡಿಯೋ ಸಾಂಗ್ ಬಿಡುಗಡೆಯಾಗಿದೆ. ಎನ್.ಆರ್ ಸ್ಟುಡಿಯೋ ಯೂಟ್ಯೂಬ್ ಚಾನೆಲ್‌ನಲ್ಲಿ ಮಳೆಯಾಗೋ ಮೊದಲೇ ಕೊಡೆ ಹಿಡಿದು ಬರುವೆ, ನಗು ಮುಗಿವಾ ಮೊದಲೇ ಹೊಸ ಖುಷಿಯ ಕೊಡುವೆ ಎಂಬ ಸಾಲುಗಳನ್ನು 'ಕಾಂತಾರ' ಖ್ಯಾತಿಯ ಪ್ರಮೋದ್ ಮರವಂತೆ ಬರೆದಿದ್ದಾರೆ. ವೀರ್ ಸಮರ್ಥ್ ಸಂಗೀತ ಸಂಯೋಜಿಸಿರುವ ಈ ಗೀತೆಗೆ ಪ್ರಜ್ಞಾ ಮರಾಠೆ ಮತ್ತು ಅರ್ಮಾನ್ ಮಲಿಕ್ ಧ್ವನಿಯಾಗಿದ್ದಾರೆ.

ಎನ್.ಆರ್ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಎನ್.ಆರ್.ಮಂಜುನಾಥ (ನೀಲೇರಿ) ಈ ಚಿತ್ರವನ್ನು ನಿರ್ಮಿಸಿದ್ದಾರೆ. ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಮುಂತಾದವರು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಅವಿನಾಶ್ ಶಾಸ್ತ್ರಿ ಛಾಯಾಗ್ರಹಣ, ಮಧು ತುಂಬಕೆರೆ ಸಂಕಲನ, ಭಜರಂಗಿ ಮೋಹನ್ ನೃತ್ಯ ಸಂಯೋಜನೆಯಿರುವ ಈ ಚಿತ್ರದಲ್ಲಿ ಮುಕುಂದ ರಾಮಸ್ವಾಮಿ ನಾಯಕನಾಗಿ ನಟಿಸಿದ್ದಾರೆ. ದಿಯಾ ಕೀರ್ತಿ, ಚಂದನಾ ಗೌಡ ಮತ್ತು ಶ್ವೇತಾ ಕೊಗ್ಲೂರು ನಾಯಕಿಯರಾಗಿ ಜೊತೆಯಾಗಿದ್ದಾರೆ. ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರು ಚಿತ್ರದ ತಾರಾಗಣ. ◆

50ರ ಖುಷೀಲಿ ಲವ್ ಮಾಕ್ಟೇಲ್

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿದ್ದ ಲವ್ ಮಾಕ್ಟೇಲ್ 3 ಯಶಸ್ವಿಯಾಗಿ 50 ದಿನ ಪೂರೈಸಿದೆ. ಧುರಂಧರ್ 2 ಎಂಬ ದೈತ್ಯ ಸಿನಿಮಾ ಎದುರು ಬಿಡುಗಡೆಯ ದಿನದಿಂದಲೂ ದೊಡ್ಡ ಮಟ್ಟದಲ್ಲಿ ಪ್ರೇಕ್ಷಕರನ್ನು ಚಿತ್ರಮಂದಿರಗಳತ್ತ ಕರೆತರುವಲ್ಲಿ ಕೃಷ್ಣ ಆ್ಯಂಡ್ ಟೀಂ ಸಾಕಷ್ಟು ಶ್ರಮ ವಹಿಸಿತ್ತು. ಅದರ ಫಲವಾಗಿ 50 ದಿನಗಳನ್ನು ಥಿಯೇಟರ್‌ಗಳಲ್ಲಿ ಪೂರೈಸುವುದರ ಜತೆಗೆ ಬಾಕ್ಸಾಫೀಸ್‌ನಲ್ಲೂ ಕಮಾಲ್ ಮಾಡಿದೆ.

ಈ ಸಿನಿಮಾ ಡಾರ್ಲಿಂಗ್ ಕೃಷ್ಣ ಕೆರಿಯರ್‌ನಲ್ಲೇ ಭರ್ಜರಿ ಓಪನಿಂಗ್ ಪಡೆದುಕೊಂಡ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ವಿಶೇಷ. 2026ರ ಮೊದಲ ಸೂಪರ್ ಹಿಟ್ ಚಿತ್ರ ಲವ್ ಮಾಕ್ಟೇಲ್ 3 ಎಂಬುದು ಮತ್ತೊಂದು ವಿಶೇಷ. ಇಂಥದ್ದೊಂದು ಬೃಹತ್ ಗೆಲುವಿಗೆ ಕಾರಣರಾದ ಪ್ರೇಕ್ಷಕರಿಗೆ ಧನ್ಯವಾದ ಸಲ್ಲಿಸುತ್ತಲೇ, ಡಾರ್ಲಿಂಗ್ ಕೃಷ್ಣ ಲವ್ ಮಾಕ್ಟೇಲ್ ಸರಣಿಯ ಹ್ಯಾಟ್ರಿಕ್ ಗೆಲುವನ್ನು ಸಂಭ್ರಮಿಸಿದ್ದಾರೆ. ಕ್ರಿಸ್‌ಮಿ ಬ್ಯಾನರ್ ಅಡಿಯಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ◆

ಡೇರಿಂಗ್ ಧೃತಿ

ಜಗದೀಶ್ ಎಂ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಛಾಯಾಗ್ರಹಣ ಮಾಡಿ ನಿರ್ದೇಶಿಸಿ, ನಿರ್ಮಾಣವನ್ನೂ ಮಾಡಿರುವ ಧೃತಿ ಸಿನಿಮಾ ಈ ವಾರ ತೆರೆ ಕಾಣುತ್ತಿದೆ. ಗೀತಾ ದಾಮೋದರನ್ ಈ ಚಿತ್ರದ ಸಹ ನಿರ್ಮಾಪಕರಾಗಿ ಕೈ ಜೋಡಿಸಿದ್ದಾರೆ.

'ಶೋಷಣೆಗೆ ಒಳಗಾದ ಹೆಣ್ಣುಮಗಳೊಬ್ಬಳ ಸುತ್ತ ಧೃತಿ ಚಿತ್ರದ ಕಥೆ ಸಾಗುತ್ತದೆ. ಈ ಚಿತ್ರದಲ್ಲಿ ಶೋಷಣೆಯನ್ನು ವಿಜೃಂಭಿಸಿಲ್ಲ. ಸಮಸ್ಯೆಗೆ ಪರಿಹಾರವನ್ನು ಹೇಳಿದ್ದೇವೆ' ಎಂಬುದು ಜಗದೀಶ್ ಅನಿಸಿಕೆ. ಆಂಚಲ್ ಗೌಡ, ಪ್ರಶಾಂತ್ ಸೊಪ್ಪಿಮಠ, ಭಾವನಾ ರೆಡ್ಡಿ, ಮನೋಜ್ ಕುಮಾರ್, ಧನುಷ್, ಪ್ರದೀಪ್, ದೀಪಕ್, ಮಧು ಮಂದಗೆರೆ ಇತರರು ತಾರಾಬಳಗದಲ್ಲಿದ್ದಾರೆ. ◆

ಉಧೋ ಉಧೋ ಯಲ್ಲಮ್ಮ...

ಅದೃಷ್ಟ ಹೇಗೇಗೋ ಖುಲಾಯಿಸುತ್ತದೆ ಎಂಬುದು ದಿಟವೇ. ಇಲ್ಲದೆ ಹೋದರೆ, ಬರೀ ಹಾಡೊಂದನ್ನು ಕೇಳಿಸಿ ನಿರ್ಮಾಪಕರನ್ನು ಬುಟ್ಟಿಗೆ ಹಾಕಿಕೊಳ್ಳಲು ಸಾಧ್ಯವೇ?

ಇದೇನು ಅರ್ಥವಾಗಬೇಕೆಂದರೆ, ಪೂರ್ತಿ ಕಥೆ ಕೇಳಬೇಕು. ಶಿಖಂಡಿ ಎಂಬ ಚಿತ್ರವೊಂದು ಸಿದ್ಧವಾಗಿದೆ. ಮೇ 15ಕ್ಕೆ ಅದರ ಬಿಡುಗಡೆ. ಈ ಸಿನಿಮಾವನ್ನು ನಿರ್ದೇಶನ ಮಾಡಿರುವುದು ಗುರುಮೂರ್ತಿ. ಇವರು ಇದಕ್ಕೂ ಮೊದಲು ಮಾರಕಾಸ್ತ್ರ ಎಂಬ ಸಿನಿಮಾ ಮಾಡಿದ್ದಾರಂತೆ. ಆ ಚಿತ್ರವಾದ ಮೇಲೆ ಮತ್ತೊಂದು ಚಿತ್ರ ಮಾಡುವ ಕನಸು ಹೊತ್ತು ಗುರುಮೂರ್ತಿ ನಿರ್ಮಾಪಕರ ಮನೆಗೆ ಎಡತಾಕುತ್ತಿದ್ದರಂತೆ. ಹೀಗೆ ಅವರು ಹೋಗಿ ಮೀಟ್ ಮಾಡಿದ್ದು ಪೊಲ್ಲಾ ಪ್ರವೀಣ್ ಕುಮಾರ್ ಎಂಬ ಬಂಡವಾಳದಾರರನ್ನು. ಇವರು ಏನೇ ಕಥೆ ಹೇಳಿದರೂ ಚಿತ್ರ ನಿರ್ಮಾಣದ ಬಗ್ಗೆ ಪ್ರವೀಣ್ ಕುಮಾರ್ ಅವರಿಗೆ ಆಸಕ್ತಿ ಇರದಿದ್ದರಿಂದ ಮುಂದೆ ನೋಡೋಣ ನೋಡೋಣ ಎನ್ನುತ್ತ ನಿರ್ದೇಶಕರನ್ನು ಸಾಗ ಹಾಕಿದ್ದಾರೆ. ಆದರೆ ಪಟ್ಟು ಬಿಡದ ನಿರ್ದೇಶಕ ಗುರುಮೂರ್ತಿ, ಎರಡು ತಿಂಗಳ ನಂತರ ಮತ್ತೆ ಹೋಗಿದ್ದಾರೆ. ಈ ಬಾರಿ ಹೋದವರು ಯಲ್ಲಮ್ಮ ಎಂಬ ಒಂದು ಹಾಡನ್ನು ರೆಡಿ ಮಾಡಿಸಿಕೊಂಡು ತೆಗೆದುಕೊಂಡು ಹೋಗಿದ್ದರಂತೆ. ಯಾವಾಗ ನಿರ್ಮಾಪಕರು ಯಲ್ಲಮ್ಮನ ಹಾಡು ಕೇಳಿದರೋ... ಇದ್ದಕ್ಕಿದ್ದಂತೆ ದೈವಾಹನೆಯಾದಂತಾಗಿ 'ಆಯ್ತು ನಡೀರಿ, ಸಿನಿಮಾ ಮಾಡಿ ಹೋಗಿ' ಅಂದರಂತೆ. ಇದನ್ನೇ ಹೇಳಿದ್ದು ಯಾರ್‍ಯಾರ ಅದೃಷ್ಟ ಹೇಗೆಲ್ಲ ಖುಲಾಯಿಸುತ್ತದೆಯೋ ನೋಡಿ ಎಂದು...

ಮಹಾಭಾರತದ ಶಿಖಂಡಿ ಪಾತ್ರವೇ ಸಿನಿಮಾದ ಕಥಾಸಾರ

ಮಹಾಭಾರತದಲ್ಲಿ ಬರುವ ಶಿಖಂಡಿ ಪಾತ್ರವನ್ನು ಆಧರಿಸಿ ಕಥೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು ನಿರ್ದೇಶಕ.

ಯುವರಾಜ್ ಮತ್ತು ಖ್ಯಾತಿ ಎಂಬ ಇಬ್ಬರು ಹೊಸ ಕಲಾವಿದರು ಚಿತ್ರದ ಪ್ರಧಾನ ಭೂಮಿಕೆ. ನಿಕಿತಾ ಸ್ವಾಮಿ, ನೀತು, ರಾಘು ಮುಂತಾದವರು ಇವರಿಗೆ ಸಾಥ್ ನೀಡಿದ್ದಾರೆ. ಮಂಜು ಕವಿ ಶಿಖಂಡಿ ಸಿನಿಮಾಕ್ಕೆ ಸಂಗೀತ ನೀಡಿದ್ದು, ಸದ್ಯಕ್ಕೆ ಈ ಚಿತ್ರದ ಹಾಡು ಮತ್ತು ಟ್ರೇಲರ್ ಬಿಡುಗಡೆಯಾಗಿದೆ. ◆

ದೇವತೆಗೆ ರಾಗಸಿಂಚನ

ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಸಾಥ್

ನಾರಿ ಮುನಿದರೆ ಮಾರಿ ಎಂಬುದನ್ನು ಎಲ್ಲರೂ ಕೇಳಿದ್ದೇವೆ. ಅದನ್ನೇ ಹಣೆಗೊತ್ತಿಕೊಂಡು ನವೀನ್ ಮಹಾದೇವ್ ಎಂಬುವವರು ಮೃತ್ಯು ದೇವತೆ ಎಂಬ ಚಿತ್ರ ಸಿದ್ಧಪಡಿಸಿದ್ದಾರೆ. ಹೆಣ್ಣು ಅಬಲೆ ಎಂದುಕೊಂಡು ಆಕೆಯನ್ನು ದುರುಪಯೋಗ ಮಾಡಿಕೊಳ್ಳಲು ಮುಂದಾದರೆ, ಆಕೆ ಅಂಥವರ ಎದೆ ಬಗೆದು ರಕ್ತ ಕುಡಿಯುವುದು ನಿಶ್ಚಿತ ಎಂಬುದನ್ನು ತೋರಿಸುವುದು ನಿರ್ದೇಶಕರ ಉದ್ದೇಶ.

'ನಮ್ಮ ಸಿನಿಮಾದಲ್ಲಿ ಮೂರು ಮಹಿಳಾ ಪಾತ್ರಗಳಿವೆ. ತಮ್ಮ ಪಾಡಿಗೆ ತಾವಿದ್ದಂಥ ಆ ಅಮಾಯಕ ಜೀವಿಗಳ ಮೇಲೆ ದುರುಳರ ಕಣ್ಣು ಬೀಳುತ್ತದೆ. ಅನ್ಯಾಯ, ದೌರ್ಜನ್ಯ, ಲೈಂಗಿಕ ಶೋಷಣೆಗಳು ಮಿತಿ ಮೀರಿದಾಗ ಆ ಹೆಣ್ಣು ಮಕ್ಕಳು ಕೆರಳಿ ನಿಲ್ಲುತ್ತಾರೆ. ದುಷ್ಟರನ್ನು ಸದೆಬಡಿಯುತ್ತಾರೆ. ಹೆಣ್ಣು ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಲು ಮೃತ್ಯು ದೇವತೆ ಸಿನಿಮಾ ಮಾಡಿದ್ದೇನೆ' ಎಂದರು ನಿರ್ದೇಶಕ ನವೀನ್.

ಬಾಯಿ ಮಾತಿನ ಸಂದೇಶ ಯಾರು ಬೇಕಾದರೂ ಹೇಳುತ್ತಾರೆ. ಆದರೆ 'ಸಿನಿಮಾ ಮೂಲಕವೇ ನಾನು ಸಂದೇಶ ಸಾರುತ್ತೇನೆ' ಎಂದು ನಿರ್ಧರಿಸಿದ ಈ ನಿರ್ದೇಶಕರು, ತಾವೇ ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿ, ನಟನೆಯನ್ನು ಮಾಡಿ ಮೃತ್ಯು ದೇವತೆಯನ್ನು ಬಡಿದೆಬ್ಬಿಸಿರುವುದು ಮೆಚ್ಚತಕ್ಕ ಸಂಗತಿಯೇ...

ಮೇ 22ರಂದು ಮೃತ್ಯು ದೇವತೆ ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನ ಹಾಡುಗಳ ಸಂತರ್ಪಣೆಯಾಗಿಬಿಡಲಿ ಎಂದು ಇತ್ತೀಚೆಗೆ ಸಾಂಗ್ ರಿಲೀಸ್ ಮಾಡಿಸಲಾಯಿತು. ನಾಗದೇವತೆ, ಗ್ರಾಮದೇವತೆ ಅಂತೆಲ್ಲ ಈ ಮೊದಲೇ ಸಾಕಷ್ಟು ದೈವ ಸಾಕ್ಷಾತ್ಕಾರಗಳನ್ನು ತೋರಿಸಿರುವ ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಅವರನ್ನು, ಮೃತ್ಯು ದೇವತೆ ಆಡಿಯೋ ಸಮಾರಂಭಕ್ಕೆ ಅತಿಥಿಯಾಗಿ ಆಹ್ವಾನಿಸಲಾಗಿತ್ತು.

ಈ ಚಿತ್ರದ ಮುಖ್ಯ ಪಾತ್ರದಲ್ಲಿ ಹಿಮಶ್ರೀ, ಡಯಾನ ಮತ್ತು ಹಿರಿಯ ನಟಿ ವಿನಯ ಪ್ರಕಾಶ್ ಅಭಿನಯಿಸಿದ್ದಾರೆ. ಹೆಣ್ಣಿನ ಸಹನೆಯ ಕಟ್ಟೆ ಒಡೆದಾಗ ಎಂಥ ಘನ ಘೋರ ಕೋಡಿ ಸಂಭವಿಸುತ್ತದೆ ಎಂಬುದನ್ನು ಅವರು ಸಾಕ್ಷಾತ್ ದರ್ಶನ ಮಾಡಿಸಲಿದ್ದಾರೆ. ◆

ಭೀಕರ ಅಪಘಾತ : ಓರ್ವ ಸಾವು

ಪಣಜಿ(ಮಾಪ್ಸಾ): ಗೋವಾದ ಸಂಗೋಲ್ಡಾದ ಚೋಗಮ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಯುವಕನೊಬ್ಬ ಗುರುವಾರ ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ್ದಾನೆ.

ಮೃತನನ್ನು ವಿಕಾಸ್ ಸೋಲತ್ (ವಯಸ್ಸು 24, ಪುಣೆಯ ಬಾರಾಮತಿ ನಿವಾಸಿ) ಎಂದು ಗುರುತಿಸಲಾಗಿದೆ.ವಿಕಾಸ್ ಸೋಲತ್ ಚೋಗಮ್ ರಸ್ತೆಯಲ್ಲಿ ಸವಾರಿ ಮಾಡುವಾಗ ತನ್ನ ವಾಹನದ ನಿಯಂತ್ರಣ ಕಳೆದುಕೊಂಡರು.

ನಂತರ ಬೈಕ್ ರೆಸ್ಟೋರೆಂಟ್‌ನ ರಕ್ಷಣಾತ್ಮಕ ಗೋಡೆಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ಪರಿಣಾಮವಾಗಿ ವಿಕಾಸ್ ಗಂಭೀರವಾಗಿ ಗಾಯಗೊಂಡಿದ್ದಾನೆ. ಸ್ಥಳೀಯರು ತಕ್ಷಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಿದರು. ಚಿಕಿತ್ಸೆಗೆ ಮುನ್ನವೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆಯನ್ನು ಪ್ರಾರಂಭಿಸಿದ್ದಾರೆ.

ತರಬೇತಿಗೆ ಅರ್ಜಿ ಆಹ್ವಾನ

ಬಳ್ಳಾರಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ವಿಭಾಗವು ಐ.ಟಿ.ಐ ಉತ್ತೀರ್ಣರಾದ ಅಭ್ಯರ್ಥಿಗಳಿಂದ ತಾಂತ್ರಿಕ ಶಿಷ್ಯವೇತನ (ಅಪ್ರೆಂಟಿಸ್) ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಬಳ್ಳಾರಿ ವಿಭಾಗದ ಘಟಕ–1, 2, 3 ಹಾಗೂ ಕುರುಗೋಡು, ಸಿರುಗುಪ್ಪ, ಸಂಡೂರು ಘಟಕಗಳಲ್ಲಿ ಎಲೆಕ್ಟ್ರಿಷಿಯನ್–08, ಡೀಸೆಲ್ ಮೆಕ್ಯಾನಿಕ್–20, ಮೋಟಾರ್ ವೆಹಿಕಲ್ ಮೆಕ್ಯಾನಿಕ್–15 ಸೇರಿ ಒಟ್ಟು 43 ಸ್ಥಾನಗಳಿಗೆ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಆಸಕ್ತ ಅಭ್ಯರ್ಥಿಗಳು ಮೊದಲು ಕೇಂದ್ರ ಸರ್ಕಾರದ ಅಧಿಕೃತ ಪೋರ್ಟಲ್‌ಗಳಾದ www.apprenticeship.gov.in ಅಥವಾ www.ncvtmis.com ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳು ಮಾತ್ರ ನೇರ ಸಂದರ್ಶನಕ್ಕೆ ಅರ್ಹರಾಗಿರುತ್ತಾರೆ.

ಮೇ 25 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಿರುಗುಪ್ಪ ರಸ್ತೆಯ ಕೆ.ಕೆ.ಆರ್.ಟಿ.ಸಿ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಸಂದರ್ಶನದ ಮೂಲ ದಾಖಲಾತಿಗಳ ಪರಿಶೀಲನೆ ಪ್ರಕ್ರಿಯೆ ನಡೆಯಲಿದೆ.

ಅಗತ್ಯವಿರುವ ದಾಖಲೆಗಳು: ಐ.ಟಿ.ಐ ಮೂಲ ಅಂಕಪಟ್ಟಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಇತ್ತೀಚಿನ 3 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಬ್ಯಾಂಕ್ ಪಾಸ್‌ಬುಕ್ ಪ್ರತಿ (ಆಧಾರ್ ಲಿಂಕ್ ಆಗಿರಬೇಕು), ಆನ್‌ಲೈನ್ ನೋಂದಣಿ ಪ್ರತಿ, ಇ–ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆ. ಮಾಹಿತಿಗಾಗಿ ಅಭ್ಯರ್ಥಿಗಳು ಬಳ್ಳಾರಿಯ ವಿಭಾಗೀಯ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

13 ರಂದು ಪಿಂಚಣಿ ಅದಾಲತ್

ಬಳ್ಳಾರಿ: ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಮೇ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪ ಹಾಗೂ ಇತ್ಯಾದಿಗಳನ್ನು ಅಂಚೆ ಪತ್ರದ ಮೂಲಕ ಮೇ 10 ರೊಳಗಾಗಿ ರವಾನಿಸಬಹುದಾಗಿದೆ. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಕ್ಷೇತ್ರಿಯ ಭವಿಷ್ಯ ನಿಧಿ ಆಯುಕ್ತ ಕೆ.ವಿ ಪ್ರವೀಣ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಠಾತ್ ದಾಳಿ : ಓರ್ವ ಗಂಭಿರ

ಪಣಜಿ(ಮಾಪ್ಸಾ): ಆಘಾತಕಾರಿ ಘಟನೆಯೊಂದರಲ್ಲಿ, ಗೋವಾದ ಮಾಪ್ಸಾ ನಗರದ ಅಲಂಕಾರ್ ಥಿಯೇಟರ್ ಪ್ರದೇಶದಲ್ಲಿ ಮಧ್ಯರಾತ್ರಿ ಹಜಾರೆ ಫಾಸ್ಟ್ ಫುಡ್ ಅಂಗಡಿ ಮೇಲೆ ನಾಲ್ವರು ಹಠಾತ್ತನೆ ದಾಳಿ ನಡೆಸಿದ್ದಾರೆ. ಈ ದಾಳಿಯಲ್ಲಿ ರಾಹುಲ್ ಹಲ್ದಣಕರ್ (29 ವರ್ಷ, ಅನಭಟ್ ನಿವಾಸಿ) ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಬುಧವಾರ ಮಧ್ಯರಾತ್ರಿ 12.30 ರ ಸುಮಾರಿಗೆ, ನಾಲ್ವರು ಶಂಕಿತರು ಫಾಸ್ಟ್ ಫುಡ್ ಅಂಗಡಿಗೆ ಬಂದು ಜಗಳವಾಡಲು ಮತ್ತು ಅವರನ್ನು ಹೊಡೆಯಲು ಪ್ರಾರಂಭಿಸಿದರು. ದಾಳಿಯಲ್ಲಿ ರಾಹುಲ್ ಹಲ್ದಣಕರ್ ಗಂಭೀರವಾಗಿ ಗಾಯಗೊಂಡಿದ್ದರು. ಈ ಪ್ರದೇಶದಲ್ಲಿ ಸ್ವಲ್ಪ ಸಮಯದವರೆಗೆ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿತ್ತು.

ಘಟನೆಯ ನಂತರ, ಗಾಯಗೊಂಡ ರಾಹುಲ್ ಅವರನ್ನುತಕ್ಷಣಚಿಕಿತ್ಸೆಗಾಗಿಆಸ್ಪತ್ರೆಗೆದಾಖಲಿಸಲಾಯಿತು. ಪೊಲೀಸರು ಈ ಕುರಿತು ಪ್ರಕರಣ ದಾಖಲಿಸುವಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಇದರಿಂದಾಗಿ ನಾಗರಿಕರಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ; ಆರೋಪಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆ ಇದೆ. ಈ ಘಟನೆಯ ಬಗ್ಗೆ ಮಾಪ್ಸಾ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಎಳೆನೀರು, ಕಬ್ಬಿನ ಹಾಲು, ಹಣ್ಣಿನ ಜ್ಯೂಸ್‌ಗೂ ಪರ್ಯಾಯ । ರಾಸಾಯನಿಕ ಸಿಂಪಡಣೆ ಇಲ್ಲದೇ ನೈಸರ್ಗಿಕ ಬೆಳೆ । ಔಷಧಿಯ ಗುಣ ಹೊಂದಿರುವುದು

ಬೆಂಕಿ ಬಿಸಿಲಲ್ಲಿ ಉದರ ನೆತ್ತಿ ತಂಪಾಗಿಸುವ ತಾಳೆಹಣ್ಣು

■ ದ್ಯಾಮನಗೌಡ ಪಾಟೀಲ್

ಸಂ.ಕ. ವಿಶೇಷ

ಕಂಪ್ಲಿ: ಬೇಸಿಗೆಯಲ್ಲಿ ದಾಹ ತಣಿಸಲು ಜನ ಎಳೆನೀರು, ಕಬ್ಬಿನ ಹಾಲು ಹಾಗೂ ವಿವಿಧ ಹಣ್ಣಿನ ಜ್ಯೂಸ್‌ನ ಮೊರೆ ಹೋಗುವುದು ಸಾಮಾನ್ಯ. ಆದರೆ ಈ ಬಾರಿ ತಾಳೆಹಣ್ಣಿಗೆ ಬೇಡಿಕೆ ಹೆಚ್ಚಾಗಿದೆ..

ತಾಲೂಕಿನ ಕೆಲ ಹಳ್ಳಿಗಳು ಹಾಗೂ ಸಮೀಪದ ಬುಕ್ಕಸಾಗರ ಪ್ರದೇಶದ ಹೊರವಲಯ ಹಾಗೂ ಸುತ್ತಮುತ್ತ ತಾಳೆ ಹಣ್ಣುಗಳ ಗಿಡಗಳು ಹೇರಳವಾಗಿ ಬೆಳೆದಿವೆ. ಈ ಗ್ರಾಮದ ಸುತ್ತ ಮುತ್ತಲಿನಿಂದ ವ್ಯಾಪಾರಸ್ಥರು ಖರೀದಿಸಿ ಕಂಪ್ಲಿ ಸೇರಿದಂತೆ ವಿವಿಧ ನಗರಕ್ಕೆ ಪ್ರದೇಶಗಳಿಗೆ ತಂದು ವ್ಯಾಪಾರಿ ಮಾಡಿ ಒಂದಿಷ್ಟು ಹಣ ಸಂಪಾದಿಸುತ್ತಿದ್ದಾರೆ.

ಪಟ್ಟಣದ ಹಳೇ ಬಸ್ ನಿಲ್ದಾಣ, ಕೊಟ್ಟಾಲ್ ರಸ್ತೆ, ಡಾ.ರಾಜಕುಮಾರ ಮುಖ್ಯರಸ್ತೆ ಸೇರಿ ಇತರ ಕಡೆಗಳಲ್ಲಿ ಸಾಲು ಸಾಲಾಗಿ ತಾಳೆ ಹಣ್ಣಿನ ವ್ಯಾಪಾರ ನಡೆಯುತ್ತಿದೆ. ಬಿರು ಬಿಸಿಲಿನ ಪ್ರಖರತೆಗೆ ಬಸವಳಿದ ಜನತೆಗೆ ತಂಪು ನೀಡುವ ತಾಳೆ ಹಣ್ಣು ಮಾರುಕಟ್ಟೆಗೆ ಬಂದಿದೆ. ಬೆಲೆ ಮಾತ್ರ ದುಬಾರಿಯಾಗಿದೆಯಾದರೂ, ದೇಹಕ್ಕೆ ತಂಪು ನೀಡುವ ತಾಳೆಹಣ್ಣನ್ನು ಸಾರ್ವಜನಿಕರು ಖರೀದಿಸುತ್ತಿದ್ದಾರೆ.

ಕಂಪ್ಲಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಬಿರು ಬಿಸಿಲಿನಿಂದ ಬಸವಳಿದ ದೇಹಕ್ಕೆ ತಂಪು ನೀಡುವ ತಾಳೆ ಹಣ್ಣು ಮಾರಾಟ ಮಾಡುತ್ತಿರುವುದು.

ಬಿರುಸಿನ ಮಾರಾಟ

ವಿಜಯನಗರ ಜಿಲ್ಲೆಯ ಕಂಪ್ಲಿ ಸಮೀಪದ ಬುಕ್ಕಸಾಗರ, ಹಗರಿ ಬೊಮ್ಮನಹಳ್ಳಿ ತಾಲೂಕುಗಳಿಂದ ತಂದಿರುವ ತಾಳೆ ಹಣ್ಣುಗಳನ್ನು ಬಿರುಸಿನಿಂದ ಮಾರಾಟ ಮಾಡುತ್ತಿದ್ದಾರೆ. ತಾಲ್ಲೂಕಿನ ರಾಮಸಾಗರ, ಹಂಪಾದೇವನಹಳ್ಳಿ, ಸುಗ್ಗೇನಹಳ್ಳಿ ಸೇರಿದಂತೆ ತುಂಗಭದ್ರಾ ನದಿ ತೀರ ಮತ್ತು ಮಾಗಾಣಿ ಜಮೀನುಗಳ ಬದುವಿನಲ್ಲಿ ನೈಸರ್ಗಿಕವಾಗಿ ಬೆಳೆದ ತಾಳೆ ಮರಗಳಿಂದ ಹಣ್ಣುಗಳನ್ನು ಕಿತ್ತು ತಂದು ಮಾಡುತ್ತಿದ್ದಾರೆ.

ಕೀಳುವುದು ದುಸ್ತರ :

ಕಾಡಿನಭಾಗದಲ್ಲಿತಾಳೆಗಿಡಗಳು ಇರುವುದರಿಂದ ಚಿರತೆಗಳ ಸಂಖ್ಯೆಯೂ ಹೆಚ್ಚಾಗಿರುವುದರಿಂದ ಬೆಳಗಿನ ಜಾವದಲ್ಲಿ ತಾಳೆಹಣ್ಣು ಕೀಳುವುದು ದುಸ್ತರವಾಗಿದೆ. ಪ್ರಾಣದ ಭಯದಲ್ಲಿಯೇ ತಾಳೆಹಣ್ಣು ಕಿತ್ತು ತರಬೇಕಿದೆ. ಈ ಭಾಗದಲ್ಲಿ ಕಾಡು ಪ್ರಾಣಿಗಳಿಂದಾಗಿ ಕಾಡಿಗೆ ಹೋಗುವುದು ಅಸಾಧ್ಯವಾಗಿರುವುದರಿಂದ ದೂರದ ಹಗರಿಬೊಮ್ಮನಹಳ್ಳಿಯಿಂದ ತಾಳೆ ಹಣ್ಣುಗಳನ್ನು ತರುತ್ತಿರುವುದರಿಂದ ಒಂದು ಹಣ್ಣನ್ನು 30 ರೂಗಳಿಗೆ ಮಾರಾಟಮಾಡಲಾಗುತ್ತಿದೆ. ರಾಸಾಯನಿಕದ ಸಿಂಪಡಣೆಯಿಲ್ಲದೆ ನೈಸರ್ಗಿಕವಾಗಿ ಬೆಳೆಯುವ ತಾಳೆಹಣ್ಣು ಔಷಧಿಯ ಗುಣಗಳನ್ನು ಹೊಂದಿದೆ. ಯಾವುದೇ ರಾಸಾಯನಿಕದ ಸ್ಪರ್ಷವಿಲ್ಲದೇ ಹಣ್ಣಾಗುತ್ತಿರುವುದರಿಂದ ಹಾಗೂ ಬಿಸಿಲ ಸಮಯದಲ್ಲಿ ದೇಹಕ್ಕೆ ತಂಪನ್ನು ನೀಡುವ ಹಣ್ಣಾಗಿರುವುದರಿಂದ ಇದಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಅಧಿಕವಾಗಿದೆ.

ಆಟೋ, ತಳ್ಳುಬಂಡಿ ಬಾಡಿಗೆ, ಸ್ಥಳದ ಜಕಾತಿ ಕಳೆದು ನಮಗೆ ದಿನಕ್ಕೆ 200 ರೂ.ದಿಂದ 300 ರೂ ಉಳಿತಾಯವಾಗುತ್ತದೆ ಎಂದು ಪಟ್ಟಣದ ವಿವಿದ ರಸ್ತೆಗಳಲ್ಲಿ ಹಣ್ಣುಗಳನ್ನು ಮಾರಾಟ ಮಾಡುವ ಮೈಲಾರಿ, ರಾಜೇಶ್, ಪ್ರಭು,ರಾಜಾ ಹಾಗೂ ಇತರರು ತಿಳಿಸುತ್ತಾರೆ.

ದೇಹ ನಿರ್ಜಲೀಕರಣಗೊಂಡು ಅಸ್ವಸ್ಥರಾಗುವವರಿಗೆ ಈ ಹಣ್ಣು ಸಹಕಾರಿ. ವಾಂತಿ ಶಮನಗೊಳಿಸುತ್ತದೆ. ಬಿಸಿಲಿನಿಂದ ತಲೆಸುತ್ತುವುದು, ಜೀರ್ಣಕ್ರಿಯೆ ಸಮಸ್ಯೆಗಳಿಗೂ ಈಹಣ್ಣುಸೇವಿಸಿಪರಿಹಾರಕಂಡುಕೊಳ್ಳಬಹುದು. ಇದರಿಂದ ದೇಹದ ಉಷ್ಣಾಂಶವನ್ನು ಕಡಿಮೆ ಮಾಡಿ, ತಂಪಾಗಿಸುತ್ತದೆ. ಹಳ್ಳಿ ಪ್ರದೇಶದಲ್ಲಿ ತಾಳೆಹಣ್ಣು ದೊರಕುವುದು. ಆದ್ದರಿಂದ ಪಟ್ಟಣಕ್ಕೆ ಆಗಮಿಸಿದಾಗ ತಾಳೆಹಣ್ಣು ಖರೀದಿಸಿ ಸೇವನೆ ಮಾಡುವುದನ್ನು ರೂಢಿಸಿಕೊಂಡಿದ್ದೇನೆ.

■ ಎ.ಎಸ್. ಯಲ್ಲಪ್ಪ,
। ಗ್ರಾಹಕ, ನಂ.10 ಮುದ್ದಾಪುರ.

ಬಲಶಾಲಿ ಟಗರು ಜಾಲ : ಕಾಳಗದಲ್ಲಿ ವೀರ ಮರಣ

ಕೂಡ್ಲಿಗಿ: ಪಟ್ಟಣದ ಮಹೇಶ ಇವರಿಗೆ ಸೇರಿದ ಜಾಲ ಹೆಸರಿನ ಟಗರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಟಗರು ಕಾಳಗ ದಲ್ಲಿ ಜಯಶಾಲಿಯಾಗಿ ಅನೇಕ ಪ್ರಶಸ್ತಿ, ಬಹುಮಾನಪಡೆದಿತ್ತು. ಬಾಗಲಕೋಟೆಯ ಹರಕಲ್ ಕಣದಲ್ಲಿ ನಡೆದ ಕಾಳಗದಲ್ಲಿ ವೀರ ಮರಣ ಹೊಂದಿ ಅಭಿಮಾನಿಗಳನ್ನು ಶೋಕಕ್ಕೀಡು ಮಾಡಿದೆ.

ಜಯಶಾಲಿ ಜಾಲ: ಸತತ ಗೆಲುವಿನ ರೂವಾರಿಯಾಗಿದ್ದ ಜಾಲ, ರಾಜ್ಯದ ಮೂಲೆ, ಮೂಲೆಯಲ್ಲಿಯೂ ಟಗರು ಕಾಳಗದಲ್ಲಿ ಪ್ರಥಮ ಬಹುಮಾನ ಪಡೆಯುತ್ತಿದ್ದನು. ಜಾಲ ತಾಣದಲ್ಲಿಯೂ ಜಾಲನ ಕಾಳಗ ಫಾಲೋ ಮಾಡುವ ವೀಕ್ಷಕರನ್ನು ಪಡೆದಿದ್ದಾನೆ. ಜಾಲ ಕಣಕ್ಕೆ ಇಳಿಯುತ್ತಿದ್ದಂತೆ ಎದುರಾಳಿಯ ಟಗರುಗಳಿಗೆ ನಡುಕ ಉಂಟಾಗುತ್ತಿತ್ತು. ಪ್ರಾಣ ಪಣಕ್ಕಿಟ್ಟು ಹೋರಾಡುವುದು ಜನ್ಮಜಾತವಾಗಿ ಒಲಿದು ಬಂದಿದೆ. ಆದ್ದರಿಂದ, ಕೇಕೆ ಹಾಕಿ ಆತನನ್ನು ಕಾಳಗದಲ್ಲಿ ಹುರುದುಂಬಿಸುವುದು ಸಾಧ್ಯವಾಗಿತ್ತು.

ಕೂಡ್ಲಿಗಿ ಪಟ್ಟಣದ ಜಾಲ ಟಗರಿನೊಂದಿಗೆ ಮಾಲೀಕ ಮಹೇಶ.

ರಾಷ್ಟ್ರಮಟ್ಟದ ಟಗರು ಕಾಳಗ: ಕೊನ್ನೂರು ಕಣದಲ್ಲಿ 8 ಹಲ್ಲಿನ 128 ಟಗರುಗಳ ಸೇರಿದ ಪಂಧ್ಯದಲ್ಲಿ ಪ್ರಥಮ ಬಹುಮಾನ 6ಲಕ್ಷದ ಕಾರು ಗೆದ್ದು ಬೀಗಿದ ಜಾಲ ರಾಜ್ಯದ ಹೆಸರನ್ನು ಗುಣಗಾನಮಾಡುವಂತೆ ಮಾಡಿದ್ದು ವಿಶೇಷವಾಗಿತ್ತು. ಕೀರ್ತಿ ಪತಾಕೆಯನ್ನು ಹಾರಿಸಿದ ಅವನಿಗೆ ರಾಜ್ಯ ಸೇರಿದಂತೆ ರಾಷ್ಟ್ರದಲ್ಲೂ ಅಪಾರ ಖ್ಯಾತಿಯನ್ನು ಹೊಂದುವಂತೆ ಮಾಡಿದ್ದು ಇತಿಹಾಸವಾಯಿತು. ಇದರಿಂದ ಟಗರು

ಕಾಳಗ ಎಲ್ಲಿಯೇ ನಡೆಯಲಿ ಮೊದಲು ಟಗರು–ಜಾಲ ಇದ್ದಾನೆ ಎಂಬುದು ಖಾತ್ರಿಯಾದ ಮೇಲೆ ಅಲ್ಲಿ ಅಪಾರ ಅಭಿಮಾನಿಗಳ ಬಳಗ ಸೇರುವಂತೆ ಮಾಡುತ್ತಿತ್ತು.

ಜಾಲ ಇನ್ನಿಲ್ಲ: ಅತಿದೊಡ್ಡ ಅಭಿಮಾನಿ ಪಡೆ ಹೊಂದಿದ್ದ ಜಾಲ ಟಗರು ಇನ್ನಿಲ್ಲವೆಂಬುದು ಅಭಿಮಾನಿಗಳಿಗೆ ತಡೆಯಲಾರದ ದುಃಖವಾಗಿದೆ. ಇಲ್ಲಿಯೂ ಕೂಡಾ ಸೋಲನ್ನು ಒಪ್ಪದ ಜಾಲ, ಗೆಲುವಿನ ನಗೆಯನ್ನು ಮಾಲೀಕನಿಗೆ ತಂದು ಕೊಟ್ಟು ಕಾಲನ ಕರೆಗೆ ನಡೆದಿರುವುದು ಮಾತ್ರ ಅತ್ಯಂತ ನೋವಿನ ಸಂಗತಿಯಾಗಿದೆ. ಈ ಸಾವು ನ್ಯಾಯವೇ! ಎನ್ನುವ ಕೊರಗು ಮಾತ್ರ ಅಭಿಮಾನಿಗಳನ್ನು ಕಾಡುತ್ತಿರುವುದು ನಡೆದಿದೆ.

ಮೇ 16ರವರೆಗೆ ವಿಸ್ತರಣೆ

ಬಳ್ಳಾರಿ: 2025–26ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಲಾಗಿದೆ.

ಪೋಷಕರು, ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಮನವಿಯ ಮೇರೆಗೆ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಹಿಂದೆ ನಿಗದಿಪಡಿಸಿದ್ದ ದಿನಾಂಕವನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ.

ಈ ಸೌಲಭ್ಯವು ಬಿ.ಆರ್ಕ್, ಎಂ.ಸಿ.ಎ, ಎಂ.ಸಿ.ಎಚ್ (ವೈದ್ಯಕೀಯ), ಎಂ.ಡಿ, ಎಂ.ಎಸ್ (ಮಾಸ್ಟರ್ ಆಫ್ ಸರ್ಜರಿ), ಎಂ.ಎಸ್, ಎಂ.ಎಸ್ಸಿ (ಅಲೈಡ್ ಸೈನ್ಸಸ್), ಎಂ.ಪಿ.ಟಿ (ಫಿಸಿಯೋಥೆರಪಿ), ಎಂ.ಎಚ್.ಎ, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್, ಎಂ.ಪಿ.ಎಚ್ (ಅಲೈಡ್ ಸೈನ್ಸಸ್), ಎಂ.ಎಸ್ಸಿ. ನರ್ಸಿಂಗ್, ಎಂ.ಎಸ್ಸಿ, ಎಂ.ಟೆಕ್, ಎಂಬಿಎ, ಎಂಬಿಎ ಫಿನ್‌ಟೆಕ್, ಎಂಬಿಎ (ಲಾಜಿಸ್ಟಿಕ್ ಮ್ಯಾನೇಜ್‌ಮೆಂಟ್), ಎಂಬಿಬಿಎಸ್, ಎಂಎಸ್ ಆಯುರ್ವೇದ ಎಂಡಿ (ಆಯುರ್ವೇದ), ಎಂಡಿ (ಹೋಮ್), ಎಂಡಿಎಸ್, ಪಿಜಿ ಡಿಪ್ಲೊಮಾ ಇನ್ ಡೆಂಟಲ್, ಫಾರ್ಮ್.ಡಿ (ಪೋಸ್ಟ್ ಬ್ಯಾಕಲೌರಿಯೇಟ್), ಎಂ.ಫಾರ್ಮ್, ಬಿ.ಇ, ಬಿ.ಟೆಕ್, ಬಿ.ಎಸ್ಸಿ(ಆನರ್ಸ್), ಬಿ.ವಿ.ಎಸ್ಸಿ ಮತ್ತು ಎಎಚ್, ಬಿಎಎಂಎಸ್ (ಆಯುರ್ವೇದ), ಬಿಎಚ್‌ಎಂಎಸ್ (ಹೋಮಿಯೋಪತಿ), ಇತರೆ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ.

ಮಾಹಿತಿಗಾಗಿ ಅಥವಾ ತಾಂತ್ರಿಕ ತೊಂದರೆಗಳಿದ್ದಲ್ಲಿ ಇಲಾಖಾ ಸಹಾಯವಾಣಿ ಮೊ.8050770004 ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ ಸಹಾಯವಾಣಿ 1902 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗ ಪರಂಪರೆಗೆ ವೇದಿಕೆ ಕಲ್ಪಿಸಿದ ಪ್ರಕಾಶ್

ಹೂವಿನಹಡಗಲಿ: ಆಧುನಿಕ ರಂಗ ಪರಂಪರೆಗೆ ವೇದಿಕೆ ಕಲ್ಪಿಸಿಕೊಟ್ಟವರು ದಿ. ಎಂಪಿ ಪ್ರಕಾಶ್ ಎಂದು ಕೃಷ್ಣದೇವರಾಯ ವಿಜಯನಗರ ವಿಶ್ವವಿದ್ಯಾಲಯದ ಕಲೆ ನಾಟಕ ವಿಭಾಗದ ಪ್ರಾಧ್ಯಾಪಕ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಹೇಳಿದರು.

ರಂಗಭಾರತಿ ಆಯೋಜಿಸಿರುವ ಬೇಸಿಗೆ ಚಿಣ್ಣರ ಮೇಳ 2026_ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಇಂದು ಸಾಂಸ್ಕೃತಿಕ ಕ್ಷೇತ್ರ ಬಡವಾಗುತ್ತಿದೆ. ಮಕ್ಕಳಿಗೆ ಸೂಕ್ಷ್ಮತೆ ಕಲಿಸಬೇಕಾಗಿದೆ, ಮಕ್ಕಳು ಬೀಳದಿದ್ದರೆ ಎದ್ದು ನಿಲ್ಲಲು ಸಾಧ್ಯವಿಲ್ಲ ಎಂದರು. ನಿರಂತರ ಕಲಿಕೆಯ ಮೂಲಕ ರಂಗಭೂಮಿಯನ್ನು ಮಕ್ಕಳಿಗೆ ಕಲಿಸುವ ಪ್ರಯತ್ನ ಮಾಡಬೇಕಾಗಿದೆ ಎಂದರು. ವಿಶ್ರಾಂತ ಪ್ರಾಚಾರ್ಯ ಪ್ರೊ.ಶಾಂತಮೂರ್ತಿ.ಬಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲಾವಿದರ ಪ್ರಪಂಚ ಭಿನ್ನವಾಗಿರುತ್ತದೆ ಪ್ರಕಾಶ್‌ರು ಹಾಕಿಕೊಟ್ಟಂತ ಪರಂಪರೆಯನ್ನ ಅವರ ಮಕ್ಕಳು ಮುಂದುವರಿಸಿದ್ದಾರೆ ಎಂದರು.

ಹೂವಿನಹಡಗಲಿಯ ರಂಗಭಾರತಿಆಯೋಜಿಸಿರುವ ಬೇಸಿಗೆ ಚಿಣ್ಣರ ಮೇಳ 2026 ಸಮಾರೋಪದಲ್ಲಿ ಕೃಷ್ಣದೇವರಾಯ ವಿಜಯನಗರ ವಿಶ್ವವಿದ್ಯಾಲಯದ ಕಲೆ ನಾಟಕ ವಿಭಾಗದ ಪ್ರಾಧ್ಯಾಪಕ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಮಾತನಾಡಿದರು.

ರಂಗಭಾರತಿ ಕಾರ್ಯಾಧ್ಯಕ್ಷೆ ಎಂ.ಪಿ.ಸುಮಾ ವಿಜಯ್ ಮಾತನಾಡಿ, ತಂದೆಯವರು ಮಾಡಿ ಹೋದ ಸಾಂಸ್ಕೃತಿಕ ಪರಂಪರೆ ಉಳಿಸುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಎಂದರು. ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಪಿ. ಎಂ..ಶಿವಪ್ರಕಾಶ್ ಮಾತನಾಡಿ 1964ರಲ್ಲಿ ಎಂಪಿ ಪ್ರಕಾಶ್ ಹುಟ್ಟುಹಾಕಿದ ರಂಗಭಾರತಿ ಇಂದು ಹೆಮ್ಮರವಾಗಿ ಬೆಳೆದಿದೆ ಅವರ ಕನಸುಗಳು ನನಸಾಗಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ರಾಜ್ಯ ರಾಷ್ಟ್ರಮಟ್ಟದ ಕಲಾವಿದರು, ಸಾಧಕರು, ಶ್ರೇಷ್ಠರನ್ನು ಹೂವಿನಹಡಗಲಿಗೆ ಕರೆತಂದು ಪರಿಚಯಿಸಿದ ಕೀರ್ತಿ ಪ್ರಕಾಶರಿಗೆ ಸಲ್ಲುತ್ತದೆ.

ಪ್ರಕಾಶ ಕನಸುಗಳಿಗೆ ನೀರೆರದು ಅವರ ಮಕ್ಕಳಾದ ಸುಮಾ ವಿಜಯ್, ವೀಣಾ ಮಾಂತೇಶ್‌ರವರು ಪರಂಪರೆ ಉಳಿಸುವ ಸಾರ್ಥಕ ಕಾರ್ಯ ಮಾಡುತ್ತಿದ್ದಾರೆ ಎಂದರು. ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ವಕೀಲರಾದ ಅಟವಾಳಗಿ ಕೊಟ್ರೇಶ್, ರಾಘವೇಂದ್ರ ರಾಯ್ಕರ್ ಉಪಸ್ಥಿತರಿದ್ದರು. ಅನುಷಾ ಪ್ರಾರ್ಥಿಸಿದರು. ಪ್ರಭು ಸೊಪ್ಪಿನ್ ಸ್ವಾಗತಿಸಿದರು. ಶ್ರೀಲತಾ ಕಾರ್ಯಕ್ರಮ ನಿರ್ವಹಿಸಿದರು. ಚಂದ್ರಪ್ಪ ವಂದಿಸಿದರು. ಪಂಚತಂತ್ರ ಕಥೆ ಆಧಾರಿತ ಅರಾವಳಿ ಹಾಗೂ ಹಿಡಿಂಬಾಸುತ ನಾಟಕಗಳನ್ನು ದಾನಪ್ಪ ತಳಗೇರಿ, ಆಸಿಫ್ ಹಡಗಲಿ ನಿರ್ದೇಶನದಲ್ಲಿ ಚಿಣ್ಣರು ಪ್ರದರ್ಶಿಸಿದರು. ಎಂ.ಪಿ.ಸುಮಾ ವಿಜಯ್ ನೃತ್ಯ ನಿರ್ದೇಶನದಲ್ಲಿ ವೈವಿಧ್ಯಮಯ ನೃತ್ಯ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಚಿಣ್ಣರ ಮೇಳದ ಶಿಬಿರಾರ್ಥಿಗಳಾದ ಮಕ್ಕಳು ಪ್ರದರ್ಶಿಸಿದ ನೃತ್ಯಗಳು ಜನಮನ ಸೆಳೆದವು.

ಕಲಾವಿದರಿಗೆ ಪ್ರೋತ್ಸಾಹ, ಉತ್ತೇಜನವೇ ಆಸರೆ

ತೆಕ್ಕಲಕೋಟೆ: ಗ್ರಾಮೀಣ ಪ್ರದೇಶಗಳಲ್ಲಿ ಕಲಾ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಧನ ಮಹತ್ವದ್ದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಹೇಳಿದರು.

ಸಿರಿಗೇರಿ ಗ್ರಾಮದ ಶಂಭುಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹೆಜ್ಜೆಗೆಜ್ಜೆ ಬಯಲಾಟ ಕಲಾ ಟ್ರಸ್ಟ್ (ಲಕ್ಷ್ಮೀನಗರ ಕ್ಯಾಂಪ್, ಮುದ್ದಾಟನೂರು) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಜಾನಪದ ಜಾಗರಣೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಲ್ಲಿರುವ ಅಭಿನಯ ಮತ್ತು ಕಲಾ ಪ್ರತಿಭೆಗಳನ್ನು ಗುರುತಿಸಿ ಬೆಳೆಸಲು ಇಂತಹ ಕಾರ್ಯಕ್ರಮಗಳು ನೆರವಾಗುತ್ತವೆ ಎಂದರು.

ಎಸ್.ಎಂ. ನಾಗರಾಜಸ್ವಾಮಿ ಮಾತನಾಡಿ, ಇಂದಿನ ಯುವಪೀಳಿಗೆಯಲ್ಲಿ ಸುಗಮ ಸಂಗೀತ, ಡೊಳ್ಳು ಕುಣಿತ, ಸಮೂಹ ನೃತ್ಯ, ರಂಗಗೀತೆ, ಕಿರು ನಾಟಕ, ಪೌರಾಣಿಕ ಬಯಲಾಟ, ವೀರಗಾಸೆ, ಯಕ್ಷಗಾನ ಸೇರಿದಂತೆ ವಿವಿಧ ಗ್ರಾಮೀಣ ಕಲೆಗಳ ಅಭ್ಯಾಸ ಮತ್ತು ಪ್ರದರ್ಶನಕ್ಕೆ ಕಲಾ ಟ್ರಸ್ಟ್‌ಗಳ ವೇದಿಕೆಗಳು ಸಹಕಾರಿಯಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಗಮ ಸಂಗೀತ, ರಂಗಗೀತೆ, ಡೊಳ್ಳು ಕುಣಿತ, ಸಮೂಹ ನೃತ್ಯ ಹಾಗೂ ಸಾಮಾಜಿಕ ನಾಟಕಗಳ ಪ್ರದರ್ಶನಗಳು ನೆರೆದಿದ್ದ ಪ್ರೇಕ್ಷಕರನ್ನು ಆಕರ್ಷಿಸಿ ಮೆಚ್ಚುಗೆ ಪಡೆದವು.

ಸಿ.ಎಂ. ನಾಗರಾಜಸ್ವಾಮಿ, ಎಸ್. ಎನ್. ವಿರುಪಾಕ್ಷಗೌಡ, ಎಸ್.ಎಂ. ಅಡಿವೆಯ್ಯಸ್ವಾಮಿ, ಹೂಗಾರ್ ಬಸವರಾಜ, ಬಿ. ಸೋಮಶೇಖರಪ್ಪ, ಕುಂಬಾರ್ ಬಸವರಾಜ, ವೈ. ಮಲ್ಲಿಕಾರ್ಜುನಗೌಡ, ಎಚ್. ತಿಪ್ಪೇಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು. ಕಲಾವಿದರಾದ ಶರಣಬಸವರಾಜ (ಸಿದ್ದರಾಂಪುರ), ತಬಲಾವಾದಕ ಉಮೇಶ್ (ಸಂಡೂರು), ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಬಿ. ವೀಣಾ ಕುಮಾರಿ (ಬಳ್ಳಾರಿ), ರಾಜಶೇಖರ್ (ಸಿರಿಗೇರಿ), ಜಯಣ್ಣ (ಬಳ್ಳಾರಿ), ಜೆ.ಎಂ. ವಿಜಯಕುಮಾರ್ ಉಪಸ್ಥಿತರಿದ್ದರು.

ಸಿರಿಗೇರಿಯಲ್ಲಿ ನಡೆದ ಜಾನಪದ ಜಾಗರಣೆ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಉದ್ಘಾಟಿಸಿದರು.

ಸಮ ಸಮಾಜದ ಕನಸು ಇನ್ನೂ ನನಸಾಗಿಲ್ಲ

ಹೊಸಪೇಟೆ: ಮಹಿಳೆಯರಿಗೆ ಸಾಮಾಜಿಕ, ರಾಜಕೀಯ ಹಕ್ಕುಗಳನ್ನು ಒದಗಿಸುವಲ್ಲಿ ಡಾ. ಅಂಬೇಡ್ಕರ್ ಪಾತ್ರ ಮಹತ್ವದ್ದು. ಡಾ. ಜಗಜೀವನರಾಮ್‌ರು ದೇಶದ ಆಹಾರ ಕೊರತೆಯ ಸಂದರ್ಭದಲ್ಲಿ ಸಮರ್ಥ ಆಡಳಿತಗಾರರಾಗಿ ದೇಶವನ್ನು ಯಶಸ್ವಿಯಾಗಿ ನಿಭಾಯಿಸಿದ ಮಹಾನ್ ವ್ಯಕ್ತಿ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಾವಳ್ಳಿ ಶಂಕರ್ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯ ದಲಿತ ಸಂಸ್ಕೃತಿ ಅಧ್ಯಯನ ಪೀಠವು ಭುವನ ವಿಜಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್, ಡಾ. ಬಾಬು ಜಗಜೀವನರಾಮ್ ಜಯಂತಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು 11 ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಂಬೇಡ್ಕರ್‌ರು ಭೂಮಿಯು ಸಮಾನವಾಗಿ ಹಂಚಿಕೆ ಆಗಬೇಕು, ಕೈಗಾರಿಕೆಗಳ ಮೇಲೆ ಪ್ರಭುತ್ವದ ಸ್ವಾಧೀನ ಹಾಗೂ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಕನಸು ಕಂಡಿದ್ದರು. ಆದರೆ ಆ ಕನಸುಗಳು ಇಂದಿಗೂ ನನಸಾಗಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ಹಂಪಿ ಕನ್ನಡ ವಿವಿಯ ಭುವನ ವಿಜಯ ಸಭಾಂಗಣದಲ್ಲಿ ನಡೆದ ಡಾ. ಅಂಬೇಡ್ಕರ್, ಡಾ. ಜಗಜೀವನರಾಮ್ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಕುರಿತು 11 ಕೃತಿ ಬಿಡುಗಡೆಗೊಳಿಸಲಾಯಿತು.

ಡಾ. ಜಾಣಗೆರೆ ವೆಂಕಟರಾಮಯ್ಯ ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿ, ಮಹಾನ್ ವ್ಯಕ್ತಿಗಳ ತತ್ವಗಳನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಶೋಷಿತ ಹಾಗೂ ದುರ್ಬಲ ಸಮುದಾಯಗಳು ಸಮಾಜದ ಮುನ್ನೆಲೆಗೆ ಬರಲು ಸಹಕಾರಿ ಆಗುವ ಸಂವಿಧಾನ ರಚಿಸಿ ದೇಶಕ್ಕೆ ನೀಡಿದ ಮಹಾನ್ ವ್ಯಕ್ತಿ. ದೇಶದ ಮಹಿಳೆಯರಿಗೆ ಸಮಾನತೆ ದೊರೆಯಬೇಕು ಮತ್ತು ಅವರು ರಾಜಕೀಯವಾಗಿ ಮುನ್ನೆಲೆಗೆ ಬರಬೇಕು ಎಂಬ ಅಂಬೇಡ್ಕರ್ ಕನಸು ಇಂದಿಗೂ ನನಸಾಗಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಭಾರತದ ಬದಲಾವಣೆಗೆ ಈ ಮಹಾನ್ ವ್ಯಕ್ತಿಗಳು ತಮ್ಮ ಸಂಪೂರ್ಣ ಜೀವನವನ್ನೇ ಸಮರ್ಪಿಸಿ ಕೊಂಡಿದ್ದಾರೆ. ಇಂತಹ ಮಹನೀಯರ ಕೊಡುಗೆಗಳನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದ್ದು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವೆಂದು ಅಭಿಪ್ರಾಯಪಟ್ಟರು. ಅಂಬೇಡ್ಕರ್ ಅವರ ಕುರಿತು 11 ಕೃತಿಗಳನ್ನು ಪ್ರಸಾರಾಂಗದಿಂದ ಪ್ರಕಟಿಸುವ ಮೂಲಕ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಪ್ರತಿದಿನವೂ ಇಂತಹ ಮಹಾನ್ ವ್ಯಕ್ತಿಗಳನ್ನು ಸ್ಮರಿಸಿಕೊಳ್ಳಬೇಕು ಮತ್ತು ಅವರ ಚಿಂತನೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕು ಎಂದರು.

ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು..

ಕುಲಸಚಿವ ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಸಾರಾಂಗದ ನಿರ್ದೇಶಕ ಡಾ. ಪಿ. ಮಹಾದೇವಯ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಬಣ್ಣದಮನೆ ಸೋಮಶೇಖರ್, ಶ್ರೇಯಸ್ ವಿ.ಎಸ್, ಡಾ. ನರಸಿಂಹರಾಜು ಹೆಚ್.ಸಿ, ಡಾ. ಮಣಿಕಂಠ ಅಂಗಳ, ಅಕ್ಕಿ ಮಲ್ಲಿಕಾರ್ಜುನ ಇದ್ದರು.

ಪೇಟೆ ಪ್ರಪಂಚ

ಹುಬ್ಬಳ್ಳಿ	
ಕಡಲೆಕಾಳು	2211–5799
ಮೆಕ್ಕೆಜೋಳ	1851–1921
ಗೋಧಿ	2407–2559
ಕಲಘಟಗಿ	
ಮೆಕ್ಕೆಜೋಳ	1665–1850
ಸೋಯಾಬಿನ್	5250–5550
ಗಂಗಾವತಿ	
ಕಡಲೆಕಾಳು	5400–5400
ಭತ್ತ ಕಾವೇರಿ ಸೋನ	2187–2440
ಭತ್ತ ಆರ್‌ಎನ್‌ಆರ್ ಹೊಸ	2450–2900
ಭತ್ತ ಹಳೇ ಸೋನ	3100–3200
ನುಚ್ಚಕ್ಕಿ	2238–2322
ಅಕ್ಕಿ	2350–2700
ಗದಗ	
ಕಡಲೆಕಾಳು	2412–5710
ಉದ್ದಿನಕಾಳು	5714–5714
ಹತ್ತಿ	7200–7200
ಅಲಸಂದೆ	3412–6056
ಹೆಸರುಕಾಳು	2007–8015
ನೆಲಗಡಲೆ (ಶೇಂಗಾ)	4911–6864
ಹುರುಳಿ ಕಾಳು	3798–3798
ಜೋಳ	1633–4521
ಮೆಕ್ಕೆಜೋಳ	1212–1602
ನವಣೆ	2909–2909
ಕುಸುಬೆ	3900–5326
ಸೂರ್ಯ ಕಾಂತಿ	5869–6619
ತೊಗರಿ	4044–5314
ಗೋಧಿ	1802–6525
ಲಕ್ಷ್ಮೇಶ್ವರ	
ಅಲಸಂದೆ ಕಾಳು	2060–5898
ಕಡಲೆಕಾಳು	2560–5459
ನೆಲಗಡಲೆ (ಶೇಂಗಾ)	2265–8310
ಜೋಳ	1760–3500
ಮೆಕ್ಕೆಜೋಳ	1779–1779
ಕುಸುಬೆ	5353–5625
ಸೂರ್ಯ ಕಾಂತಿ	4600–6139

ಮುಂಬೈ ಪೇಟೆ

ರಾತ್ರಿ 10ರ ಧಾರಣೆ
07–5–2026

ಎಣ್ಣೆ ಬೀಜಗಳು (100 ಕೆಜಿ)	
ಶೇಂಗಾ ಜಾವಾ70/80	11000-11200
ಶೇಂಗಾ ಜಾವಾ80/90	10400-10500
ಖಾದ್ಯ ತೈಲಗಳು (10 ಕೆಜಿ)	
ಶೇಂಗಾ ಎಣ್ಣೆ ಕಚ್ಚಾ	1620
ಸೂರ್ಯಕಾಂತಿ ಎಸ್	1545
ಸೂರ್ಯಕಾಂತಿ ಎಕ್ಸ್(ರಿ)	1640
ಬಿಳಿಕೊಬ್ಬರಿ	3300
ಆರ್‌ಬಿಡಿ ತಾಳೆಎಣ್ಣೆ	1480
ಸೋಯಾ ರಿಫೈನ್ಡ್	1510
ಹಿಂಡಿಗಳು (ಟನ್)	
ಶೇಂಗಾ	39500
ಸೂರ್ಯಕಾಂತಿ	30000
ಸೋಯಾ	51700

ಷೇರುಪೇಟೆ ವಹಿವಾಟು

07–05–2026

ADANIENT	2,520.00	COALINDIA	465.95	JIOFIN	251.00	SBILIFE	1,875.00
ADANIPORS	1,735.00	DRREDDY	1,306.50	JSWSTEEL	1,280.40	SBIN	1,092.90
APOLLOHOSP	7,845.00	EICHERMOT	7,342.00	KOTAKBANK	380.45	SHRIRAMFIN	1,013.00
ASIANPAINT	2,536.00	ETERNAL	257.60	KTK BANK	265.05	SKF INDIA	2,155.00
AXISBANK	1,296.00	GRASIM	2,955.20	LT	4,023.00	SUNPHARMA	1,833.00
BAJAJ-AUTO	10,590.00	HCLTECH	1,182.40	M&M	3,366.00	TATACONSUM	1,156.40
BAJAJFINSV	1,829.00	HDFCBANK	795.55	MARUTI	13,770.00	TATASTEEL	217.10
BAJFINANCE	973.60	HDFCLIFE	628.00	MAXHEALTH	1,013.60	TCS	2,403.00
BEL	440.90	HINDALCO	1,057.00	NESTLEIND	1,475.50	TECHM	1,450.00
BHARTIARTL	1,829.60	HINDUNILVR	2,273.00	NTPC	399.90	TITAN	4,309.00
CIPLA	1,361.00	ICICIBANK	1,279.00	ONGC	283.60	TMPV	358.60
		INDIGO	4,520.00	POWERGRID	314.00	TRENT	4,296.00
		INFY	1,165.90	RELIANCE	1,435.50	ULTRACEMCO	12,121.00
		ITC	307.55	RENUKA SUGAR	28.62	WIPRO	197.39

ಟೈಗರ್

ಶಾಸಕರ ಉಚಿತ ಟಿಕೆಟ್ ಬೇಡಿಕೆಯಿಂದ್ಲೇ ಪಂದ್ಯ ಶಿಫ್ಟ್

ಮುಂಬೈ: 2026ರ ಐಪಿಎಲ್ ಫೈನಲ್ ಪಂದ್ಯವನ್ನು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂಗೆ ಸ್ಥಳಾಂತರಿಸಲು ಹೆಚ್ಚಾದ ಟಿಕೆಟ್‌ಗಳ ಬೇಡಿಕೆಯೇ ಕಾರಣ ಎಂದು ಬಿಸಿಸಿಐ ಕಾರ್ಯದರ್ಶಿ ದೇವಾಜಿತ್ ಸೈಕಿಯಾ ತಿಳಿಸಿದ್ದಾರೆ. ನಿಗದಿಯಂತೆ ಸ್ಟೇಡಿಯಂನ ಶೇ. 15ರಷ್ಟು ಉಚಿತ ಟಿಕೆಟ್‌ಗಳನ್ನು ನೀಡುತ್ತೇವೆ. ಆದರೆ, ಫೈನಲ್ ಪಂದ್ಯಕ್ಕೆ ಭಾರಿ ಟಿಕೆಟ್‌ಗಳನ್ನು ಉಚಿತವಾಗಿ ನೀಡಲು ಬೇಡಿಕೆ ಬಂತು. ಹೀಗಾಗಿ, ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಗೊಳಿಸಲಾಗಿದೆ ಎಂದು ಸೈಕಿಯಾ ತಿಳಿಸಿದ್ದಾರೆ.

ವಿರಾಟ್ ಸಹ ಆಟಗಾರ 36ರ ಅಮನ್‌ಪ್ರೀತ್ ಗಿಲ್ ನಿಧನ



ಮೊಹಾಲಿ: ಖ್ಯಾತ ಕ್ರಿಕೆಟಿಗ ವಿರಾಟ್ ಕೊಹ್ಲಿಯ ಮಾಜಿ ಸಹ ಆಟಗಾರ ಅಮನ್‌ಪ್ರೀತ್ ಸಿಂಗ್ ಗಿಲ್ (36) ಅನಾರೋಗ್ಯದಿಂದ ನಿಧನರಾಗಿದ್ದಾರೆ. 2007ರ ಭಾರತದ ಅಂಡರ್–19 ತಂಡದಲ್ಲಿ ಕೊಹ್ಲಿ ಮತ್ತು ರವೀಂದ್ರ ಜಡೇಜಾ ಅವರೊಂದಿಗೆ ಆಡಿದ್ದ ಈ ವೇಗದ ಬೌಲರ್, ಪಂಜಾಬ್ ಪರ ದೇಶೀಯ ಕ್ರಿಕೆಟ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದರು. ಅವರ ನಿಧನಕ್ಕೆ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ತೀವ್ರ ಸಂತಾಪ ಸೂಚಿಸಿದ್ದಾರೆ. "ನನ್ನ ಆತ್ಮೀಯ ಸ್ನೇಹಿತ ಮತ್ತು ಪ್ರತಿಭಾವಂತ ಕ್ರಿಕೆಟಿಗನನ್ನು ಕಳೆದುಕೊಂಡಿರುವುದು ನೋವು ತಂದಿದೆ" ಎಂದು ಯುವಿ ಕಂಬನಿ ಮಿಡಿದಿದ್ದಾರೆ.

ಕ್ರಿಕೆಟರ್ ಸೂರ್ಯಕುಮಾರ್ ದಂಪತಿಗೆ ಹೆಣ್ಣು ಮಗು ಜನನ

ಮುಂಬೈ: ಖ್ಯಾತ ಕ್ರಿಕೆಟಿಗ ಸೂರ್ಯಕುಮಾರ್ ಯಾದವ್ ಮತ್ತು ದೆವಿಶಾ ಶೆಟ್ಟಿ ದಂಪತಿ ಇಂದು ಹೆಣ್ಣು ಮಗುವಿನ ಆಗಮನದ ಖುಷಿಯಲ್ಲಿದ್ದಾರೆ. ಕಳೆದ ಒಂಬತ್ತು ತಿಂಗಳಿನಿಂದ ಈ ವಿಷಯವನ್ನು ರಹಸ್ಯವಾಗಿಟ್ಟಿದ್ದ ದಂಪತಿ, ಮೇ 7ರಂದು ಸಾಮಾಜಿಕ ಜಾಲತಾಣದಲ್ಲಿ ಮಗುವಿನ ಫೋಟೋ ಹಂಚಿಕೊಳ್ಳುವ ಮೂಲಕ ಈ ಸಿಹಿ ಸುದ್ದಿಯನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ. ಸದ್ಯ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಮುನ್ನಡೆಸುತ್ತಿರುವ ಸೂರ್ಯಕುಮಾರ್, ಮಗುವಿನೊಂದಿಗೆ ಸಮಯ ಕಳೆಯಲು ಮೇ 10ರಂದು ಆರ್‌ಸಿಬಿ ವಿರುದ್ಧ ನಡೆಯಲಿರುವ ಪಂದ್ಯದಿಂದ ವಿರಾಮ ಪಡೆಯುವ ಸಾಧ್ಯತೆಯಿದೆ.

ಮಳೆಯ ಮಧ್ಯೆ ಅಬ್ಬರಿಸಿದ ಲಖನೌ

ಎಲ್‌ಎಸ್‌ಜಿ 209/3 ರನ್ । ಮಾರ್ಷ್ ಶತಕ । ಪಂದ್ಯ ರದ್ದಾದ್ರೆ ಆರ್‌ಸಿಬಿಗೆ ಲಾಭ

ಲಖನೌ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 19ನೇ ಆವೃತ್ತಿಯ ಯಾವ ಪಂದ್ಯಕ್ಕೂ ಮಳೆರಾಯ ಈ ರೀತಿ ಸಮಸ್ಯೆ ನೀಡಿರಲಿಲ್ಲ. ಗುರುವಾರ ನಡೆದ ಲಖನೌ ಸೂಪರ್ ಜೈಂಟ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯಕ್ಕೆ ಮಳೆ ಪದೇ ಪದೆ ಅಡ್ಡಿ ಪಡಿಸಿದ್ದರಿಂದ, 3 ಬಾರಿ ಪಂದ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಅಳಿವು ಉಳಿವಿನ ಪರಿಸ್ಥಿತಿಯಲ್ಲಿದ್ದ ಅತಿಥೇಯರಿಗೆ ಪ್ರತಿ ಬಾರಿ ಮಳೆ ಬಂದಾಗಲು ಹೃದಯ ಬಡಿತ ಹೆಚ್ಚಾಗಿತ್ತು.ಆದ್ರೆ, ಲಖನೌ ಪರ ಮಿಚೆಲ್ ಮಾರ್ಷ್ ಶತಕ, ಪೂರನ್‌ನ ಸ್ಫೋಟಕ ಬ್ಯಾಟಿಂಗ್‌ಗೆ 209 ರನ್‌ಗಳಿಸಿತು.

ಟಾಸ್ ಗೆದ್ದ ಆರ್‌ಸಿಬಿ ನಾಯಕ ಚೇಸಿಂಗ್ ಮನಸ್ಸು ಮಾಡಿ ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲೇ ಪಿಚ್ ಬೌಲರ್‌ಗಳಿಗೆ ನೆರವಾಗಲಿದೆ ಎಂದು ಅಂದಾಜಿಸಲಾಗಿದ್ದ ಏಕಾನ ಸ್ಟೇಡಿಯಂನಲ್ಲಿ ಮಿಚೆಲ್ ಮಾರ್ಷ್‌ರ ಬ್ಯಾಟಿಂಗ್ ಅಬ್ಬರ ಜೋರಾಗಿತ್ತು. ಆರಂಭದಿಂದಲೇ ಮಿಚೆಲ್ ಮಾರ್ಷ್ ಬೌಂಡರಿ–ಸಿಕ್ಸರ್‌ಗಳನ್ನು ಸುರಿಸುತ್ತಾ ಸಾಗಿದರು. ಆದ್ರೆ, ಮೊದಲ ಓವರ್ ಮುಗಿದ ಬಳಿಕ ಮಳೆ ಮೊದಲ ಬಾರಿಗೆ ಆಟಕ್ಕೆ ಅಡ್ಡಿ ಪಡಿಸಿತು. ಆದ್ರೆ, ಕೇವಲ ಕೆಲ ನಿಮಿಷಗಳಲ್ಲೇ ಪಂದ್ಯವನ್ನು ಪುನರ್ ಆರಂಭಿಸಲಾಯಿತು. ಆರಂಭಿಕ ಆಟಗಾರ ಅರ್ಶಿಣ್ ಕುಲಕರ್ಣಿ ಮಾತ್ರ ಸಮಾಧಾನಕರ ಬ್ಯಾಟಿಂಗ್ ನಡೆಸಿದರೆ, ಮಾರ್ಷ್ ವೇಗವಾಗಿಯೇ ಅರ್ಧಶತಕ ಪೂರೈಸಿದರು. ಕೇವಲ 20 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ ಮಾರ್ಷ್ ತಂಡಕ್ಕೆ ಬೃಹತ್ ಮೊತ್ತ ತಂದುಕೊಡುವ ಕೆಲಸ ಮಾಡಿದರು.

ಇದರ ಮಧ್ಯೆ ಇನ್ನಿಂಗ್ಸ್‌ನ 9ನೇ ಓವರ್ ಬಳಿಕವೂ ಆಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇದಾದ ಬಳಿಕ ಮೈದಾನಕ್ಕಿಳಿದ ಮಾರ್ಷ್ ಆರ್‌ಸಿಬಿ ಬೌಲರ್‌ಗಳನ್ನು ಬೆಂಡಿತ್ತಿದ್ರೆ, ಕುಲಕರ್ಣಿ 17 ರನ್‌ಗಳಿಸಿ ಹೊರ ನಡೆದರು.

ನಂತರ ಕ್ರೀಸ್‌ಗಿಳಿದ ನಿಕೋಲಸ್ ಪೂರನ್ ಕೂಡ 4 ಬೌಂಡರಿ, 1 ಸಿಕ್ಸರ್‌ನೊಂದಿಗೆ 38 ರನ್‌ಗಳಿಸಿದರು.ಆದ್ರೆ, ಮಾರ್ಷ್ ಮಾತ್ರ 49 ಎಸೆತಗಳಲ್ಲಿ ಶತಕ ಪೂರೈಸಿದರು. ಈ ವೇಳೆ ಮಳೆಯಿಂದಾಗಿ ಪಂದ್ಯವನ್ನು ತಲಾ 19 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು.

ಸದ್ಯ ತವರಿನ ಅಭಿಮಾನಿಗಳ ಎದುರು ಗೆಲ್ಲಬೇಕಾದ ಒತ್ತಡ ಒಂದೆಡೆಯಾದರೆ, ಪ್ಲೇಆಫ್ ರೇಸ್‌ನಲ್ಲಿ ಉಳಿದುಕೊಳ್ಳಲು ರಿಶಬ್ ಪಂತ್ ಪಡೆಗೆ ಇರುವುದು ಇದೊಂದೇ ಅವಕಾಶ. ಹಾಗಾಗಿ, ಆರ್‌ಸಿಬಿ ಎದುರಿನ ಪಂದ್ಯವನ್ನು ಗೆಲ್ಲಲು ಲಖನೌ ಬೃಹತ್ ಮೊತ್ತ ಪೇರಿಸಲು ಹಪಹಪಿಸುತ್ತಿದ್ದು, ಮಳೆ ಮಾತ್ರ ತನ್ನ ಆಟವನ್ನು ಪ್ರದರ್ಶಿಸಿ ಲಖನೌ ಆತಂಕವನ್ನು ಹೆಚ್ಚಿಸಿದೆ. ಒಮ್ಮೆ ಮಳೆಯಿಂದ ಪಂದ್ಯ ರದ್ದಾದ್ರೆ, ಅಧಿಕೃತವಾಗಿ ಎಲ್‌ಎಸ್‌ಜಿ ಟೂರ್ನಿಯಿಂದ ಹೊರ ಬೀಳಲಿದ್ದು, ಆರ್‌ಸಿಬಿ ಒಂದು ಅಂಕ ಪಡೆದು ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಲಿದೆ.

ಸಂಕ್ಷಿಪ್ತ ಸ್ಕೋರ್: ಲಖನೌ ಸೂಪರ್ ಜೈಂಟ್ಸ್ 3 ವಿಕೆಟ್‌ಗೆ 209 ರನ್. ಮಿಚೆಲ್ ಮಾರ್ಷ್ 111(56).

ಇಂದಿನ ಪಂದ್ಯ	
ಡೆಲ್ಲಿ ಕ್ಯಾಪಿಟಲ್ಸ್ – ಕೆಕೆಆರ್	ರಾತ್ರಿ 7.30ಕ್ಕೆ

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಹೈದ್ರಾಬಾದ್	11	07	04	14
02	ಪಂಜಾಬ್	10	06	03	13
03	ಆರ್‌ಸಿಬಿ	09	06	03	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	10	05	05	10
07	ಡೆಲ್ಲಿ	10	04	06	08
08	ಕೆಕೆಆರ್	09	03	05	07
09	ಮುಂಬೈ	10	03	07	06
10	ಲಖನೌ	09	02	07	04

ತುಮಕೂರು ಐಟಿಎಫ್ ಟೆನಿಸ್: ಕ್ವಾ. ಫೈನಲ್‌ಗೆ ಅಗ್ರ ಆಟಗಾರರು

ತುಮಕೂರು: ಇಲ್ಲಿನ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ 35 ತುಮಕೂರು ಓಪನ್ ಟೆನಿಸ್ ಪಂದ್ಯಾವಳಿಯಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿಯರು ಅಬ್ಬರದ ಪ್ರದರ್ಶನ ನೀಡುವ ಮೂಲಕ ಕ್ವಾರ್ಟರ್ ಫೈನಲ್ ಹಂತಕ್ಕೆ ಪ್ರವೇಶಿಸಿದ್ದಾರೆ. ಗುರುವಾರ ನಡೆದ ರೋಚಕ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಜಸ್ಟಿನಾ ಮಿಕುಲ್ಸ್ಕೈಟ್ ಅವರು ಪೋಲೆಂಡ್‌ನ ಜುಜಾನ್ನಾ ಕೊಲೊನಸ್ ವಿರುದ್ಧ 0–6, 6–3, 6–1 ಸೆಟ್‌ಗಳಿಂದ ಭರ್ಜರಿ ಜಯ ಸಾಧಿಸಿದರು. ಮೊದಲ ಸೆಟ್‌ನಲ್ಲಿ ಸೋತರೂ ಅದ್ಭುತವಾಗಿ ಪುಟಿದೆದ್ದ ಜಸ್ಟಿನಾ ಗೆಲುವಿನ ನಗೆ ಬೀರಿದರು.

ಭಾರತದ ಪರ ಭರವಸೆಯ ಆಟಗಾರ್ತಿಯರಾದ ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ ತಮ್ಮ ಪಾರಮ್ಯ ಮೆರೆದರು. ವೈದೇಹಿ ಅವರು ಮಧುರಿಮಾ ಸಾವಂತ್ ವಿರುದ್ಧ 6–2, 6–2 ಅಂತರದಲ್ಲಿ ಗೆದ್ದರೆ, ಝೀಲ್ ದೇಸಾಯಿ ಅವರು ಜೆನ್ನಿಫರ್ ಲುಯಿಕಾಮ್ ವಿರುದ್ಧ 6–2, 6–3 ಸೆಟ್‌ಗಳಿಂದ ಗೆದ್ದು ಎಂಟರ ಘಟ್ಟ ತಲುಪಿದರು.

ಜೂ.4ರಿಂದ ಯೋಗಾಸನ ಚಾಂಪಿಯನ್‌ಶಿಪ್ ಶುರು

ಅಹಮದಾಬಾದ್: ಭಾರತವು 2026ರ ಜೂನ್ 4 ರಿಂದ 8ರವರೆಗೆ ಗುಜರಾತ್‌ನ ಅಹಮದಾಬಾದ್‌ನಲ್ಲಿರುವ 'ಟ್ರಾನ್ಸ್‌ಸ್ಟೇಡಿಯಾ'ದಲ್ಲಿ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್‌ನ ಉದ್ಘಾಟನಾ ಆವೃತ್ತಿಯನ್ನು ಆಯೋಜಿಸಲಿದೆ. ಈ ಪ್ರತಿಷ್ಠಿತ ಕೂಟದಲ್ಲಿ ವಿಶ್ವದ 40ಕ್ಕೂ ಹೆಚ್ಚು ದೇಶಗಳು ಭಾಗವಹಿಸಲಿವೆ.

ವಿಶ್ವದ 40 ದೇಶಗಳು ಭಾಗಿ

'ವಿಶ್ವ ಯೋಗಾಸನ' ಸಂಸ್ಥೆಯ ಆಶ್ರಯದಲ್ಲಿ ಈ ಚಾಂಪಿಯನ್‌ಶಿಪ್ ನಡೆಯಲಿದ್ದು, 'ಯೋಗಾಸನ ಭಾರತ್' ಇದರ ಆತಿಥ್ಯ ವಹಿಸಿದೆ. ಇದು ಜಗತ್ತಿನಾದ್ಯಂತದ ಪ್ರಮುಖ ಕ್ರೀಡಾಪಟುಗಳನ್ನು ಒಂದು ವೇದಿಕೆಗೆ ತರಲಿದ್ದು, ಯೋಗಾಸನವನ್ನು ಒಂದು ಸ್ಪರ್ಧಾತ್ಮಕ ಕ್ರೀಡೆಯಾಗಿ ಉತ್ತೇಜಿಸುವಲ್ಲಿ ಭಾರತದ ಮುಂಚೂಣಿ ಸ್ಥಾನವನ್ನು ಮತ್ತಷ್ಟು ಬಲಪಡಿಸಲಿದೆ.

ಈ ಕ್ರೀಡಾಕೂಟದ ಸಿದ್ಧತೆಯ ಭಾಗವಾಗಿ, ಭಾರತೀಯ ರಾಷ್ಟ್ರೀಯ ಯೋಗಾಸನ ತಂಡದ ಅಧಿಕೃತ ಆಯ್ಕೆ ಪ್ರಕ್ರಿಯೆಯು ಮೇ 1 ಮತ್ತು 2 ರಂದು ಹರಿಯಾಣದ ಸೋನೆಪತ್‌ನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ಕೇಂದ್ರದಲ್ಲಿ ಯಶಸ್ವಿಯಾಗಿ ನಡೆಯಿತು. ಕ್ರೀಡಾಪಟುಗಳು ಸಾಂಪ್ರದಾಯಿಕ, ಕಲಾತ್ಮಕ, ಲಯಬದ್ಧ ಮತ್ತು ಅಥ್ಲೆಟಿಕ್ ಯೋಗಾಸನ ವಿಭಾಗಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಸೆಪಕ್‌ಟಕ್ರಾ ವಿಶ್ವಕಪ್‌ಗೆ ಮಂಜು ನೇಮಕ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿವೃತ್ತ ಉದ್ಯೋಗಿ, ಇಲ್ಲಿಯ ಮೊರಾರ್ಜಿ ನಗರದ ನಿವಾಸಿ ಪಿ. ಮಂಜುನಾಥ ಇದೇ ತಿಂಗಳು ದಿನಾಂಕ 16 ರಿಂದ 23ರ ವರೆಗೆ ಕೌಲಾಲಂಪುರದಲ್ಲಿ ನಡೆಯಲಿರುವ ಸೆಪಕ್‌ಟಕ್ರಾ ವಿಶ್ವಕಪ್‌ನಲ್ಲಿ ಅಂತಾರಾಷ್ಟ್ರೀಯ ತಾಂತ್ರಿಕ ಅಧಿಕಾರಿ(ಐಟಿಓ)ಯಾಗಿ ಕಾರ್ಯ ನಿರ್ವಹಿಸಲು ಆಯ್ಕೆಯಾಗಿದ್ದಾರೆ.

ಇದೇ ಮೊದಲ ಬಾರಿ ವಿಶ್ವಕಪ್‌ವೊಂದರಲ್ಲಿ ಕಾರ್ಯ ನಿರ್ವಹಿಸಲು ಆಯ್ಕೆಯಾಗಿರುವ 63 ವರ್ಷ ವಯಸ್ಸಿನ ಮಂಜುನಾಥ 'ಸಂಯುಕ್ತ ಕರ್ನಾಟಕ'ದೊಡನೆ ಮಾತನಾಡಿ ಸಂತಸ ಹಂಚಿಕೊಂಡರಲ್ಲದೇ ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲೂ ತಾಂತ್ರಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಅವಕಾಶ ಪಡೆದುಕೊಳ್ಳುವ ಭರವಸೆಯನ್ನೂ ವ್ಯಕ್ತಪಡಿಸಿದರು.

ಜನವರಿಯಲ್ಲಿ ಬಾರ್ಡರ್-ಗವಾಸ್ಕರ್ ಟ್ರೋಫಿ ಯುವ ಕ್ರಿಕೆಟಿಗರಿಗೆ ವಿಶೇಷ ತರಬೇತಿ

ಬೆಂಗಳೂರು: ಮುಂಬರುವ 2027ರ ಜನವರಿಯಲ್ಲಿ ಆರಂಭಗೊಳ್ಳಲಿರುವ ಪ್ರತಿಷ್ಠಿತ ಬಾರ್ಡರ್–ಗವಾಸ್ಕರ್ ಟ್ರೋಫಿ ಸರಣಿಯನ್ನು ಗಮನದಲ್ಲಿಟ್ಟುಕೊಂಡು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭವಿಷ್ಯದ ಟೆಸ್ಟ್ ತಾರೆಗಳಿಗಾಗಿ ಜೂನ್ ತಿಂಗಳಲ್ಲಿ ವಿಶೇಷ ಶಿಬಿರವನ್ನು ಆಯೋಜಿಸಿದೆ. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಯಲಿರುವ ಈ ಶಿಬಿರಕ್ಕೆ ದೇಶದ 64 ಪ್ರತಿಭಾವಂತ ಯುವ ಆಟಗಾರರನ್ನು ಆಯ್ಕೆ ಮಾಡಲಾಗಿದೆ.

ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಮಾರ್ಗದರ್ಶನದಲ್ಲಿ ಈ ಆಟಗಾರರಿಗೆ ಕೆಂಪು ಚೆಂಡಿನ ಕ್ರಿಕೆಟ್‌ನ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗುವುದು. ಈ ಶಿಬಿರದ ಬೆನ್ನಲ್ಲೇ, 'ಭಾರತ ಎ' ತಂಡವು ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ ಎರಡು ಅನಧಿಕೃತ ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಆಸ್ಟ್ರೇಲಿಯಾದ ಪಿಚ್‌ಗಳಿಗೆ ಹೊಂದಿಕೊಳ್ಳಲು ಮತ್ತು ಹಿರಿಯ ತಂಡಕ್ಕೆ ಬಲಿಷ್ಠ ಮೀಸಲು ಆಟಗಾರರನ್ನು ಸಿದ್ಧಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆಯುಷ್ ಮ್ಹಾತ್ರೆ ಮತ್ತು ವೈಭವ್ ಸೂರ್ಯವಂಶಿ ಅವರಂತಹ ಉದಯೋನ್ಮುಖ ಆಟಗಾರರು ಈ ಶಿಬಿರದ ಪ್ರಮುಖ ಆಕರ್ಷಣೆಯಾಗಿದ್ದಾರೆ.

CMYK